ಜನವರಿ 2018

₹23/-

ಸುಂದರ ನಾಳೆಗೆ ಸುಮಧುರ ಬಾಳಿಗೆ

ಅನುಪಮ

ANUPAMA WOMEN'S MONTHLY

ಮಹಿಳಾ ಮಾಸಿಕ

ದುಬ್ಯಾ: ಬೆಳೆದು ನಿಂತ ಚಮತ್ಕಾರ
ಮಹಿಳಾ ಜಾಗೃತಿಗೆ ಜೈಕಾರ

ಓ ಸತ್ಯವಿಶ್ವಾಸಿಗಳೇ, ನಿಮ್ಮವರ ಹೊರತು ಅನ್ಯರನ್ನು ನಿಮ್ಮ ರಹಸ್ಯಜ್ಞಾನಿಗಳನ್ನಾಗಿ ಮಾಡಿಕೊಳ್ಳಬೇಡಿರಿ. ಅವರು ನಿಮ್ಮ ದುಃಸ್ಥಿತಿಯಿಂದ ಲಾಭ ಪಡೆಯುವ ಯಾವ ಸಂದರ್ಭವನ್ನೂ ಕಳೆದುಕೊಳ್ಳುವುದಿಲ್ಲ. ನಿಮಗೆ ಹಾನಿಯುಂಟಾಗುವ ವಿಷಯವೇ ಅವರಿಗೆ ಪ್ರಿಯವಾಗಿರುತ್ತದೆ. ಅವರ ಹೃದಯದಲ್ಲಿರುವ ದ್ವೇಷವು ಅವರ ಬಾಯಿಯಿಂದ ಹೊರ ಹೊಮ್ಮುತ್ತದೆ ಮತ್ತು ಅವರು ತಮ್ಮ ಹೃದಯದಲ್ಲಿ ಅಡಗಿಸಿಕೊಂಡಿರುವುದು ಅದಕ್ಕಿಂತಲೂ ಕಠಿಣತರವಾಗಿದೆ. ನಾವು ನಿಮಗೆ ಸುಸ್ಪಷ್ಟ ಮಾರ್ಗದರ್ಶನಗಳನ್ನು ನೀಡಿದ್ದೇವೆ. ನೀವು ವಿಚಾರವಂತರಾಗಿದ್ದರೆ. (ಪವಿತ್ರ ಕುರ್‌ಆನ್: 3: 118)

With best compliments from;

BANDE NAWAZ TRADING COMPANY

SINDHANUR

ನಾವೆಲ್ಲ ಮಾನವರು,
ಪರಸ್ಪರ ಸಹೋದರರು,
ನಮ್ಮೆಲ್ಲರ ಸೃಷ್ಟಿಕರ್ತ ದೇವನೊಬ್ಬನೆ.

ಇಸ್ಲಾಮಿನ ಕುರಿತು ಉಚಿತವಾಗಿ ಓದಲು ಪುಸ್ತಕಗಳನ್ನು ರವಾನಿಸಲಾಗುವುದು.

ಪೂರ್ಣ ಹೆಸರು, ಸ್ಪಷ್ಟ ವಿಳಾಸ ಹಾಗೂ ದೂರವಾಣಿ ಸಂಖ್ಯೆಯೊಂದಿಗೆ ಬರೆಯಿರಿ.

ಇಸ್ಮಿಕಾ, ಪಿ.ಬಿ.ನಂ. 229, ಮಂಗಳೂರು – 1, ಮೊಬೈಲ್: 9060341799

Email: info@ismika.com

Please visit:

www.islamkannada.com



ಸಂಪುಟ: 8 ಸಂಚಿಕೆ: 12

ಪ್ರಧಾನ ಸಂಪಾದಕಿ
ಶಹನಾಝ್ ಎಂ.

ಸಹಸಂಪಾದಕಿಯರು
ಸಬೀಹಾ ಫಾತಿಮಾ
ಸಮೀನಾ ಯು.

ಸಂಪಾದಕ ಮಂಡಳಿ
ಸಾಜಿದಾ ಮೂಮಿನ್
ಶಹೀದಾ ಉಮರ್
ಕುಲ್ಸೂಮ್ ಅಬೂಬಕರ್
ಮಿಸ್‌ಬಾ ಖಾನಂ ಎ.

ವ್ಯವಸ್ಥಾಪಕರು
ಮುಹಮ್ಮದ್ ಮುಹ್ಸಿನ್

ಪ್ರಕಾಶಕರು
ಎಂ. ಸಾದುಲ್ಲಾ

ವಿನ್ಯಾಸ ಮತ್ತು ಮುದ್ರಣ
ಕಂಪ್ರಿಂಟ್, ಮಂಗಳೂರು-1
ದೂರವಾಣಿ: 2424758

ಕಚೇರಿ ವಿಳಾಸ
ಅನುಪಮ ಮಹಿಳಾ ಮಾಸಿಕ
ಹಿದಾಯತ್ ಸೆಂಟರ್
ಬೀಬಿ ಅಲಾಬಿ ರಸ್ತೆ
ಮಂಗಳೂರು -575001

ದೂರವಾಣಿ : 0824-2410358
8722454771
9535445101

Email:
anupamamasika@gmail.com

website:
www.anupamamonthly.com

ಒಳಪುಟಗಳಲ್ಲಿ

ದುಬ್ಯಾ: ಬೆಳೆದು ನಿಂತ ಚಮತ್ಕಾರ
ಮಹಿಳಾ ಜಾಗೃತಿಗೆ ಜೈಕಾರ **8** ಇರ್ಷಾದ್ ಮೂಡಬಿದ್ರಿ

ಲೇಖನಗಳು

ಸಂತೋಷದ ಹುಡುಕಾಟದಲ್ಲಿದ್ದೀರಾ?	13	ಟಿ. ಮುಹಮ್ಮದ್
ವಿವಾಹ ಸಮಾಲೋಚನೆಯಲ್ಲಿದ್ದೀರಾ?	16	ಆಯಿಶಾ ನಿದ
ಹೊಸ ವರ್ಷ – ಹೊಸ ತೀರ್ಮಾನಗಳು	19	ಸಬೀಹಾ ಫಾತಿಮಾ
ರಸ್ತೆ ಅಪಘಾತಕ್ಕೆ ಕೊನೆ ಹೇಗೆ?	22	ಸಾಜಿದಾ ಮೂಮಿನ್
ಮಾದರಿ ಮಹಿಳಾಮಣಿಗಳು	25	
ಮಗುವಿನ ಆರೋಗ್ಯ – ಅಮ್ಮಂದಿರ ಕೈಯಲ್ಲಿ	30	ಡಾ। ನಸೀಮಾ ಪಿ.ಕೆ.
ಮಕ್ಕಳನ್ನು ಕಾಪಾಡಿ	44	ಡಾ। ಪಿ.ಎ. ಲಲಿತಾ
ವಿವಾಹ ವಿಚ್ಛೇದಿತಳ ಹಕ್ಕುಗಳು (ತಲಾಖ್ ಭಾಗ–7)	46	ಎಸ್ಸೆಮ್ಕೆ
ಮಹಿಳೆಯರೇ... ಬಹಳ ಬ್ಯುಸಿಯಾ... ರೋಗ ಬರಬಹುದು	53	ಡಾ। ಮಿನಿಲ ಚೆರಿಯನ್
ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮಹಿಳೆಯರ ಭಾಗವಹಿಸುವಿಕೆ	55	ಡಾ। ಡಿ.ಸಿ. ನಂಜುಂಡ
ವ್ಯಾಪಾರದ ಸರಕು	60	ಅಶೀರುದ್ದೀನ್ ಆಲಿಯ

ಟಿವಿ ಚಾನೆಲ್ [ಕಥೆ]	27	ಶಬೀನಾ ಬಾನು ವೈ.ಕೆ.
ಗೊಂದಲದ ಗೂಡಾದ ಇಮಾಮ [ಧಾರಾವಾಹಿ]	36	ಎಂ. ಅಶ್ರಫ್
ಇದು ಎಂತಾ ಲೋಕವಯ್ಯ [ಕಾದಂಬರಿ]	48	ಸರಸ ಬಿ. ಕೃಷ್ಣ ಕಮ್ಮರಡಿ

Vol. No. 8, Issue No. 12, Printed & Published by **M. Sadullah** on behalf of Sanmarga Publication Trust and Printed at Comprint & Published at Hidayath Centre, Beebi Alabi Road, Mangalore - 575001, Editor: **Shahnaz M.**
REGISTERED NO. KA/SK/MNG-477/2018-20 LICENCE TO POST SK/WPP/MNG/97/2018-20



ಅಭಿರುಚಿಗೆ ತಕ್ಕಂತಿದೆ

ಅನುಪಮ ಪ್ರಕಟಿಸುತ್ತಿರುವ 'ಬೆಳದಿಂಗಳ ಆ ರಾತ್ರಿ' ಕಾದಂಬರಿಯು ಯುವ ಜನಾಂಗದ ಓದಿನ ಅಭಿರುಚಿಗೆ ತಕ್ಕಂತಿದೆ. ಯುವ ಜನಾಂಗದ ಮಾನಸಿಕ ತುಮುಲತೆ ಮತ್ತು ವಿಚಾರಧಾರೆಗಳ ನಡುವೆ ಸಂಸ್ಕೃತಿ, ಸಮಾಜದ ಸಂಬಂಧಗಳು, ಯುವಜನರ ಅರಿವಿಗೆ ಬಾರದೇ ಹೋಗುವ ಧಾರ್ಮಿಕ ವಿಚಾರಧಾರೆಗಳು ಅವರಲ್ಲಿ ಮನೆಮಾಡುವ ಪ್ರಶ್ನೆಗಳೆಲ್ಲ ಈ ಕಾದಂಬರಿಯಲ್ಲಿ ಹಿಡಿದಿಟ್ಟಂತಿದೆ. ಇಮಾಮಾಳ ಪಾತ್ರ ಪರಿಚಯವೂ ಚೆನ್ನಾಗಿ ಮೂಡಿ ಬರುತ್ತಿದೆ. ಬಹುಶಃ ಅನುಪಮ ಮಹಿಳಾ ಮಾಸಿಕದಲ್ಲಿ ಯುವಜನಾಂಗದ ಹಿತಾಸಕ್ತಿಗಳಿಗೆ ಹೊಂದಿಕೊಂಡು ಬರುತ್ತಿರುವ ಮೊದಲ ಕಾದಂಬರಿ ಇದೆನ್ನಿಸುತ್ತಿದೆ.

ಶಬೀನಾ, ಮಂಗಳೂರು

ಕನ್ನಡಿಯಂತಿತ್ತು

ಡಾ। ಇಸ್ಮತುನ್ನಿಸಾರವರ 'ವೈದ್ಯರು, ಆಸ್ಪತ್ರೆಗಳು ಅಂದು-ಇಂದು' ಲೇಖನ ಇಂದಿನ ಸಮಾಜಕ್ಕೆ ಹಿಡಿದ ಕನ್ನಡಿಯಂತಿತ್ತು. ಬಹುಶಃ ಎಲ್ಲಾ ವ್ಯಾಪಾರೀಕರಣಗೊಂಡಂತೆ ವೈದ್ಯಕೀಯ ಕ್ಷೇತ್ರವೂ ಅದಕ್ಕೆ ಹೊರತಲ್ಲವೆಂಬುದು ಸಾಬೀತಾಗಿದೆ. ಪ್ರಾಣಪಕ್ಷಿ ಹಾರಿ ಹೋದರೂ ಮೃತ ಶರೀರವನ್ನಿಟ್ಟು ಹಣ ದೋಚುವ ಆಸ್ಪತ್ರೆಗಳಿಗೇನೂ ಕೊರತೆಯಿಲ್ಲ. ಆದುದರಿಂದ ಕೇವಲ ಹಣ ಗಳಿಸುವ ಉದ್ದೇಶವಲ್ಲದೆ ಸೇವಾ ಮನೋಭಾವನೆಯನ್ನು ಬೆಳೆಸುವ ಅಗತ್ಯ ಖಂಡಿತಾ ಇದೆ.

ವಿಜಯಶ್ರೀ, ಉಡುಪಿ

ಮೆಚ್ಚುಗೆಯಾಯಿತು

ಡಿಸೆಂಬರ್ ಸಂಚಿಕೆಯಲ್ಲಿ ಪ್ರಕಟವಾದ ಶಾರ್ಜಾ ಅಂತರಾಷ್ಟ್ರೀಯ ಪುಸ್ತಕಮೇಳ ಕುರಿತ ಲೇಖನ ಮೆಚ್ಚುಗೆಯಾಯಿತು. ಪುಸ್ತಕ ಮೇಳದಲ್ಲಿ ಶಾಂತಿ ಪ್ರಕಾಶನದ ಮಳಿಗೆಯಿರುವುದನ್ನು ಕೇಳಿ ತುಂಬಾ ಸಂತೋಷವಾಯಿತು. ಬಹುಶಃ ಸಾಹಿತ್ಯ ಓದುಗರು ಕ್ಷೀಣಿಸುತ್ತಿರುವ ಇಂದಿನ ದಿನಗಳಲ್ಲಿ ಸಾಹಿತ್ಯಾಭಿರುಚಿ ಮೂಡಿಸುವಲ್ಲಿ ನಡೆಸುವ ಇಂತಹ ಶ್ರಮಗಳು ಶ್ಲಾಘನೀಯ. ಲೇಖಕ ಅಬ್ದುಸ್ಸಲಾಮ್ ದೇರಳಕಟ್ಟೆಯವರಿಗೆ ಧನ್ಯವಾದಗಳು.

ಮರ್ಯಮ್ ರಿದಾ, ಮುಂಬಯಿ

ಹಾಸ್ಯ ಬರಹ

'ಅನುಪಮ'ದಲ್ಲಿ ಮೂಡಿಬಂದ 'ಮಗುವನ್ನು ಮಲಗಿಸುವುದೆಂದರೇ' ಹಾಸ್ಯ ಬರಹ ತುಂಬಾ ಇಷ್ಟವಾಯಿತು. ಮಗುವನ್ನು ಮಲಗಿಸುವುದೆಂದರೆ ನಿಜಕ್ಕೂ ಹರಸಾಹಸ ಪಡಬೇಕಾದ ಸಂಗತಿ. ಇದನ್ನು ಹಾಸ್ಯದ ಮೂಲಕ ಪರಿಚಯಿಸಿದ ಅನಾಮಿಕಳಿಗೆ ಹ್ಯಾಟ್ಸ್‌ಆಫ್.

ಸುಮಿತ್ರ, ಕಾರವಾರ

ಉತ್ತಮ ಲೇಖನಗಳು

ವೈದ್ಯರು, ಆಸ್ಪತ್ರೆಗಳು ಅಂದು-ಇಂದು ಎಂಬ ಅದ್ಭುತ ಚಿತ್ರವನ್ನು ಹೊತ್ತು ತಂದ ಡಿಸೆಂಬರ್ ತಿಂಗಳ ಅನುಪಮ ಪತ್ರಿಕೆಯ ಮುಖಪುಟ ಸುಂದರವಾಗಿದೆ. ಈ ಸಂಚಿಕೆಯ ಒಳಪುಟಗಳಲ್ಲಿ ಮೂಡಿ ಬಂದಂತಹ ಲೇಖನವು 'ವೈದ್ಯರು, ಆಸ್ಪತ್ರೆಗಳು ಅಂದು-ಇಂದು' ಪರಮಾಣು ಶಕ್ತಿಯ ಮಾತೆ, ಸಮಯ ಕರಗಿ ಹೋಗುತ್ತಿದೆ, ಮಗುವನ್ನು ಮಲಗಿಸುವುದೆಂದರೆ, ಸಾಮೂಹಿಕ ಶಿಶು ಮರಣಗಳಿಗೆ ಕೊನೆಯಿಲ್ಲವೇ? ಬೆಳದಿಂಗಳ ರಾತ್ರಿ, 14 ವಾಹನಗಳನ್ನು ಓಡಿಸುವ ಏಳರ ಬಾಲಕಿ, ಮಕ್ಕಳಿಗಾಗುವ ಮಾನಸಿಕ ತೊಂದರೆಗಳು, ಬಾಳಬುತ್ತಿ ಮುಂತಾದ ಪತ್ರಿಕೆಯಲ್ಲಿ ಬಂದಂತಹ ಎಲ್ಲ ಲೇಖನಗಳು ಉತ್ತಮವಾಗಿವೆ.

ವಿ.ಎಂ.ಎಸ್. ಗೋಪಿ, ಬೆಂಗಳೂರು

ಅದ್ಭುತವಾಗಿತ್ತು

ರಹ್ಮಾನ್ ಎಂ.ರವರು ಬರೆದ 'ಪರಮಾಣು ಶಕ್ತಿಯ ಮಾತೆ' ಲೇಖನ ಅದ್ಭುತವಾಗಿತ್ತು. ಮಹಿಳೆಯಾಗಿ ಸುಮೀರಾ ಮೂಸಾರ ಸಾಧನೆ ಪ್ರಶಂಸಾರ್ಹ. ಕೇವಲ 35 ವರ್ಷದ ಚಿಕ್ಕ ಜೀವಿತಾವಧಿಯಲ್ಲಿ ಅದ್ಭುತ ಸಾಧನೆ ಮಾಡಿದ್ದಾರೆ. ಅದೂ ಅಲ್ಲದೇ ಕ್ಯಾನ್ಸರ್ ರೋಗಿಗಳ ಬಗ್ಗೆ ಅವರ ಕಳಕಳಿ ನಮಗೆಲ್ಲಾ ಮಾದರಿ.

ಉಮ್ಮು ಮುಂತಹಾ, ಕಂದಕ್

ಓದುಗರ ಗಮನಕ್ಕೆ

'ಅನುಪಮ'ದ ಬಗ್ಗೆ ನಿಮ್ಮ ಅನಿಸಿಕೆ, ಕವನ, ಜೋಕ್ಸ್, ವಾಟ್ಸ್ ಆ್ಯಪ್ ನಂಬರಿಗೆ ರವಾನಿಸಬಹುದು.

9535445101

ಅನುಪಮ ಈಗ ಫೇಸ್‌ಬುಕ್‌ನಲ್ಲಿ ಲಭ್ಯ...
ಭೇಟಿ ನೀಡಿ ಲೈಕ್ ಮಾಡಿ...
facebook/anupama.masika

ಅನುಪಮ ವೆಬ್‌ಸೈಟ್‌ನಲ್ಲೂ ಲಭ್ಯ:
www.anupamamonthly.com

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

ಸ್ವಸ್ಥ ಸಮಾಜವನ್ನು ಮುಂದಿನ ದಿನಗಳಲ್ಲಿ ನಿರೀಕ್ಷಿಸೋಣವೇ?

ವರುಷವೊಂದು ಉರುಳಿತು. '2018' ವಿಶ್ವವು ಹೊಸ ವರುಷದ ಹೊಸ್ತಿಲಲ್ಲಿ ನಿಂತಿದೆ. ವಿದ್ಯಮಾನಗಳು ಹಲವು ಘಟಿಸಿತು. ದೇಶದ ಬಗ್ಗೆ ಅವಲೋಕಿಸಿದರೆ, ಕೋಮು ವೈಷಮ್ಯದ ಅಲೆಯು ಶೀಘ್ರವಾಗಿ ವ್ಯಾಪಕವಾಗುತ್ತಿವೆ. ಎಲ್ಲೆಲ್ಲಿಯೋ ನಡೆಯುತ್ತಿದ್ದಂತಹ ಘಟನೆಗಳು ಮನೆಯ ಮುಂದೆಯೂ ನಡೆಯುತ್ತಿದೆ. ಸುವ್ಯವಸ್ಥಿತವಾಗಿ ನಡೆಸಲ್ಪಡುವ ಗಲಭೆಗಳ ಹಿಂದಿರುವ ಅದೃಶ್ಯ ಶಕ್ತಿಗಳು ತಮ್ಮ ಲಾಭಕ್ಕೋಸ್ಕರ ಅಮಾಯಕ ಮುಗ್ಧ ಶ್ರೀ ಸಾಮಾನ್ಯರನ್ನು ಬಳಸಿಕೊಳ್ಳುತ್ತಿವೆ. ಇಲ್ಲಿ ಆಯುಧವಾಗಿ ಉಪಯೋಗಿಸಲ್ಪಡುತ್ತಿರುವವರಿಗೆ ತಮ್ಮನ್ನು ಬಳಸಿಕೊಳ್ಳಲಾಗುತ್ತಿದೆಯೆಂದು ತಿಳಿಯದಿರುವುದು ವಿಪರ್ಯಾಸ. ಪ್ರಜೆಗಳಿಂದಲೇ ಚುನಾಯಿತರಾಗಿ ಪ್ರಜೆಗಳ ಹಿತ ರಕ್ಷಣೆಯ ಹೊಣೆ ಹೊತ್ತವರೇ ತಮ್ಮ ಬೇಳೆ ಬೇಯಿಸಿಕೊಳ್ಳಲಿಕ್ಕಾಗಿ ಪ್ರಜೆಗಳನ್ನೇ ಪರಸ್ಪರ ಕಚ್ಚಾಡಿಸುವುದು ವಿಪರ್ಯಾಸವೇ ಸರಿ. ಇಷ್ಟಕ್ಕೂ ಇದನ್ನು ಅರಿಯದೆ ಕಚ್ಚಾಡುತ್ತಿರುವ ಪ್ರಜೆಗಳ ಅಜ್ಞಾನಕ್ಕೆ ಏನನ್ನಬೇಕೋ?

ಆಧಾರ್ ಜೋಡಣೆಯ ಕುರಿತಂತೆ ಸರಕಾರ ಹಾಗೂ ನ್ಯಾಯಾಲಯಗಳ ಮಧ್ಯೆ ಇರುವ ಬೇಕು-ಬೇಡಗಳು ಜನರನ್ನು ಇನ್ನಷ್ಟು ಗೊಂದಲಕ್ಕೀಡು ಮಾಡಿವೆ. ಸಾಕಷ್ಟು ಆಧಾರಗಳಿದ್ದರೂ ಆಧಾರ್ ಕಾರ್ಡ್ ಇಲ್ಲದೇ ಸಮಾಜ ಕಲ್ಯಾಣ ಸವಲತ್ತುಗಳನ್ನು ಪಡೆಯಲು ಸಾಧ್ಯವಾಗುತ್ತಿಲ್ಲ. ಅಷ್ಟೇ ಏಕೆ, ಪ್ರತೀ ತಿಂಗಳು ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಪಡಿತರ ಪಡೆಯಲು ಅರ್ಹನಾದ ಕುಟುಂಬಗಳಿಗೆ ಈ ಸವಲತ್ತುಗಳನ್ನು ಪಡೆಯಲು ಸಾಧ್ಯವಾಗಿಲ್ಲ. ಪ್ರತೀ ಬಾರಿ ಪಡಿತರ ಪಡೆಯಲು ಹೋಗುವಾಗಲೂ ತಮ್ಮ ಬೆರಳಚ್ಚು ಪರೀಕ್ಷಿಸಿ ಪಡೆದುಕೊಂಡು ಬರಬೇಕು. ಬೆರಳಚ್ಚು ಕಾಣಿಸದೆ, ಮ್ಯಾಚ್ ಆಗದೇ, ಜಾರ್ಖಂಡ್, ಒಡಿಶಾ, ರಾಜಸ್ಥಾನದಲ್ಲಿ ಆಹಾರ ಸಿಗದೇ ಹಸಿವಿನಿಂದ ಹಲವರು ಮರಣವನ್ನಪ್ಪಿದ್ದಾರೆ. ನ್ಯಾಯಾಲಯವು ಈ ವಿಷಯದಲ್ಲಿ ಮಧ್ಯ ಪ್ರವೇಶ ಮಾಡಿ, ಜನಸಾಮಾನ್ಯರ ನೋವಿಗೆ ಕಷ್ಟಕ್ಕೆ ಸ್ಪಂದಿಸಬೇಕಾಗಿದೆ. ಮಾರ್ಚ್ 31ರ ವರೆಗೆ ಜೋಡಣೆಯ ಗಡುವನ್ನು ವಿಸ್ತರಿಸಿದೆಯಾದರೂ, ಹಲವು ಇಲಾಖೆಗಳು ಆಧಾರ ಜೋಡಣೆಯನ್ನು ಮಾಡಲು ಒತ್ತಡ ಹೇರುತ್ತಿವೆ. ಜನರಿಗೆ ನುಂಗಲಾರದ ಬಿಸಿ ತುಪ್ಪದಂತಾಗಿದೆ ಪರಿಸ್ಥಿತಿ.

ಏತನ್ಮಧ್ಯೆ ರಾಜಕಾರಣಿಗಳ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಗೆ ಮಾರ್ಚ್- 1ರ ಒಳಗೆ 12 ವಿಶೇಷ ನ್ಯಾಯಾಲಯಗಳ ಸ್ಥಾಪನೆಗೆ ಸುಪ್ರೀಮ್ ಕೋರ್ಟ್ ಸೂಚನೆ ನೀಡಿರುವುದು ಉತ್ತಮ ಬೆಳವಣಿಗೆ ಎನ್ನಬಹುದು. ಜೈಲು ಶಿಕ್ಷೆಗೆ ಒಳಗಾದ ರಾಜಕಾರಣಿಗಳು ಚುನಾವಣೆಗೆ ಸ್ಪರ್ಧಿಸುವುದನ್ನು ನಿಷೇಧಿಸಬೇಕೆಂದು ಕೋರಿ ಸುಪ್ರೀಮ್ ಕೋರ್ಟಿಗೆ ಅರ್ಜಿ ಸಲ್ಲಿಸಲಾಗಿತ್ತು. ಅಪರಾಧ ಸಾಬೀತಾದ ರಾಜಕಾರಣಿಗಳಿಗೆ ಆಜೀವ ನಿಷೇಧ ಹೇರುವ ಪ್ರಮುಖ ವಿಷಯದ ಬಗ್ಗೆ ಮಾರ್ಚ್ 2018ರಲ್ಲಿ ವಿಚಾರಣೆ ನಡೆಯಲಿದೆ.

ಪ್ರಜೆಗಳಿಗಾಗಿ, ಪ್ರಜೆಗಳಿಂದಲೇ ಪ್ರಜಾಸತ್ತಾತ್ಮಕವಾಗಿ ಚುನಾಯಿತರಾದ ಪ್ರಜಾ ಪ್ರತಿನಿಧಿಗಳು ಪ್ರಜಾಹಿತ ಕಾರ್ಯ ಕೈಗೊಂಡಲ್ಲಿ ಸಮಾಜದಲ್ಲಿ ಶಾಂತಿ ಸಾಮರಸ್ಯ ಖಂಡಿತವಾಗಿ ಮೂಡಬಹುದು. ಸ್ವಹಿತ, ಸ್ವಪಕ್ಷದ ಹಿತವನ್ನು ಬಯಸಿ ಅಧಿಕಾರ ನಡೆಸುವ ಜನ ಪ್ರತಿನಿಧಿಗಳಿಂದ ಉತ್ತಮ ದೇಶದ, ಸಮಾಜದ ಕಲ್ಪನೆ ಮಾಡಲೂ ಸಾಧ್ಯವಾಗದ ಮಾತು.

"ಶಾಂತಿ ಮತ್ತು ಸಾಮರಸ್ಯದ ಸಂದೇಶವನ್ನು ಪವಿತ್ರ ಕುರ್‌ಆನ್‌ನಲ್ಲಿ ಸೊಗಸಾಗಿ ಚಿತ್ರಿಸಲಾಗಿದ್ದು ಹೆಚ್ಚಿನ ಸಂದರ್ಭದಲ್ಲಿ ಜನತೆ ಇದರ ಸಾರವನ್ನು ಅರ್ಥೈಸಿಕೊಂಡಿರುವುದಿಲ್ಲ" ಎಂದು ಸೇನಾಪಡೆಯ ಮುಖ್ಯಸ್ಥ ಜ। ಬಿಪಿನ್ ರಾವತ್ ಅವರ ಮಾತು ಇಲ್ಲಿ ಉಲ್ಲೇಖನೀಯ. ಸಂತುಲಿತ ಚಿಂತನೆಗಳನ್ನೊಳಗೊಂಡ ಮತ್ತು ಶಾಂತಿ-ಸಾಮರಸ್ಯ ಬೆರೆತ ಪವಿತ್ರ ಕುರ್‌ಆನ್‌ನ ಆಶಯದಂತಹ ಸ್ವಸ್ಥ ಸಮಾಜವನ್ನು ಮುಂದಿನ ದಿನಗಳಲ್ಲಿ ನಿರೀಕ್ಷಿಸೋಣವೇ? ಹೊಸ ವರುಷ ಇದಕ್ಕೆ ಮುನ್ನುಡಿಯಾಗಲಿ ಎಂಬ ಹಾರೈಕೆಯೊಂದಿಗೆ. ■

ಸ್ತ್ರೀ ಶಕ್ತಿ ಎದ್ದು ನಿಲ್ಲಲಿ

ಎದ್ದು ನಿಲ್ಲುವ ನಾವು ಮಹಿಳೆಯರೆ ಒಗ್ಗೂಡಿ
ಪುರುಷ ದೌರ್ಜನ್ಯದೆದುರು ಗೆದ್ದು ಬರಬೇಕು
ಮುಗ್ಧ ಮನಸನು ಹೊಸಕಿ ಗದ್ದುಗೆಯನೇರುತಿದೆ
ಲೈಂಗಿಕದ ಲಾಲಸೆಗೆ ಹೆಣ್ಮಗಳ ಬದುಕು!

ಮೂರು ವರುಷದ ಹಸುಳೆ ಎಂಟು-ಹತ್ತರ ಬಾಲೆ
ಯಾರನ್ನು ಬಿಟ್ಟಿಲ್ಲ ಇವರ ವಿಷದ ಹಲ್ಲು
ಯುವತಿಯಾದರೂ ಸರಿಯೆ
ವೃದ್ಧೆಯಾದರೂ ಸರಿಯೆ
ಮೇಲೆರಗಿ ಭೋಗಿಸುವ ಕಾಮ ಜೊಲ್ಲು!

ಮಹಾತ್ಮರೆಂದು ನಂಬಿರುವ ವಿದ್ಯೆ ನೀಡಿದ ಗುರುವ
ಹದ್ದುಗಣ್ಣಿಗೆ ಬಲಿಯು ತಮ್ಮ ಶಿಷ್ಯೆಯರು
ರಕ್ಷಕರೆ ಭಕ್ಷಕರು ಆರಕ್ಷಕರೆಲ್ಲಿಹರು
ಮಾರಕರು ಹಂತಕರು ವಿಕೃತ ಮನದವರು!

ಎಗ್ಗಿಲ್ಲದೇ ಏರಿ ಸದ್ದಿಲ್ಲದೇ ಇರಿದು
ಹಿಂಡಿ ಹಿಪ್ಪೆಯ ಮಾಡಿ ಗುಂಡಿಗೆಸೆದು
ಏನು ಆಗಿಯೆ ಇಲ್ಲ ಮುಖವಾಡ ಮುಖದಲ್ಲಿ
ಮುಂದೆ ಬೇಟೆಯ ಹೊಂಚು ಮನದಲ್ಲಿ ಹೆಣೆದು!

ಹೆಣವಾದವರೆಷ್ಟು ಹೇಳ ಹೆಸರಿಲ್ಲದವರೆಷ್ಟೊ
ಮಾನಹರಣದಿ ನೊಂದ ಹೆಣ್ಮಕ್ಕಳೆಷ್ಟೊ
ಉರಿಯುತಿದೆ ಮೈಯೆಲ್ಲ ತಳದಿಂದ ಮೇಲಕ್ಕೆ
ಛಿ, ಥೂ ಉಗಿಯ ಬೇಕಿಂತವರ ಹೇಯ ಕೃತ್ಯಕ್ಕೆ!

ಎಚ್ಚೆತ್ತು ಸೋದರಿಯರೆ ಜಾಗೃತಿಯ ಬೆಳೆಸುತ್ತ
ಸಿದ್ಧರಾಗುವ ನಮ್ಮ ರಕ್ಷಣೆಯ ಸುತ್ತ
ರಾಣಿ ಅಬ್ಬಕ್ಕ ಒನಕೆ ಓಬವ್ವ ಚೆನ್ನಮ್ಮರಾದಿ
ವೀರ ವನಿತೆಯರಿವರು ಕೆಚ್ಚೆದೆಯ ಮನದಿ!

ಕಣ್ಮುಚ್ಚಿ ಕುಳಿತಿರುವ ಅಧಿಕಾರಿ ವರ್ಗಕ್ಕೆ
ಧಿಕ್ಕಾರ ಧಿಕ್ಕಾರ ಕುರ್ಚಿ ಪೀಠಕ್ಕೆ
ಸಾಕಾಗಿದೆ ನಮಗೆ ಕಣ್ಣೀರೊರೆಸುವ ತಂತ್ರ
ಕೊನೆತನಕ ಹೋರಾಟ ಶತಃ ಸಿದ್ಧ ಮಂತ್ರ!

■ ಬಿ. ಸತ್ಯವತಿ ಎಸ್. ಭಟ್, ಕೊಳಚಪ್ಪು ■

ನಿಮ್ಮ ಪೈಕಿ ಯಾರದಾದರೂ ಮರಣದ ಸಮಯ ಬಂದಿದ್ದು ಆಗ ಅವನು– "ನನ್ನ ಪ್ರಭೂ ನೀನು ನನಗೆ ಇನ್ನೂ ಸ್ವಲ್ಪ ಹೆಚ್ಚು ಕಾಲಾವಧಿ ನೀಡಿರುವುದಿಲ್ಲವೇಕೆ? ಹಾಗೆ ನೀಡಿದ್ದರೆ ನಾನು ದಾನ–ಧರ್ಮ ಮಾಡುತ್ತಿದ್ದೆ ಮತ್ತು ಸಜ್ಜನರ ಸಾಲಿಗೆ ಸೇರುತ್ತಿದ್ದೆ"– ಎಂದು ಹೇಳುವುದಕ್ಕೆ ಮುಂಚೆ ನಾವು ನಿಮಗೆ ದಯಪಾಲಿಸಿರುವ ಸಂಪತ್ತಿನಿಂದ ಖರ್ಚು ಮಾಡಿರಿ.

(ಪವಿತ್ರ ಕುರ್‌ಆನ್ 63:10)

With best compliments from;

Digi Foto World

Digi Foto xpress

Tayyab Hussain

98800 77477

08394 228052

#234, College Road,

Hospet - 583 201

email: digifotoworld.@gmail.com

ಪ್ರವಾದಿ ಮುಹಮ್ಮದ್(ಸ) ಹೇಳಿದರು,

ವೇಗವಾಗಿ ಹರಿಯುವ ನದಿ ತೀರದಲ್ಲಿ ವುಝು (ಅಂಗಸ್ನಾನ) ಮಾಡುವಾಗಲೂ ಕೂಡಾ ನೀರನ್ನು ಮಿತವಾಗಿ ಬಳಸಿರಿ.

With best compliments from

MUHAMMED ABDUL RAFEEQ

QUALITY FURNITURE, HOSPET

ದುಬ್ಯಾ: ಬೆಳೆದು ನಿಂತ ಚಮತ್ಕಾರ ಮಹಿಳಾ ಜಾಗೃತಿಗೆ ಜೈಕಾರ

ದುಬ್ಯಾಯ ಥಳಕು-ಬೆಳಕಿನ ವೈಯಾರ ಕಾಣಲು ದಿನನಿತ್ಯ ಸಾವಿರಾರು ಮಂದಿ ದುಬ್ಯಾಗೆ ಪ್ರಯಾಣ ಬೆಳೆಸುತ್ತಾರೆ. ಇಲ್ಲಿಯ ಅರಬರು ಐಷಾರಾಮದ ದರ್ಬಾರು, ಜೀವನ ಶೈಲಿ, ಶಿಸ್ತುಬದ್ಧ ಕಾನೂನು, ಭ್ರಷ್ಟಾಚಾರ ರಹಿತ ಆಡಳಿತ ಹಾಗೂ ಸಾಮರಸ್ಯದ ಬಾಳ್ವೆ ಕಂಡು ಆಶ್ಚರ್ಯಚಕಿತರಾಗುತ್ತಾರೆ.

ಇದೇ ಜನವರಿಯಿಂದ ಇಲ್ಲಿ ಒಂದು ತಿಂಗಳ 'ಶಾಪಿಂಗ್ ಫೆಸ್ಟಿವಲ್' ಮೇಳ ಜರುಗಲಿದೆ. ಇದಕ್ಕೆ ಲಕ್ಷಾಂತರ ಪ್ರವಾಸಿಗರು ಧಾವಿಸಿ ಬರಲಿದ್ದಾರೆ. ದುಬ್ಯಾಯಲ್ಲಿ ನೆಲೆಸಿರುವ ನಮ್ಮ ಬರಹಗಾರ 'ಇರ್ಶಾದ್ ಮೂಡಬಿದ್ರಿ' ಈ ಕುರಿತು ಇಲ್ಲಿ ವಿಭಿನ್ನ ಪಕ್ಷಿನೋಟ ಹರಿಸಿದ್ದಾರೆ. ಬನ್ನಿ, ಅವರ ಜೊತೆಗೆ ದುಬ್ಯಾಯನ್ನು ಸುತ್ತಿ ಬರೋಣ...

■ ಇರ್ಷಾದ್ ಮೂಡಬಿದ್ರಿ ■

ಕೆಲವು ವರುಷಗಳ ಹಿಂದೆ ನಾನೊಂದು ಭಾಷಣದಲ್ಲಿ ಕೇಳಿದ ಮಾತು. ಅರಬರ ಧಾರ್ಮಿಕ ಶ್ರದ್ಧೆಯನ್ನು ನೋಡಬೇಕಾದರೆ ಮಕ್ಕಾ-ಮದೀನಾಕ್ಕೆ ಹೋಗಬೇಕು. ಅದೇ ಸುಖ, ಸಂಪತ್ತಿನ ದರ್ಬಾರು ನೋಡಬೇಕಾದರೆ ದುಬ್ಯಾಗೆ ತೆರಳಬೇಕು. ನಿಜ, ದುಬ್ಯಾ ಅಂದರೆ ವೈಭವ ಹಾಗೂ ದೌಲತ್ತಿನ ಪ್ರತಿರೂಪ. ಚಮಕ್ ದಮಕ್‌ನ ಭ್ರಮಾಲೋಕ. ಒಂದು ರೀತಿಯಲ್ಲಿ ಅರಬರೇ ಧರೆಯಲ್ಲಿ ನಿರ್ಮಿಸಿಕೊಂಡ ಐಷಾರಾಮಿ ವಿಲಾಸಿ ತಾಣ!

ದುಬ್ಯಾಯ ನೂರು ವರ್ಷಗಳ ಹಿಂದಿನ ಚರಿತ್ರೆಯನ್ನು ತೆರೆದು ನೋಡಿದರೆ ಅದು ಹುಟ್ಟು ಶ್ರೀಮಂತ ರಾಷ್ಟ್ರವಲ್ಲ. ಕಹಿ ಬಡತನವನ್ನು ಹತ್ತಿರದಿಂದ ಅನುಭವಿಸಿದ ದೇಶ. ನಮ್ಮ ಭಾರತದಂತೆ ಅಲ್ಲಿ ಕಾಡು-ಮೇಡುಗಳಿಲ್ಲ, ಬೆಟ್ಟ-ಗುಡ್ಡಗಳಿಲ್ಲ. ನದಿಯಾಗಲಿ, ಹಳ್ಳ-ಕೊಳ್ಳಗಳೂ ಇಲ್ಲ. ಇದ್ದರೆ ಒಂದು ಕಡೆ ಸೋಮಾರಿಯಾಗಿ ಮಲಗಿಕೊಂಡಿರುವ ವಿಶಾಲ ಮರುಭೂಮಿ. ಇನ್ನೊಂದು ಕಡೆ ತನ್ನ ಪಾಲಿಗೆ ಮೌನವಾಗಿರುವ ಅರಬಿ ಸಮುದ್ರ. ಅಂದು ಅವರ ಮನೆಗಳಿಗೆ ಹಂಚಿನ ಛಾವಣಿಗಳಿಲ್ಲ. ಕಲ್ಲು-ಮಣ್ಣಿನಿಂದ ನಿರ್ಮಿಸಿದ ಮನೆಗೆ ಖರ್ಜೂರದ ಸೋಗೆಗಳೇ ಆಸರೆ. ಖರ್ಜೂರದ ಕಂಬಗಳೇ ಆಧಾರಗಳು! ಕುಡಿಯಲು ಸಿಹಿ ನೀರಿಲ್ಲ. 'ಒಯಸಿಸ್' ನೀರಿಗೆ ಮೈಲು ಗಟ್ಟಲೆ ನಡೆಯಬೇಕು. ಅಥವಾ ಕತ್ತೆಯಲ್ಲಿ ಹೇರಿಕೊಂಡು ಬರುವ ಮಾರಾಟಗಾರನಲ್ಲಿ ಕಾಸು ಕೊಟ್ಟು ಖರೀದಿಸಬೇಕು. ಸುಡುವ ಬಿಸಿಲಿಗೆ 'ಫ್ಯಾನು' ಇಲ್ಲ, 'ಏ.ಸಿ.'ಯೂ ಇಲ್ಲ. ಮೈ ತುಂಬಾ ಬೆವರು! ಇನ್ನು ಚಳಿಗಾಲದಲ್ಲಿ 'ಹೀಟರೂ' ಇಲ್ಲ. ಐದಾರು

ತಿಂಗಳ ಆ ಹೆಪ್ಪುಗಟ್ಟುವ ಚಳಿಗೆ ಬರೇ ನಡುಕ! ಹೊಟ್ಟೆ ತುಂಬಲು ಸಾಗರವನ್ನು ದಾಟಿ ಬರುವ ಗೋಧಿ ಅಥವಾ ಅಕ್ಕಿಯೇ ಜೀವನಾಧಾರ. ಇಲ್ಲದೆ ಹೋದರೆ ಖರ್ಜೂರಗಳೇ ಅನ್ನದ ಬಟ್ಟಲು!

ಪುರುಷರು ಉದ್ಯೋಗಕ್ಕಾಗಿ ಸಮುದ್ರದಲ್ಲಿ ಮೀನು ಹಿಡಿಯಲು ಇಳಿದರೆ, ಉಳಿದವರು ಶ್ರೀಮಂತರ ಖರ್ಜೂರದ ತೋಟಗಳಿಗೆ ದುಡಿಯಲು ಹೋಗುತ್ತಿದ್ದರು. ಸಾಹಸಿಗರು ಮುತ್ತು ಹೆಕ್ಕುವ ಕಾಯಕದಲ್ಲಿ ಕಡಲಿನ ಆಳಕ್ಕೆ ಜಿಗಿಯುತ್ತಿದ್ದರು. ಮತ್ತೆ ಕೆಲವರು ಹಡಗು ಹತ್ತಿ ವ್ಯಾಪಾರದ ನಿಮಿತ್ತ ಹೊರ ದೇಶಗಳಿಗೆ ಪ್ರಯಾಣ ಬೆಳೆಸುತ್ತಿದ್ದರು. ಹೆಂಗಸರು ಮನೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದರು. ಒಂಟೆ, ಕುರಿ, ಕೋಳಿ ಇತ್ಯಾದಿ ಸಾಕಿಕೊಂಡು ಪುರುಷರ ಬೆಂಬಲಕ್ಕೆ ನಿಲ್ಲುತ್ತಿದ್ದರು. ಮಕ್ಕಳು ಮದ್ರಸಗಳಲ್ಲಿ ಒಂದಿಷ್ಟು 'ಅರಬಿ' ಕಲಿತರೆ ಅದೇ ದೊಡ್ಡ ಶಿಕ್ಷಣ! ವಿಮಾನ, ಸಿನಿಮಾ, ಗಾಯನ ಇತ್ಯಾದಿ ದೂರದ ಮಾತು. ಮಕ್ಕಾ-ಮದೀನಾಕ್ಕೆ ಹೋಗಬೇಕಾದರೆ ಅದೇ ಒಂಟೆಯ ಪ್ರಯಾಣ. ವಿದ್ಯುತ್ ಇಲ್ಲದ ಆ ನಾಡಿನಲ್ಲಿ ಮುಸ್ಸಂಜೆಯಾದರೆ ಬರೇ ಲಾಟೀನಿನ ಮಂದ ಬೆಳಕು. ಬದುಕು ಅಂದರೆ ಬರೇ ಬಡತನದ ಸಹವಾಸ. ಊಟಕ್ಕೆ ಇಲ್ಲದಿದ್ದರೆ ಉಪವಾಸ! ಆದರೆ ಅರಬರು ಧೈರ್ಯವಂತರು-ಗಟ್ಟಿಗರು. ಅವರ ಈ ಸಹನೆ-ತಾಳ್ಮೆಯನ್ನು ನಾವು ಮೆಚ್ಚಲೇ ಬೇಕು. ಅವರು ಈ ಎಲ್ಲಾ ಕಠಿಣ ದಿನಗಳನ್ನು ದಾಟಿಕೊಂಡು ಗೆದ್ದು ಬಂದಿದ್ದಾರೆ.

ಆರಂಭದಿಂದಲೂ ದುಬ್ಯಾಯಲ್ಲಿ ಆಡಳಿತದ ಚುಕ್ಕಾಣಿ ಇತ್ತು. ಅದು 'ಶೇಖ್' ಅನ್ನುವ ರಾಜ ಕುಟುಂಬದ ನಾಯಕತ್ವದಲ್ಲಿ ಸಾಗುತ್ತಿತ್ತು. ಅವರು ಪ್ರಜೆಗಳನ್ನು ಪ್ರೀತಿಯಿಂದ ನೋಡುಕೊಳ್ಳುತ್ತಿದ್ದರು. ಇದೇ ದೊರೆಯ ಅರಮನೆಗೆ ಜನರೇಟರ್‌ನಿಂದ ಅಂದು ವಿದ್ಯುತ್ ಬೆಳಗಿದಾಗ ಅದೊಂದು ವಿಸ್ಮಯವಾಗಿತ್ತು. ಎಂದೂ ಕಾಣದ ಈ ಬೆಳಕಿಗೆ, ಅವರ ಕಣ್ಣುಗಳಲ್ಲಿಯೇ ವಿದ್ಯುತ್ ಸಂಚಾರವಾಗಿತ್ತು. ಇದನ್ನು ಪ್ರತ್ಯಕ್ಷ ನೋಡಲು ನಾಡಿನ ಮೂಲೆ ಮೂಲೆಗಳಿಂದ ಜನರು ಓಡೋಡಿ ಬಂದರು. ಸಾಯಲು ಸಮೀಪವಾಗಿದ್ದ ವಯೋವೃದ್ಧರೂ ಒಂಟೆಗಳನ್ನು ಏರಿ ಬಂದರು. ಅವರಿಗೆ ಈ ಹೊಸ ಬೆಳಕು ನೋಡಿಯೇ ಕಣ್ಣು ಮುಚ್ಚುವ ಕೊನೆಯಾಸೆ! ಹೀಗಾಗಿ ಅರಮನೆಯ ಎದುರು ಹಲವು ದಿನಗಳ ವರೆಗೆ ಜನ ಜಂಗುಳಿ. ನೂಕು-ನುಗ್ಗಲು. (ಈ ಯಂತ್ರವನ್ನು ಈಗ ಮುಖ್ಯ ವಿದ್ಯುತ್ ಇಲಾಖೆಯ ಎದುರುಗಡೆ ವಸ್ತು ಪ್ರದರ್ಶನದ ರೂಪದಲ್ಲಿ ಇಡಲಾಗಿದೆ.)

ಈಗ ಹೇಗಿದೆ ದುಬ್ಯಾ?

ಅದೇ ದುಬ್ಯಾಯನ್ನು ಈಗ ನೋಡಿರಿ. ಅದರ ನಕ್ಷೆಯೇ ಬದಲಾಗಿದೆ. ಎಲ್ಲೆಡೆ ಹಸಿರು ತುಂಬಿದ ನೆಲ. ಅರಳಿ ನಿಂತಿರುವ ಹೂಗಳ ರಾಶಿ. ನೀರಿನ ಕಾರಂಜಿಗಳು. ನೆರಳಿಗೆ ಗಿಡ-ಮರಗಳು. ಅಲ್ಲಲ್ಲಿ ಸಣ್ಣ-ಪುಟ್ಟ ಪಾರ್ಕುಗಳು. ಅದರಲ್ಲೂ ಹತ್ತಾರು ಎಕರೆಗಳಲ್ಲಿ ಹಬ್ಬಿಕೊಂಡಿರುವ 'ಮಿರಕಲ್ ಗಾರ್ಡನ್' ನೋಡಿದರಂತೂ ಇದು ಮರುಭೂಮಿ ಅನ್ನುವುದೇ ಮರೆಯಬೇಕು. ಅದರಲ್ಲಿ ಸರಿ ಸುಮಾರು 50 ಮಿಲಿಯನ್ ಹೂಗಳು ನಗೆ ಚೆಲ್ಲುತ್ತಿವೆ. ಗಮ್ಮನೆ ಸೂಸುವ ಅದರ ಸುಗಂಧಕ್ಕೆ ಎಂತಹವರೂ

ತಲೆದೂಗಲೇ ಬೇಕು–ಮನ ಸೋಲಬೇಕು.

ಅಂದು ವಿದ್ಯುತ್ ದೀಪವಿಲ್ಲದೆ ಗಾಢ ಕತ್ತಲೆಯಲ್ಲಿ ತುಂಬಿದ ದುಬ್ಯಾ ಇದೀಗ ಕಣ್ಣು ಕೋರೈಸುವ ಬೆಳಕಿನಿಂದ ಮಿನುಗುತ್ತಿರುವ ಜಾದುನಗರಿ. ಇಡೀ ಮರಳು ಗಾಡನ್ನೇ ಮದುವೆ ಮನೆ ಶೃಂಗರಿಸಿದಂತೆ ಕಾಣುವ ರಾತ್ರಿಯ ನೋಟ.

ದುಬ್ಯಾಯ ಪರಿಚಯಕ್ಕೆ ಇವತ್ತು ಯಾವುದೇ ಸಾಕ್ಷಿ ಬೇಕಿಲ್ಲ. 'ಬುರ್ಜ್ ಖಲೀಫ' ಅನ್ನುವ ಸೌಧವೇ ಸಾಕು. ಅದು ಏರಿ ನಿಂತ ಎತ್ತರವನ್ನು ವಿಶ್ವದ ಯಾವ ಕಟ್ಟಡವೂ ಏರಿ ನಿಂತಿಲ್ಲ. 'ದುಬ್ಯಾ ಶಾಪಿಂಗ್ ಮಾಲ್'ನ ವಿಸ್ತಾರವೂ ಅಷ್ಟೇ. ಹತ್ತಿರ ಯಾವುದೇ ಮಾಲ್‌ನ ವಿಸ್ತಾರವೂ ಈ ದಾಖಲೆಯನ್ನು ಇನ್ನೂ ಮುರಿದಿಲ್ಲ.

ಕೇವಲ ಹತ್ತಾರು ವರ್ಷಗಳಲ್ಲಿ ಇಲ್ಲಿ ಹತ್ತಾರು ಹೊಸ ನಗರಗಳೇ ಹುಟ್ಟಿಕೊಂಡಿವೆ. ಪಾಟಕನ್ ಸಿಟಿ, ಡೌನ್‌ಟೌನ್, ಮದೀನಾ ಜುಮೇರಾ, ಮೀಡಿಯಾ ಸಿಟಿ, ಜೆ.ಎಲ್.ಟಿ., ಇಂಟರ್ ನ್ಯಾಷನಲ್ ಸಿಟಿ, ಫೆಸ್ಟಿವಲ್ ಸಿಟಿ... ಇತ್ಯಾದಿ ಇತ್ಯಾದಿ ಹೊಸ ಸೇರ್ಪಡೆಗಳು. ಅದರಲ್ಲೂ ಜುಮೇರಾ ಬೀಚ್‌ನಲ್ಲಿ, ಸಮುದ್ರವನ್ನೇ ಕಟ್ಟಿ ಹಾಕಿ ನಿರ್ಮಿಸಿದ 'ಪಾಮ್ ಜುಮೇರಾ' ನಿಜಕ್ಕೂ ಅದ್ಭುತ!

ಇಂದು ದುಬ್ಯಾ ಜನಪ್ರಿಯವಾಗಿರುವುದು ಹೊಸ ವಿನ್ಯಾಸಗಳ ಕಟ್ಟಡ ರೂಪರೇಖೆಗಳಿಂದ. ಅದರ ವಾಸ್ತು ಶಿಲ್ಪ, ವೈಭೋಗ, ತಂತ್ರಜ್ಞಾನ, ನವೀನ ಶೈಲಿ ಇತ್ಯಾದಿ ನಿಜಕ್ಕೂ ಬೆರಗುಗೊಳಿಸುತ್ತದೆ. ಉದಾಹರಣೆಗೆ, ನೀವು 'ಬುರ್ಜ್ ಖಲೀಫ'ದ ಲಿಫ್ಟ್‌ನೊಳಗೆ ಕಾಲಿಡಬೇಕು. ಅಲ್ಲಿನ 163ನೇ ಅಂತಸ್ತು ತಲುಪಲು ಕೇವಲ ಒಂದುವರೆ ನಿಮಿಷಗಳು ಸಾಕು. ಬುಲೆಟಿನ ಗುಂಡಿನಂತೆ ಅದರ ವೇಗ–ರಭಸ! ಇಲ್ಲಿ ನಿಂತು ನೋಡಿದರೆ ನಾಲ್ಕು ಸುತ್ತಲೂ ಗಗನ ಚುಂಬಿ ಕಟ್ಟಡಗಳು. ಅವುಗಳ ಸಾಮಾನ್ಯ ಅಂತಸ್ತುಗಳೇ 35–40. ಒಂದು ರೀತಿಯಲ್ಲಿ ಕಾಂಕ್ರೇಟ್ ಕಾಡೇ ಹಬ್ಬಿಕೊಂಡ ಹಾಗೆ!

ಇನ್ನು ದೇರಾ–ಬಾರ್ ದುಬ್ಯಾಗೆ ಹೋದರೆ ಅಲ್ಲಿ ಹೊಸ–ಹಳೇ ಕಟ್ಟಡಗಳ ಸಂಗಮ. ಹೆಚ್ಚಾಗಿ ಹಳೇ ಸೌಧಗಳಲ್ಲಿ ವ್ಯಾಪಾರದ ಮಳಿಗೆಗಳು. ಅದರಲ್ಲಿ ಖರೀದಿಗೆ ಕಾದಿಟ್ಟ ಬಾದಾಮ್, ಪಿಸ್ತ, ಬಾದಿಯಾನ್, ಖರ್ಜೂರ, ಜಾಫ್‌ರಾನ್, ಅಕ್‌ರೋಟ್, ಅಂಜೀರ್ ಇತ್ಯಾದಿಗಳ ಸಾಲು ಸಾಲು ಜೊತೆಗೆ 'ಆಬ್ರಾ' ಅನ್ನುವ ಕೊಲ್ಲಿಯ ದಡದಲ್ಲಿ ಲಂಗರು ಹಾಕಿ ನಿಂತ ಬೋಟುಗಳು. ಅದರಲ್ಲಿ ಸರಕು ತುಂಬುವ ಮಂದಿ. ಆಕಾಶದಲ್ಲಿ ಹಾರಾಡುವ ಹತ್ತಾರು ಬಗೆಯ ಹಕ್ಕಿಗಳು. ಇಲ್ಲಿಂದ 'ದೇರಾ' ಅಥವಾ 'ಬಾರ್ ದುಬ್ಯಾ' ತಲುಪಬೇಕಾದರೆ ನಾವು ಬಸ್ಸು ಅಥವಾ ರೈಲು ಹತ್ತಬೇಕಿಲ್ಲ. ಹುಟ್ಟು ಹಾಕುವ ಅಂಬಿಗನ ಕೈಯಲ್ಲಿ ಒಂದು ದಿರ್ಹಮ್‌ನ ನಾಣ್ಯ ಇಟ್ಟರೆ ಸಾಕು. ಆತ ಸಲೀಸಾಗಿ ದಡವನ್ನು ಮುಟ್ಟಿಸುತ್ತಾನೆ. ದಿನನಿತ್ಯ ಇಲ್ಲಿ ಸಾವಿರಾರು ಮಂದಿ ಈ ದೋಣಿಗಳನ್ನೇ ಏರಿ ಗುರಿ ಮುಟ್ಟುತ್ತಾರೆ.

❖ ❖ ❖

ರಸ್ತೆಗಳು ಮತ್ತು ಸಂಚಾರ:

ಇಲ್ಲಿಯ ಹೆದ್ದಾರಿಯಲ್ಲಿ ಏಕ ಕಾಲಕ್ಕೆ ಆರು ವಾಹನಗಳು ಸಾಗಬಹುದು. ತಾಸಿಗೆ 120–140 ಕಿ.ಮೀ. ಸಂಚರಿಸುವ ಈ ವಾಹನಗಳು, 60ರ ಕೆಳಗೆ ವೇಗ ತಗ್ಗಿಸಬಾರದು. ಅದಕ್ಕೆ ಸಖತ್ ದಂಡವಿದೆ. ಅದು ಹಿಂದಿನಿಂದ ಬರುವ ವೇಗಗಳಿಗೆ ತಡೆಯಾಗುತ್ತದೆ. ಜನಸಂಖ್ಯೆಗಿಂತ ವಾಹನಗಳೇ ಹೆಚ್ಚಾಗಿರುವ ದುಬ್ಯಾಯಲ್ಲಿ, ಲೈಸನ್ಸ್ ದೊರಕಿಸಿಕೊಳ್ಳುವುದು ಸುಲಭವಲ್ಲ. ಅದಕ್ಕೆ ಅನೇಕ ಪರೀಕ್ಷೆಗಳು ನೀಡಬೇಕು. ಅದೊಂದು ಹರ ಸಾಹಸವೇ ಸರಿ!

ನಮ್ಮಂತೆ ಇಲ್ಲಿಯ ರಸ್ತೆಗಳಲ್ಲಿ ಟ್ರಾಫಿಕ್ ಪೊಲೀಸರಿಲ್ಲ, ಕೈ ಬೀಸುವ, ಕೈ ಬಿಸಿ ಮಾಡಿ ಅನ್ನುವ ಪೊಲೀಸರೂ ಇಲ್ಲ. ಏನಿದ್ದರೂ ಕ್ಯಾಮರಾ ಮತ್ತು ರಾಡಾರ್‌ಗಳದ್ದೇ ಕಾರುಬಾರು. ಸಿಗ್ನಲ್ ಮುರಿದು

ವಿದ್ಯುತ್ ಮತ್ತು ನೀರು

ತೈಲ ಮೂಲದಿಂದಲೇ ವಿದ್ಯುತ್ ಉತ್ಪಾದಿಸುವ ಇಲ್ಲಿಯ ಸರಕಾರವು ಯಾವತ್ತೂ ಅದರ ಜೊತೆಗೆ ಕಣ್ಣು ಮುಚ್ಚಾಲೆ ಆಟವಾಡಿಲ್ಲ. ಗಗನ ಚುಂಬಿ ಕಟ್ಟಡ, ವಸತಿ ಸಂಕೀರ್ಣ, ಕೈಗಾರಿಕೆ, ಶಾಪಿಂಗ್ ಮಾಲ್, ಉತ್ಸಾಹ ಏನೇ ಬರಲಿ ಅದು ನಿರಂತರ ವಿದ್ಯುತ್ ಒದಗಿಸಿದೆ. ನೀರು ಅಷ್ಟೇ. ಅದಕ್ಕೆ ಎಂದೂ ತಡೆ ಬಂದಿಲ್ಲ. ಜಲವೇ ಇಲ್ಲದ ಈ ಮರುಭೂಮಿಯಲ್ಲಿ ಅದು ಜಲಧಾರೆಯನ್ನೇ ಹರಿಸಿದೆ. ತಂತ್ರಜ್ಞಾನದ ಮೂಲಕ ಕಡಲಿನ ಉಪ್ಪು ನೀರನ್ನೇ ಸಿಹಿ ನೀರಾಗಿ ಪರಿವರ್ತಿಸಿದ ಇಲ್ಲಿಯ ದೊರೆಯ ಭಗೀರಥ ಪ್ರಯತ್ನಕ್ಕೆ ಮೆಚ್ಚಲೇಬೇಕು.

ಇವತ್ತು ದುಬ್ಯಾಯ ಉದ್ದ–ಅಗಲಕ್ಕೂ ಕೃತಕ ಮಣ್ಣು ಹಾಯಿಸಿ ಮರುಭೂಮಿ ತುಂಬಾ ಹಸಿರು ಬೆಳೆಸಲಾಗಿದೆ. ಸಣ್ಣ–ಪುಟ್ಟ ತರಕಾರಿಗಳೂ ಇಲ್ಲಿಯ ಮಣ್ಣಿನಲ್ಲಿಯೇ ಬೆಳೆಸುತ್ತಾರೆ. ನಿಜಕ್ಕೂ ಇದು ಹಸಿರು ಕ್ರಾಂತಿ.

ಹೋದರಂತೂ ಅದು ಕೊಲೆಯತ್ನದಷ್ಟೇ ದೊಡ್ಡ ಅಪರಾಧ. ಅದಕ್ಕೆ ಜಾಮೀನು ಇಲ್ಲ. ಯಾರ ಶಿಫಾರಸೂ ಇಲ್ಲ. ವಾಹನವನ್ನು ಕೆಲವು ವಾರಗಳ ವರೆಗೆ ಮರುಭೂಮಿಯ ಸುಡು ಬಿಸಿಲಿನಲ್ಲಿ ನಿಲ್ಲಿಸ ಬೇಕಾದ ಶಿಕ್ಷೆ ಬೇರೆ, ಕೊನೆಗೆ ದಂಡದ ಜೊತೆಗೆ ಲೈಸನ್ಸ್‌ನ ಮೇಲೆ ಕಪ್ಪು ಪಾಯಿಂಟ್‌ಗಳು. ಅದು ವರುಷದಲ್ಲಿ ಹನ್ನೆರಡರ ಸಂಖ್ಯೆ ದಾಟಿ ಹೋದರೆ, ನಂತರ ಲೈಸನ್ಸ್ ರದ್ದಾಗುತ್ತದೆ.

ದುಬ್ಯಾಯ ಸಂಚಾರ ವ್ಯವಸ್ಥೆಯನ್ನು ನಿಭಾಯಿಸಲು ನೂರಾರು ಪೊಲೀಸರು ಕಂಟ್ರೋಲ್ ರೂಮಿನಲ್ಲಿ ಹಗಲು–ರಾತ್ರಿ ದುಡಿಯುತ್ತಾರೆ. ಅವರ ಸೂಕ್ಷ್ಮ ಕ್ಯಾಮರಾಗಳು ಬಹು ಮಹಡಿ ಕಟ್ಟಡಗಳಲ್ಲಿ, ವಿದ್ಯುತ್ ಕಂಬಗಳ ಮೇಲೆ, ಪಾರ್ಕಿನ ಗಿಡ–ಪೊದರುಗಳ ಮಧ್ಯೆ ಹೊಂಚು ಹಾಕುತ್ತಿರುತ್ತದೆ. ಎಲ್ಲೋ ಒಂದು ಕಡೆ ಅಪಘಾತವಾದರೆ ಇಡೀ ಪೊಲೀಸ್ ಕಂಟ್ರೋಲ್ ರೂಮ್ ಜಾಗೃತವಾಗುತ್ತದೆ. ತತ್‌ಕ್ಷಣ ಅಂಬುಲೆನ್ಸ್, ಅಗ್ನಿ ಶಾಮಕದಳ, ಕ್ರೇನ್, ಕಬ್ಬಿಣ ಕತ್ತರಿಸುವ ವಾಹನ ಇತ್ಯಾದಿ ಮಿಂಚಿನ ವೇಗದಲ್ಲಿ ಸ್ಥಳಕ್ಕೆ ಧಾವಿಸುತ್ತದೆ. ಟ್ರಾಫಿಕ್ ಜಾಮ್ ಇದ್ದರೆ, ವೈದ್ಯರ ಜೊತೆಗೆ ನೇರ ರಸ್ತೆಯ ಮಧ್ಯಕ್ಕೇ ಇಳಿದು ಬಿಡುತ್ತದೆ.

ಇಲ್ಲಿ ಚಾಲಕನ ತಪ್ಪಿನಿಂದ ಯಾವುದೇ ವ್ಯಕ್ತಿ ಮರಣಪಟ್ಟರೆ, ಅದು ಮಹಾ ಅಪರಾಧ. ಅದಕ್ಕೆ ಆತ ದೊಡ್ಡ ಮೊತ್ತವನ್ನು ಪರಿಹಾರದ ರೂಪದಲ್ಲಿ ಆತನ ಕುಟುಂಬಕ್ಕೆ ಪಾವತಿಸಬೇಕು. ಇಲ್ಲದಿದ್ದರೆ ಜೈಲಿನಲ್ಲಿ ಜೀವನವಿಡೀ ಕಳೆಯಬೇಕು. ಹೀಗಾಗಿ ಇಲ್ಲಿ ರಸ್ತೆಗೆ ಅಡ್ಡ ಬಂದ ವ್ಯಕ್ತಿಗೆ ರಾಜ ಮರ್ಯಾದೆ! "ದಯವಿಟ್ಟು ಮುಂದೆ ಸಾಗಿರಿ" ಅನ್ನುವ ವಿನಮ್ರ ವಿನಂತಿ. ಇದು ನಾವು ವ್ಯಕ್ತಿಯ ಜೀವಕ್ಕೆ ನೀಡುವ ಮಹತ್ವವನ್ನು ಸೂಚಿಸುತ್ತದೆ.

ನಮ್ಮ ರಸ್ತೆಗಳಂತೆ ಇಲ್ಲಿಯ ರಸ್ತೆಗಳಲ್ಲಿ ಏರು–ತಗ್ಗುಗಳಿಲ್ಲ. ಹೊಂಡ–ಗುಂಡಿಗಳಿಲ್ಲ. ಕಳಪೆ ಡಾಂಬರ್ ಇಲ್ಲ. ಎಲ್ಲವೂ ನುಣುಪು–ನಾಜೂಕು.

ಇನ್ನು ರಸ್ತೆಯ ಬದಿಗಳಲ್ಲಿ ಡಬ್ಬಾ ಅಂಗಡಿಗಳಿಲ್ಲ. ಗುಜರಿ ವ್ಯಾಪಾರಿಗಳಿಲ್ಲ, ಚಾ–ಕಾಫಿ, ತಿಂಡಿ, ಕಡ್ಲೆ, ಕಿತ್ತಳೆ ಮಾರುವ ಹುಡುಗರೂ ಇಲ್ಲ. ಭಿಕ್ಷುಕರು, ಕುಡುಕರು ಹುಡುಕಿದರೂ ಸಿಗಲಾರರು. ರಸ್ತೆಯ ಉದ್ದಕ್ಕೂ ದನ–ಕರು, ನಾಯಿ–ಬೆಕ್ಕು ಬಿಡಿ, ಕಸಕಡ್ಡಿಯೂ ಕಾಣಸಿಗದು. ಆದರೆ ಏರುತ್ತಿರುವ ಜನದಟ್ಟನೆಗೆ, ಹೊರನಾಡಿನಿಂದ ವಲಸೆ ಬರುತ್ತಿರುವ ಅರಬರಿಗೆ (ಮುಖ್ಯವಾಗಿ ಸಿರಿಯಾ, ಈಜಿಪ್ಟ್, ಯಮನ್) ಇಲ್ಲಿಯ ಟ್ರಾಫಿಕ್ ಜಾಮ್ ಸಮಸ್ಯೆಯಾಗಿ ಕಾಡಿದೆ. ಸರಕಾರ ಪರಿಹಾರದ ರೂಪದಲ್ಲಿ ಅನೇಕ ರಿಂಗ್ ರಸ್ತೆಗಳು, ಸೇತುವೆಗಳನ್ನು ನಿರ್ಮಿಸಿದೆ, ನಿರ್ಮಿಸುತ್ತಲೇ ಇದೆ. ಆದರೂ ಟ್ರಾಫಿಕ್ ಜಾಮ್ ಕರಗುವ ಲಕ್ಷಣಗಳು ಕಾಣುತ್ತಿಲ್ಲ.

❖ ❖ ❖

ಅರಬರು-ಮಹಿಳೆಯರು

ದುಬ್ಯಾಯ ಅರಬರು ಉದಾರಿಗಳು– ಸ್ನೇಹ ಜೀವಿಗಳು. ನಾವು ಯಾವತ್ತೂ ಅವರು ಯಾರ ಜೊತೆಯೂ ವಾದಕ್ಕೆ

ದುಬ್ಯಾಯಲ್ಲಿ ಎಲ್ಲರೂ ಸುಖಿಗಳೇ?

ಸಂಸಾರದ ನೊಗ ಕಟ್ಟಿ ಸಾಗುವ ಜನ ಸಾಮಾನ್ಯನಿಗೆ ದುಬ್ಯಾ ತುಂಬಾ ದುಬಾರಿ. ಇಲ್ಲಿ ಪತ್ನಿ–ಮಕ್ಕಳ ಜೊತೆಗೆ ಜೀವನ ಸಾಗಿಸಲು ಒಂದೋ ಉತ್ತಮ ವೇತನ ಇರಬೇಕು ಅಥವಾ ಲಾಭದಾಯಕ ವ್ಯಾಪಾರ–ವಹಿವಾಟು ಇರಬೇಕು. ಇಲ್ಲದಿದ್ದರೆ ಕ್ರೆಡಿಟ್ ಕಾರ್ಡ್‌ಗಳ ಚಲಾವಣೆಯಲ್ಲಿ ಪಳಗಿರಬೇಕು.

ದುಬ್ಯಾಯಲ್ಲಿ ಶಾಲೆ, ವಸತಿಗಳ ಬಾಡಿಗೆ, ವೈದ್ಯಕೀಯ ಶುಲ್ಕ, ಟೋಲ್‌ಗೇಟ್‌ನ ಸಲಿಕ್ ದರ, ಕಾರ್ ಪಾರ್ಕಿಂಗ್, ನೀರು, ವಿದ್ಯುತ್ ಬಿಲ್ ಇತ್ಯಾದಿ ತುಂಬಾ ಕಹಿ. ಪತಿ–ಪತ್ನಿ ಜೊತೆಯಾಗಿ ದುಡಿದರೂ, ಮುಕ್ಕಾಲು ಪಾಲು ಆದಾಯ ಇವುಗಳ ಖರ್ಚಿಗೇ ಸುರಿಯಬೇಕು. ಈ ಕಾರಣವಾಗಿ ದುಬ್ಯಾಯಲ್ಲಿ ಸಂಸಾರಿಗಳಿಗಿಂತ 'ಬ್ರಹ್ಮಚಾರಿ'ಗಳ ಸಂಖ್ಯೆಯೇ ಹೆಚ್ಚು.

ಅರಬ್ ನಿವಾಸಿಗಳಿಗೆ ನೀರು, ವಿದ್ಯುತ್, ಶಿಕ್ಷಣ, ಔಷಧ ಇತ್ಯಾದಿ ಪುಕ್ಕಟೆಯಾಗಿದ್ದರೆ ಅನಿವಾಸಿಗಳಿಗೆ ಅಂತಹ ಯಾವ ಸೌಲಭ್ಯಗಳೂ ಇಲ್ಲ. ಅವರು ಪ್ರತಿ ಎರಡು ವರ್ಷಕ್ಕೊಮ್ಮೆ ವೀಸಾ ನವೀಕರಿಸಬೇಕು. ಪ್ರತಿ ಸದಸ್ಯನಿಗೆ ಅದರ ಮೊತ್ತವೇ ಸುಮಾರು 22 ಸಾವಿರ ರೂಪಾಯಿಗಳು. ಈಗ ಜನವರಿಯಿಂದ ವ್ಯಾಟ್ ಬರಲಿದೆ. ಇದು ಇನ್ನೊಂದು ಹೊರೆ.

ಇಳಿದದ್ದು, ಜಗಳಕ್ಕೆ ನಿಂತಿರುವುದು ಕಂಡಿದ್ದೇ ಅಪರೂಪ. ಅವರ ದಾನ-ಧರ್ಮದ ಕೈಗಳನ್ನು ರಮಾಝಾನಿನ ಮಾಸದಲ್ಲಿ ನೋಡಬೇಕು. ಮನೆಯಲ್ಲಿ ಸಿದ್ಧಪಡಿಸಿದ ಭೋಜನವನ್ನು, ಪಿಕ್‌ಅಪ್‌ನಲ್ಲಿ ತುಂಬಿಸಿ ಮಸೀದಿಗಳಲ್ಲಿ ಹಂಚಿ ಬಿಡುತ್ತಾರೆ. ಮನೆಯ ಹೊಸ್ತಿಲಿಗೆ ಯಾರೇ ಬರಲಿ, ಖಾಲಿ ಕೈ ಕಳಿಸುವುದಿಲ್ಲ. ಅವರು ಮನೆಯ ಹೊರಭಾಗದಲ್ಲಿ 24 ತಾಸು ತಂಪು ನೀರು (ಕೂಲರ್ ವಾಟರ್) ಕಾದಿರುತ್ತದೆ.

ಇಲ್ಲಿಯ ಶ್ರೀಮಂತ ಅರಬರ ಹಣ, ಆಸ್ತಿ, ಅಂತಸ್ತು ನೋಡಿದರೆ ಬೆಚ್ಚಿ ಬೀಳಬೇಕು. ಆದರೆ ಅವರು ಈ ಹಣವನ್ನು ಯಾವುದೇ ಸ್ವಿಝ್ ಬ್ಯಾಂಕಿನಲ್ಲಿ ಅಥವಾ ಹೊರದೇಶಗಳಲ್ಲಿ ಬಚ್ಚಿಡುವುದಿಲ್ಲ. ಬದಲಾಗಿ ದುಬ್ಬಾಯ ಅಭಿವೃದ್ಧಿಗೆ ವಿನಿಯೋಗಿಸುತ್ತಾರೆ. ಹಾಗೆಯೇ ಯಾವುದೇ ಅಕ್ಕ-ಪಕ್ಕದ ದೇಶಗಳಲ್ಲಿ ಸಂಕಷ್ಟ ಹಾನಿ ಸಂಭವಿಸಿದರೆ ಇವರು ಮನಬಿಚ್ಚಿ ಸಹಾಯ ಮಾಡುತ್ತಾರೆ. ಅದರಲ್ಲಿ ಅಲ್ ಗುರೇರ್, ಅಲ್ ಪ್ರತೇಮ್, ಗಲದಾರಿ, ಜುಮಾಲ್ ಮಜೀದ್, ಅಲ್ ತಯಾರ್, ಲೂತ ಮುಂತಾದ ಮಿಲಿಯಾಧಿಪತಿಗಳು ಪ್ರಮುಖರು.

ಒಂದು ಕಾಲದಲ್ಲಿ ಕೇವಲ ಅಡುಗೆ ಕೋಣೆಗೆ ಸೀಮಿತವಾಗಿದ್ದ ಮಹಿಳೆಯರು ಇವತ್ತು ಶಿಕ್ಷಣದ ಮೂಲಕ ಉದ್ಯೋಗ ರಂಗಕ್ಕೂ ಕಾಲಿಟ್ಟಿದ್ದಾರೆ. ಅವರ ಶಿಕ್ಷಣದ ಎಲ್ಲಾ ಖರ್ಚನ್ನು ಸರಕಾರವೇ ಭರಿಸುತ್ತದೆ. ಲಂಡನ್-ಅಮೇರಿಕಾ ವಿಶ್ವವಿದ್ಯಾನಿಲಯಗಳಿಗೂ ಹೋದರೂ ಆ ಮೊತ್ತವನ್ನು ಸರಕಾರವೇ ಬೊಕ್ಕಸದಿಂದ ಉಚಿತವಾಗಿ ನೀಡುತ್ತದೆ. ಹೀಗಾಗಿ ಇವತ್ತು ದುಬ್ಬಾಯ ಮಹಿಳೆಯರು ಮಂತ್ರಿ ಮಂಡಲದಿಂದ ಮುಂದುವರಿದು, ಹಾರುವ ವಿಮಾನದ ಪೈಲೆಟ್ ಸೀಟಿನವರೆಗೂ ಕಾಣಿಸಿಕೊಂಡಿದ್ದಾರೆ. ದೊರೆ ಶೇಖ್ ಮುಹಮ್ಮದ್ ಈ ಮಹಿಳಾ ಜಾಗೃತಿಯನ್ನು ಅವರ ಅರಮನೆಯಿಂದಲೇ ಆರಂಭಿಸಿದ್ದಾರೆ. ಅವರ ಸುಪುತ್ರಿ ಏಷ್ಯನ್ ಕ್ರೀಡಕೂಟದಲ್ಲಿ ಭಾಗವಹಿಸಿ ಹಲವು ಪದಕಗಳನ್ನು ಯು.ಎ.ಇ.ಗೆ ತಂದು ಕೊಟ್ಟಿದ್ದಾರೆ. ಪತ್ನಿ ಉತ್ತಮ ಕುದುರೆ ಸವಾರೆ. ರಾಷ್ಟ್ರೀಯ-ಅಂತಾರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧಿಸಿ ಅನೇಕ ಪದಕಗಳನ್ನು ಬಗಲಿಗೆ ಹಾಕಿಕೊಂಡಿದ್ದಾರೆ.

ಇವತ್ತು ಇಲ್ಲಿಯ ಮಹಿಳೆಯನ್ನು ಛೇಡಿಸುವ ಪ್ರೀತಿಸುವ ಕೀಟಲೆಗೆ ಯಾರೂ ಮುಂದಾಗುತ್ತಿಲ್ಲ. ಆಕೆ ಪೊಲೀಸರಿಗೆ ಮಾಡುವ ಸಣ್ಣ ಕರೆಯೇ ಸಾಕು. ಮುಂದಿನ ಬದುಕೇ ನರಕವಾಗುವುದು. ನಮ್ಮಲ್ಲಿರುವ "ಅತ್ಯಾಚಾರ ಬಲಾತ್ಕಾರ" ಅನ್ನುವ ಪ್ರಯತ್ನಕ್ಕೆ ಕೈ ಹಾಕಿದರಂತೂ ಕೈ ಬಿಡಿ, **(58ನೇ ಪುಟಕ್ಕೆ)**

ದುಬ್ಬಾ ಶಾಪಿಂಗ್ ಫೆಸ್ಟಿವಲ್ (ಡಿ.ಎಸ್.ಎಫ್.)

ಇದೇ ಜನವರಿಯಿಂದ ಫೆಬ್ರವರಿಯವರೆಗೆ ದುಬ್ಬಾಯಲ್ಲಿ ಶಾಪಿಂಗ್ ಫೆಸ್ಟಿವಲ್ ಮೇಳ ಜರುಗಲಿದೆ. ಈ ಕುರಿತಾಗಿ ಅದು ವಿಶ್ವದ ಪ್ರಮುಖ ಪತ್ರಿಕೆಗಳಲ್ಲಿ-ಟಿ.ವಿ.ಗಳಲ್ಲಿ ಜಾಹೀರಾತು ಪ್ರಕಟಿಸುತ್ತದೆ. ತನ್ನ 'ಎಮರೇಟ್ಸ್ ಏರ್‌ಲೈನ್ಸ್'ನ ದರದಲ್ಲೂ ಅದು ರಿಯಾಯಿತಿಯನ್ನು ಘೋಷಿಸುತ್ತದೆ. ಉಳಿದ ವಿಮಾನ ಸಂಸ್ಥೆಗಳೂ ಕೂಡ ದರವನ್ನು ಆಕರ್ಷಕ ಬೆಲೆಗೆ ಇಳಿಸುತ್ತವೆ. ಹೀಗಾಗಿ ಈ ಮೇಳಕ್ಕೆ ಲಕ್ಷಾಂತರ ಮಂದಿ ಧಾವಿಸಿ ಬರುತ್ತಾರೆ.

ಇವರಿಗಾಗಿ ಸರಕಾರವು ಪ್ರತಿಯೊಂದು ಶಾಪಿಂಗ್ ಮಾಲ್‌ಗಳಲ್ಲಿ ಸಾಂಸ್ಕೃತಿಕ ಹಾಗೂ ಮನೋರಂಜನಾ ಕಾರ್ಯಕ್ರಮಗಳನ್ನು ಏರ್ಪಡಿಸುತ್ತದೆ. ನೂರಾರು ರಾಷ್ಟ್ರಗಳ ಕಲಾವಿದರು ಇಲ್ಲಿ ಜೊತೆಗೂಡುವ ಕಾರಣ ಹಲವು ವೈವಿಧ್ಯಮಯ ಕಾರ್ಯಕ್ರಮಗಳನ್ನು ವೀಕ್ಷಿಸಬಹುದು. ಉದಾಹರಣೆಗೆ ಗ್ಲೋಬಲ್ ವಿಲೇಜ್‌ನಲ್ಲಿ ಏರ್ಪಡುವ ಭಾರತೀಯ ಗಾಯನ-ನಾಟ್ಯ-ನೃತ್ಯ ಕುಣಿತವನ್ನೇ ತೆಗೆದುಕೊಳ್ಳಿ. ಕಾಶ್ಮೀರ, ರಾಜಸ್ತಾನ, ಆಂಧ್ರ, ಕೇರಳ, ಕರ್ನಾಟಕ ಎಂದು ಅಲ್ಲಿ ಹತ್ತಾರು ರಾಜ್ಯಗಳು ಒಂದಾಗುತ್ತವೆ. ಇಂತಹ ಅವಕಾಶ ನಮ್ಮೂರಿನಲ್ಲಿ ಕಾಣಸಿಗುವುದು ಬಹಳ ಕಷ್ಟ.

ಪ್ರತಿಯೊಂದು ಶಾಪಿಂಗ್ ಮಹಲ್‌ನಲ್ಲೂ ಖರೀದಿಗೆ ಬಹುಮಾನಗಳ ಆಮಿಷವಿದ್ದರೆ, ಇನ್ನೂರು ದಿರಹಮ್ ಟಿಕೇಟಿಗೆ ಪ್ರತಿದಿನ ಅದ್ದೂರಿಯ ಕಾರು ಗೆಲ್ಲುವ ಅವಕಾಶವಿದೆ. ಇದೇ ರೀತಿ ಐನೂರು ದಿರಹಮ್ ಬಂಗಾರದ ಖರೀದಿಯ ಮೇಲೆ ದಿನನಿತ್ಯ ಒಂದು ಕೆ.ಜಿ. ಚಿನ್ನ ಗೆಲ್ಲುವ ಅದೃಷ್ಟವಿದೆ. ಕೊನೆಯ ದಿನದಂದು 30 ಕೆ.ಜಿ. ಚಿನ್ನ ಗೆಲ್ಲುವ 'ಬಂಪರ್' ಕೊಡುಗೆ ಇದೆ. ವಿಶೇಷ ಅಂದರೆ ಹೀಗೆ 30 ಕೆ.ಜಿ. ಚಿನ್ನ ಗೆದ್ದವರಲ್ಲಿ ಭಾರತೀಯರೇ ಹೆಚ್ಚು!

ಸಂತೋಷದ ಹುಡುಕಾಟದಲ್ಲಿದ್ದೀರಾ?

ಟಿ. ಮುಹಮ್ಮದ್

ಬಡ ಕುಟುಂಬದಿಂದ ಬೆಳೆದು, ಉನ್ನತ ಶಿಕ್ಷಣ ಪಡೆದು ಇಂಜಿನಿಯರ್ ಆಗಿ ಇದೀಗ ಆರ್ಥಿಕವಾಗಿ ಒಳ್ಳೆಯ ಹಂತದಲ್ಲಿರುವ ನನ್ನ ಗೆಳೆಯನೊಂದಿಗೆ ಮಾತನಾಡುತ್ತಿರುವಾಗ ಆತ ಹೊಸ ಸಮಸ್ಯೆಯ ಕಡೆಗೆ ನನ್ನ ಗಮನ ಸೆಳೆದ. ಈಗ ಬದುಕಿನಲ್ಲಿ ಏನೂ ಕಡಿಮೆಯಿಲ್ಲ. ಆದರೆ ಬದುಕಿನಲ್ಲಿ ಎಂಜಾಯ್ ಮಾಡಬೇಕು, ಆಸ್ವದಿಸಬೇಕು, ಸಂಭ್ರಮಿಸಬೇಕು ಎಂದು ಬಯಸಿದರೆ ಅದು ಸುಲಭವಲ್ಲ. ಹಿಂದೆ ಅದು ಬಹಳ ಸುಲಭವಿತ್ತು. ಒಂದು ಕಿಲೋ ತುಪ್ಪದ ಅಕ್ಕಿ ಮತ್ತು ಒಂದು ಕೋಳಿ ತಂದರೆ ಇಂದು ಸಂಭ್ರಮವೇನೂ ಆಗುವುದಿಲ್ಲ. ಇದಲ್ಲದೆ ಜೀವನದಲ್ಲಿ ಬೇರೇನೂ ತೊಂದರೆಯಿಲ್ಲ.

ಈ ಪರಿಸ್ಥಿತಿಯಿಂದಾಗಿ ಇಂದು ಪ್ರವಾಸೋದ್ಯಮ ಬೆಳೆದು ನಿಂತಿದೆ. ಪ್ರವಾಸೋದ್ಯಮದ ಆರೋಗ್ಯಕರ ಮುಖವನ್ನು ನಿಷೇಧಿಸಬೇಕಿಲ್ಲ. ಆದರೆ ಆನಂದದ ಸಂತೋಷದ ಕ್ಷಣಗಳನ್ನು ನಾವು ಬೇಕಾದಷ್ಟು ಆಸ್ವದಿಸುತ್ತಿಲ್ಲ. ಅದು ಯಾವುದೆಂದರೆ ಪ್ರಕೃತಿ. ಯಾಂತ್ರಿಕ ಜೀವನದಿಂದ ಬಿಡುಗಡೆ ಹೊಂದಲು ಮನಸ್ಸು ಪ್ರಫುಲ್ಲವಾಗಲು ಈಗ ಪ್ರವಾಸ, ಪಿಕ್‌ನಿಕ್ ಸಾಮಾನ್ಯ. ಅಂತಹ ಯಾತ್ರೆಗಳು ಹೆಚ್ಚಾಗಿ ಪ್ರಕೃತಿಯನ್ನು ಆಸ್ವದಿಸಲಿಕ್ಕಾಗಿರುತ್ತದೆ. ಪ್ರಕೃತಿ ಸೊಬಗನ್ನು ಆಸ್ವದಿಸಲು ಇಚ್ಛೆಸದವರು ಇರಲಿಕ್ಕಿಲ್ಲ. ದೂರದೂರದ ಯಾತ್ರೆಗಳು ದುಬಾರಿಯೂ, ದೈಹಿಕ ಶ್ರಮವನ್ನೂ, ಸಮಯವನ್ನೂ ನುಂಗುತ್ತದೆ. ಅದು ಎಲ್ಲರಿಗೂ ಸಾಧ್ಯವಾಗುವುದೂ ಇಲ್ಲ ತನ್ನ ಸುತ್ತ ಮುತ್ತಲಿನ ಪ್ರಕೃತಿಯನ್ನು ಪ್ರಜ್ಞಾಪೂರ್ವಕವಾಗಿ ಆಸ್ವದಿಸಿದರೆ ಅದೇ ಸಾಕಾಗುತ್ತದೆ. ಯಾವುದೇ ಖರ್ಚು

ವೆಚ್ಚವಿಲ್ಲದೆ ಪ್ರಕೃತಿಯನ್ನು ಸವಿಯಲು ಸಾಧ್ಯವಾಗುತ್ತದೆ.

ಮಾನವ ನಿರ್ಮಿತ ವಸ್ತುಗಳನ್ನು ಹೆಚ್ಚು ಸಲ ನೋಡಿದರೆ ಬೋರಾಗುತ್ತದೆ. ಆದರೆ ಪ್ರಕೃತಿಯ ಸೌಂದರ್ಯವನ್ನು ನೋಡಿದಷ್ಟು ಸಾಕಾಗುವುದಿಲ್ಲ. ನದಿಯಲ್ಲೋ, ಕೆರೆಯಲ್ಲೋ ಎಷ್ಟೇ ಸಲ ಈಜಾಡಿದರೂ ನಿಮಗೆ ಜಿಗುಪ್ಸೆಯಾಗಿದೆಯಾ? ದಿನನಿತ್ಯ ಕಾಣುತ್ತಿದ್ದರೂ ಪ್ರಕೃತಿಯು ಸದಾ ಹೊಸತನದಿಂದ ಕೂಡಿರುತ್ತದೆ. ನಾವು ಹೀಗೆ ಸುಲಭದಲ್ಲಿ ಕೈಯೆಟಕುವ ಸೌಂದರ್ಯವನ್ನು ಎಷ್ಟು ಅನುಭವಿಸಿದ್ದೇವೆ?

ವಿದ್ಯುತ್‌ನ ಬೆಳಕಿನ ಪ್ರವಾಹದ ನಡುವೆ ನಮ್ಮಲ್ಲಿ ಎಷ್ಟು ಮಂದಿಗೆ ಬೆಳದಿಂಗಳನ್ನು ಕಾಣಲು ಸಾಧ್ಯವಾಗುತ್ತದೆ? ಮಳೆಯನ್ನು ನೆಲದಲ್ಲಿ ಇಂಗಿಸಲಾಗದೆ, ಎಲ್ಲವೂ ಕಡಲಿನೊಂದಿಗೆ ಲೀನವಾಗುತ್ತದೆಂದು ಮರುಗುವ ನಾವು ಮಳೆಯ ಸೌಂದರ್ಯವನ್ನು ಅನುಭವಿಸುತ್ತಿದ್ದೇವೆಯೆ? ಅದರ ನೀರಿನಲ್ಲಿ ಆಟವಾಡಲು ಸಾಧ್ಯವಾಗುತ್ತಿದೆಯೇ! ದೂರದ ಸ್ಥಳಗಳಿಗೆ ಒಂಟಿಯಾಗಿಯೂ, ಕುಟುಂಬದೊಂದಿಗೆಯೂ ಪ್ರವಾಸ ಮಾಡಿ ಒಟ್ಟಾಗಿ ಕುಳಿತು ಬೆಳದಿಂಗಳನ್ನು ಆಸ್ವದಿಸುವುದಿದೆ. ಮನೆಯ ಸಮೀಪವಿರುವ ಸ್ಥಳದಲ್ಲಿ ಸಂಜೆಯಾಗುವಾಗ ಪರಸರವನ್ನು ವೀಕ್ಷಿಸಿ ನೋಡಿ. ಎಷ್ಟೊಂದು ಆಹ್ಲಾದಕರವಾದ ಸನ್ನಿವೇಶಗಳು ಕಂಡುಬರುತ್ತದೆ.

ಸಮುದ್ರದಷ್ಟು ಮನುಷ್ಯನನ್ನು ಆಕರ್ಷಿಸುವ ವಸ್ತು ಬೇರೆ ಇರಲಿಕ್ಕಿಲ್ಲ. ಸಮುದ್ರವು ಪ್ರಕ್ಷುಬ್ಧವಾಗಿರುತ್ತದೆ. ಭೋರ್ಗರೆಯುತ್ತಿರುತ್ತದೆ. ಆದರೆ ಅದನ್ನು ನೋಡುವಾಗ ನಾವು ಶಾಂತರಾಗುತ್ತೇವೆ. ಅವರ ಭೋರ್ಗರೆತವು ತಾಳಬದ್ಧವಾಗಿರುತ್ತದೆ.

ಅತಿ ಬೋರಿಂಗ್ ಯಾತ್ರೆ ಯಾವುದೆಂದರೆ ವಿಮಾನಯಾನ ಮತ್ತು ಮನೋಹರವಾದ ಯಾತ್ರೆ ಅದು ಹಡಗಿನ ಯಾತ್ರೆಯೆಂದು ಹೇಳಲಾಗುತ್ತದೆ. ಸ್ವಲ್ಪ ಸಾಹಸ ಅಥವಾ ಧೈರ್ಯವಿದ್ದರೆ ಹಡಗಿಲ್ಲದೆಯೇ ಸಮುದ್ರದಲ್ಲಿ ಸಂಚರಿಸುವ ಬೇರೆ ಬೇರೆ ವಿಧಾನಗಳಿವೆ. ಸಮುದ್ರವು ನಮ್ಮನ್ನು ಆಡಲು ಕರೆಯುತ್ತಿದೆಯೆಂದು ನಮ್ಮೊಳಗಿನ ಪ್ರತಿ ಮಗುವಿಗೂ ತೋರುತ್ತದೆಯಲ್ಲವೇ? ನಮ್ಮ ಪ್ರತಿಯೊಬ್ಬರ ಒಳಗೂ ಒಂದು ಮಗು ಮಲಗಿದೆ. ಅದು ಅಡಗಿ ಕುಳಿತಿದೆ. ಮಾವು ಕಂಡರೆ ಮರ ಹತ್ತಲೂ, ಕೊಳ ಕಂಡರೆ ಹಾರಿ ಈಜಲೂ ತೋರುವಂತಹ ಮಗು. ಅದು ಪ್ರಕೃತಿಯ ಮಗು. ನಮ್ಮೊಳಗೆ ನಿದ್ರಿಸಿರುವ ಆ ಮಗುವನ್ನು ಎಬ್ಬಿಸುವ ಪ್ರಯತ್ನ ಮಾಡಬೇಕು. ಸುತ್ತಲಿನ ಸುಂದರ ಪ್ರಪಂಚ ಆ ಮಗು ನಮಗೆ ತೋರಿಸಿಕೊಡುತ್ತದೆ.

ಆಕಾಶ ನೋಡುವ ಭಾಗ್ಯವಿರುವ ಏಕೈಕ ಜೀವಿ ಮಾನವ. ಆಕಾಶವನ್ನು ನೋಡಲು ಸಾಧ್ಯವಿರುವ ರೀತಿಯಲ್ಲಿ ನಮ್ಮನ್ನು ಸೃಷ್ಟಿಸಲಾಗಿದೆ. 'ನೀವು ಆಕಾಶವನ್ನು ನೋಡುವುದಿಲ್ಲವೇ? ಅದು ಹೇಗೆ ಎತ್ತರಿಸಲ್ಪಟ್ಟಿತು ಎಂದು? ದೇವ ಗ್ರಂಥವು ನಮ್ಮೊಡನೆ ಕೇಳುತ್ತದೆ. ಆಕಾಶವನ್ನು ನೋಡುವುದರಿಂದ ಹತ್ತು ಪ್ರಯೋಜನಗಳಿವೆಯೆಂದು ವಿದ್ವಾಂಸರಾದ ಇಮಾಮ್ ಗಝ್ಝಾಲಿ ಹೇಳಿದ್ದಾರೆ. 1. ಮಾನಸಿಕ ಖಿನ್ನತೆಯನ್ನು ದೂರಗೊಳಿಸುತ್ತದೆ. 2. ಗೊಂದಲಗಳು ನಿವಾರಣೆಯಾಗುತ್ತದೆ. 3. ಭಯ ನಿವಾರಣೆಯಾಗುತ್ತದೆ. 4. ದೇವಸ್ಮರಣೆ ಉಂಟಾಗುತ್ತದೆ. 5. ದೇವನೊಂದಿಗೆ ಸಂಬಂಧ ಸುದೃಢವಾಗುತ್ತದೆ. 6. ಕೆಟ್ಟ ಚಿಂತನೆಗಳು ದೂರವಾಗುತ್ತದೆ. 7. ಗಾಬರಿ ಇಲ್ಲವಾಗುತ್ತದೆ. 8. ಮನಶ್ಶಾಂತಿ ದೊರೆಯುತ್ತದೆ. 9. ಸ್ನೇಹಿತರೊಂದಿಗಿನ ಸಂಬಂಧ ಗಾಢವಾಗುತ್ತದೆ. 10. ಎಲ್ಲಕ್ಕಿಂತ ಹೆಚ್ಚಾಗಿ ಆಕಾಶವು ಪ್ರಾರ್ಥಿಸುವ ಕಿಬ್ಲಾ ಆಗಿದೆ.

ಓರ್ವ ಸಾಹಿತಿ ಬರೆಯುತ್ತಾರೆ: "ಆಕಾಶದಂತೆ ನಮಗೆ ಸಾಂತ್ವನ ನೀಡುವ ಯಾವುದೂ ಇಲ್ಲ. ನಮಗೆ ತೀವ್ರ ದುಃಖವುಂಟಾದರೆ ಆಕಾಶವನ್ನು ನೋಡಿ ಮಲಗಿದರೆ ಸಾಕು. ಕಣ್ಣು ತೆರೆದು ಆಕಾಶದ ಅನಂತಸೀಮೆಯನ್ನು ವೀಕ್ಷಿಸುವಾಗ ಆಕಾಶದಾಚೆಗೆ ಇರುವ ಸಪ್ತ ಗಗನಗಳನ್ನು, ಅದರಲ್ಲಿರುವ ನಿಶ್ಯಬ್ಧತೆ, ಶೂನ್ಯತೆಯನ್ನು ದಿಟ್ಟಿಸುವಾಗ ಆಕಾಶವು ನಮಗೆ ತೋರುವ ಸಾಂತ್ವನ, ಸಂತೋಷ, ಪ್ರೀತಿ ಎಷ್ಟೆಂದು ಹೇಳಲು ಸಾಧ್ಯವಿಲ್ಲ."

ಯಾಂತ್ರಿಕ ಜೀವನದಿಂದ ಜಿಗುಪ್ಸೆ ಹೊಂದಿ, ಮನಸ್ಸನ್ನು ಪ್ರಫುಲ್ಲಗೊಳಿಸಲು ದೂರದ ಊರುಗಳಿಗೆ ಪ್ರವಾಸ ಹೋಗುವ ಜನರಿಗಾಗುವ ಪ್ರಯೋಜನವನ್ನು ನಾನು ತಳ್ಳಿಹಾಕುವುದಿಲ್ಲ. ಆದರೆ ನಾವಿನ್ನೂ ಮುಟ್ಟಿ ನೋಡದ, ಆಸ್ವದಿಸದ ಕಣ್ಣು ತುಂಬಿಕೊಳ್ಳದ ಹಲವಾರು ಸ್ಥಳಗಳು ನಮ್ಮ ಪರಿಸರದಲ್ಲಿದೆ. ಅವುಗಳನ್ನು ಆಸ್ವದಿಸುವ ಕಣ್ಣುಗಳು ಹಾಗೂ ಮನಸ್ಸು ನಮಗೆ ಬೇಕು. ಮುಂಜಾನೆಯ ಸೌಂದರ್ಯವನ್ನು ಅನುಭವಿಸದೆ ನಮಗೆ ವಿಶ್ವಾಸ ಜೀವನ ನಡೆಸಲು ಸಾಧ್ಯವಿಲ್ಲ. ವಿಶ್ವಾಸಿಯ ಜೀವನ ಆರಂಭವಾಗುವುದು ಸೂರ್ಯ ಉದಿಸಿದ ಬಳಿಕವಲ್ಲ. ಸೂರ್ಯೋದಯಕ್ಕಿಂತ ಮೊದಲು. ■

ಗಂಡ-ಹೆಂಡತಿ

ಗಂಡ: ನಾನು ನಿನ್ನ ಹತ್ತಿರ ಎಷ್ಟು ಹೇಳಿದ್ದೇನೆ ಊಟ ಪದಾರ್ಥ ತಯಾರಿಸುವಾಗ ಮೊಬೈಲ್ ನೋಡಬೇಡ ಎಂದು. ಪದಾರ್ಥಕ್ಕೆ ಉಪ್ಪು ಇಲ್ಲ, ಖಾರ ಇಲ್ಲ... ಚಪ್ಪೆ... ಚಪ್ಪೆ...

ಹೆಂಡತಿ: ನಾನು ನಿಮ್ಮ ಹತ್ತಿರ ಊಟ ಮಾಡುವಾಗ ಮೊಬೈಲ್‌ನಲ್ಲಿ ಆಡಬೇಡಿ ಎಂದು ಎಷ್ಟು ಸಲ ಹೇಳಿದ್ದೇನೆ. ನೀವು ಕೇಳಬೇಕಲ್ವ. ನೀವು ಊಟಕ್ಕೆ ಸಾರು ಹಾಕಿದ್ದಲ್ಲ... ನೀರು ಹಾಕಿದ್ದು... ಪದಾರ್ಥ ಸರೀ ಇದೆ. ಮೊಬೈಲ್ ಕೆಳಗಿಡಿ...

ಆ ಘಳಿಗೆಯ ಜ್ಞಾನ ಅಲ್ಲಾಹನ ಬಳಿಯಲ್ಲೇ ಇದೆ. ಅವನೇ ಮಳೆ ಸುರಿಸುತ್ತಾನೆ. ತಾಯಂದಿರ ಗರ್ಭಗಳಲ್ಲಿ ಬೆಳೆಯುತ್ತಿರುವುದೇನೆಂಬುದನ್ನು ಅವನೇ ಬಲ್ಲನು. ಯಾವ ಜೀವಿಯೂ ತಾನು ನಾಳೆ ಏನನ್ನು ಗಳಿಸುವೆನು ಎಂಬುದನ್ನು ತಿಳಿದಿರುವುದಿಲ್ಲ ಮತ್ತು ತನಗೆ ಯಾವ ಭೂಭಾಗದಲ್ಲಿ ಮರಣ ಬರುವುದೆಂಬ ಅರಿವು ಯಾರಿಗೂ ಇಲ್ಲ. ನಿಶ್ಚಯವಾಗಿಯೂ ಅಲ್ಲಾಹನೇ ಸರ್ವಜ್ಞನೂ ವಿವರಪೂರ್ಣನೂ ಆಗಿರುತ್ತಾನೆ. (ಪವಿತ್ರ ಕುರ್‌ಆನ್: 31: 34)

Sheikh Muneer
Sheikh Rasheed

SHEIKH
Jewellery Works

Behind Adishesha Temple, Katibase,
SINDHANUR - 584 128. Raichur Dist.
Ph: 08535-220625

ಓ ಸತ್ಯವಿಶ್ವಾಸಿಗಳೇ, ತಿಳುವಳಿಕೆ ಇದ್ದೂ ಅಲ್ಲಾಹ್ ಮತ್ತು ರಸೂಲರೊಂದಿಗೆ

ವಿಶ್ವಾಸಘಾತಕವೆಸಗಬೇಡಿರಿ ಮತ್ತು ನಿಮ್ಮ ಅಮಾನತ್(ವಿಶ್ವಸ್ಥನಿಧಿ)ಗಳಲ್ಲಿ

ವಿದ್ರೋಹವೆಸಗಬೇಡಿರಿ. ನಿಮ್ಮ ಸೊತ್ತುಗಳು ಮತ್ತು ನಿಮ್ಮ ಸಂತತಿಗಳು ವಾಸ್ತವದಲ್ಲಿ

ಪರೀಕ್ಷಾ ಸಾಧನಗಳೆಂದೂ ಪ್ರತಿಫಲ ನೀಡಲು ಅಲ್ಲಾಹನ ಬಳಿ

ಬೇಕಾದಷ್ಟಿದೆಯೆಂದೂ ತಿಳಿದುಕೊಳ್ಳಿರಿ. (ಪವಿತ್ರ ಕುರ್‌ಆನ್: 8: 27–28)

With best compliments from;

MUBARAK STONE CRUSHER

SINDHANUR, Raichur Dist.

ವಿವಾಹ ಸಮಾಲೋಚನೆಯಲ್ಲಿದ್ದೀರಾ?

■ ಆಯಿಶಾ ನಿದ ■

ಊರು ತೊರೆದು ಮದಿನ ತಲುಪಿದ ಪ್ರವಾದಿ ಮೂಸಾ(ಅ) ದಾರಿಯಲ್ಲಿ ಆ ಇಬ್ಬರು ಹೆಣ್ಣು ಮಕ್ಕಳನ್ನು ನೋಡಿದರು. ಒಂದು ನೀರು ತೆಗೆಯುವ ಸ್ಥಳದಲ್ಲಿ ಜನರು ಗುಂಪು ಸೇರಿದ್ದರು. ಜನರ ಜಂಗುಳಿಯಿಂದ ಸ್ವಲ್ಪ ದೂರದಲ್ಲಿ ಈ ಹುಡುಗಿಯರು ನೀರು ಸಂಗ್ರಹಿಸಲಿಕ್ಕಾಗಿ ಕಾದು ನಿಂತಿದ್ದರು. ಬಲಾಢ್ಯರ ಮಧ್ಯೆ ನೀರು ಸಂಗ್ರಹಿಸಲು ಪ್ರಯಾಸ ಪಡುತ್ತಿದ್ದ ಆ ಹುಡುಗಿಯರಿಗೆ ಮೂಸಾ(ಅ) ಸಹಾಯ ಮಾಡುತ್ತಾರೆ. ಯುವಕರಾಗಿದ್ದ ಮೂಸಾ(ಅ)ರಿಗೆ ಅದು ಸುಲಭದ ಕೆಲಸವಾಗಿತ್ತು. ಬಹಳ ಬೇಗ ನೀರಿನೊಂದಿಗೆ ಮನೆಗೆ ಹಿಂತಿರುಗಿದ ಯುವತಿಯರೊಂದಿಗೆ ತಂದೆ ಕಾರಣ ಕೇಳುತ್ತಾರೆ. ಅವರಿಂದ ವಿಷಯವನ್ನು ತಿಳಿದ ತಂದೆ ಒಬ್ಬ ಮಗಳನ್ನು ಕಳುಹಿಸಿ ಮೂಸಾ(ಅ)ರನ್ನು ಕರೆಸಿಕೊಳ್ಳುತ್ತಾರೆ. ಚಿಂತಾಕ್ರಾಂತರಾದ ಮೂಸಾರೊಂದಿಗೆ ಕಾರಣಗಳನ್ನು ಕೇಳುತ್ತಾರೆ. ಪ್ರಯಾಣದ ಮಧ್ಯೆ ಒಬ್ಬರು ತನಗೆ ಮನಬಿಚ್ಚಿ ಮಾತನಾಡಲು ಅವಕಾಶ ಮಾಡಿ ಕೊಟ್ಟಂತಾಯಿತು ಮೂಸಾರಿಗೆ. ಅವರು ಎಲ್ಲ ವಿಷಯಗಳನ್ನು ಆ ಯುವತಿಯರ ತಂದೆ ಶುಐಬ್‌ರಿಗೆ ತಿಳಿಸುತ್ತಾರೆ. ಈ ಮಾತುಕತೆಗಳನ್ನು ಮರೆಯಲ್ಲಿ ನಿಂತು ಆಲಿಸಿದ ಯುವತಿ ತಂದೆಯೊಂದಿಗೆ ನಾಚಿಕೆಯಿಂದ ಹೀಗೆ ಹೇಳಿದರು, "ಅಪ್ಪಾ... ನಮಗವರಿಂದ ಮನೆಯ ಕೆಲಸ ಮಾಡಿಸಬಹುದಲ್ಲವೇ? ಅದಕ್ಕೆ ಈ ವ್ಯಕ್ತಿ ಶಕ್ತರಿದ್ದಾರೆ. ಆಡುಗಳನ್ನು ಮೇಯಿಸಲು ಸಿಕ್ಕಿದರೆ ಒಳ್ಳೆಯದಲ್ಲವೇ? ನಮ್ಮೂರಿನಲ್ಲಿ ಇಂತಹ ಉತ್ತಮ ವ್ಯಕ್ತಿಗಳು ಸಿಗುವುದಿಲ್ಲ ಅಲ್ಲವೇ?" ಮಗಳ ಮಾತಿನಲ್ಲಿ ಆಕೆಗೆ ಹೇಳಲು ಸಾಧ್ಯವಾಗದ ಯಾವುದೋ ವಿಷಯ ಅಡಗಿರುವುದನ್ನು ತಂದೆ ಗ್ರಹಿಸಿಕೊಂಡರು. ಆ ತಂದೆ ಬುದ್ಧಿವಂತ ವ್ಯಕ್ತಿಯಾಗಿದ್ದರು. ಮಗಳ ಮನಸ್ಸನ್ನು ಅವಳು ಹೇಳದೆ ತಿಳಿದುಕೊಂಡರು. ಬಳಿಕ ಮೂಸಾರ ಮುಂದೆ ಕೆಲವು ನಿರ್ದೇಶನಗಳನ್ನು ನೀಡಿದರು. ನನ್ನ ಮಕ್ಕಳ ಪೈಕಿ ಒಬ್ಬಳನ್ನು ನಿನಗೆ ವಿವಾಹ ಮಾಡಿಕೊಟ್ಟರೆ ನಿನಗದು ಒಪ್ಪಿಗೆಯೇ? ಎಂದು ಪ್ರಶ್ನಿಸಿ ಎಂಟು ಅಥವಾ ಹತ್ತು ವರ್ಷಗಳ

ಕಾಲ ನನ್ನ ಜೊತೆಗಿದ್ದು ಕೆಲಸ ಮಾಡಬೇಕು ಎಂಬ ಕರಾರನ್ನು ವಿಧಿಸಿದರು. ಮೂಸಾ ಅದಕ್ಕೊಪ್ಪಿ ಅವರ ಮಗಳನ್ನು ವಿವಾಹವಾದರು.

ನಮ್ಮ ಸಮಾಜದಲ್ಲಿ ಅಷ್ಟು ಸ್ವೀಕಾರಾರ್ಹವೆನಿಸದೆ ಇರುವ ಕೆಲವು ವಿಷಯಗಳನ್ನು ಮೇಲಿನ ಚಾರಿತ್ರಿಕ ಘಟನೆಯು ಒಳಗೊಂಡಿದೆ. ಮೊತ್ತ ಮೊದಲನೆಯದು, ಓರ್ವ ಹೆಣ್ಣು ಮಗಳು ವಿವಾಹದ ಬಗ್ಗೆ ಪ್ರಸ್ತಾಪಿಸುವುದು ಎಂಬುದು... ದೇವನೇ! ನಮ್ಮ ಮಧ್ಯೆ ಓರ್ವ ಹೆಣ್ಣು ಮಗಳು ತಾನು ಇಂತಿಂತಹವನನ್ನು ವಿವಾಹವಾಗ ಬಯಸುತ್ತೇನೆ ಎಂದು ಮುಂದೆ ಬರುವುದಕ್ಕೆ ಸಾಧ್ಯವೇ?" ಆ ರೀತಿಯ ಪ್ರಸ್ತಾಪ ಹುಡುಗನ ಕಡೆಯಿಂದ ಬರಬೇಕಾದುದಲ್ಲವೇ? ಅದಲ್ಲವೇ ಪದ್ಧತಿ. ಹೆಣ್ಣು ಅಥವಾ ಅವಳ ಮನೆಯವರು ವರಾನ್ವೇಷಣೆಗೆ ಹೋಗುವುದು ಎಂಬುದೇ ಸ್ವಲ್ಪ ಕೆಳಮಟ್ಟದ ಕೆಲಸವೆಂದು ಪರಿಗಣಿಸಲಾಗುತ್ತದೆ.

ಘಟನೆಯ ಎರಡನೆಯ ವಿಶೇಷತೆ ಏನೆಂದರೆ ಆ ಯುವಕನ ಬಗ್ಗೆ ಹೆಚ್ಚು ತಿಳಿದಿರುವುದು ಆ ಯುವತಿಗೆ. ತಂದೆ ಅವರನ್ನು ಕಂಡು ಮಾತನಾಡಿಸಿದ್ದು ಮಾತ್ರ. ಮಗಳು ಅವನನ್ನು ಹೊರಗೆ ನೋಡಿದ್ದಳು. ಆ ವ್ಯಕ್ತಿ ಅವಳಿಗೆ ಸಹಾಯ ಮಾಡಿದ್ದ. ಮನೆಗೆ ಬಂದ ಬಳಿಕ ತಂದೆಯ ಆದೇಶದಂತೆ ಆ ಯುವಕನನ್ನು ಮನೆಗೆ ಕರೆತರುವ ಕೆಲಸವನ್ನು ನಿರ್ವಹಿಸಿದ್ದೂ ಈ ಯುವತಿಯೇ. ಇದು ಕೂಡಾ ಸ್ವಲ್ಪ ಕಠಿಣ ವಿಷಯವಾಗಿ ಗೋಚರಿಸುತ್ತದೆ. ಮೂರನೆಯ ವಿಶೇಷತೆ ಆ ವ್ಯಕ್ತಿಗೆ ಯಾವುದೇ ಉದ್ಯೋಗ ಇರಲಿಲ್ಲ. ಜೊತೆಗೆ ಒಬ್ಬ ಅಪರಿಚಿತ ವ್ಯಕ್ತಿ. ಆ ಕುಟುಂಬ ಅರಬರದ್ದಾಗಿತ್ತು. ಬಲಿಷ್ಠ ಪಾರಂಪರ್ಯವುಳ್ಳ ಕುಟುಂಬ. ಆ ಯುವಕ ಇಸ್ರಾಈಲಿ ವಂಶಜ. ಮಾತ್ರವಲ್ಲ, ವಧಾ ಶಿಕ್ಷೆಗೆ ಸೂಚಿಸಲ್ಪಟ್ಟ ವ್ಯಕ್ತಿ. ಆದರೂ ಆ ಮಗಳು ಮೂಸಾರ ಬಗ್ಗೆ ವಿಶ್ವಾಸ ತಾಳಿದರು. ಮತ್ತು ಈ ವ್ಯಕ್ತಿ ವಿಶ್ವಸ್ಥ ಎಂದು ತಂದೆಯೊಂದಿಗೆ ಹೇಳಿದ್ದರು. ಈ ಘಟನೆಯನ್ನು ಮುಂದಿಟ್ಟು ವಿಶ್ಲೇಷಿಸುವುದಾದರೆ ಯುವಕ–ಯುವತಿಯರು ತಾವು ವಿವಾಹವಾಗ ಬಯಸುವುದನ್ನು ಹೇಳಲು ಹೆದರಬಾರದು.

ಇಂದು ವಿವಾಹ ಸಮಾಲೋಚನೆ ನಡೆಯುವಾಗ ಕೇವಲ ಅತಿಶಯೋಕ್ತಿಯ ವರ್ಣನೆಗಳು ಕಾಣಸಿಗುತ್ತದೆ. ಅದು ಇದೆ, ಇದು ಇದೆ... ಹೇಳುವಾಗ ಎಲ್ಲವೂ ಇರುತ್ತದೆ. ವಿವಾಹವಾಗುವವರೆಗೆ ಹೇಗಾದರೂ ಮುಂದುವರಿಯಲು ಈ ಎಲ್ಲಾ ನಾಟಕ. ಸಾವಿರ ಸುಳ್ಳು ಹೇಳಿಯಾದರೂ ಮದುವೆ ಮಾಡು

ಓ ಸತ್ಯವಿಶ್ವಾಸಿಗಳೇ, ನಿಮಗಾರಿಗಾದರೂ ಮರಣದ ಕಾಲ ಬಂದಾಗ ಮತ್ತು ಅವನು 'ಉಯಿಲು' ಮಾಡುತ್ತಿರುವಾಗ ನಿಮ್ಮ ಕೂಟದಿಂದ ಇಬ್ಬರು ನ್ಯಾಯಶೀಲರನ್ನು ಸಾಕ್ಷಿಗಳನ್ನಾಗಿರಿಸಿಕೊಳ್ಳಬೇಕು ಅಥವಾ ನೀವು ಪ್ರಯಾಣದಲ್ಲಿದ್ದಾಗ ನಿಮಗೆ ಮರಣ ಯಾತನೆಯುಂಟಾದರೆ ಪರ(ಧರ್ಮೀಯ)ರಿಂದಲಾದರೂ ಇಬ್ಬರನ್ನು ಸಾಕ್ಷಿಗಳಾಗಿರಿಸಿಕೊಳ್ಳಿರಿ. ಆ ಬಳಿಕ ಸಂದೇಹವೇನಾದರೂ ಉಂಟಾದರೆ ಇಬ್ಬರು ಸಾಕ್ಷಿದಾರರನ್ನೂ ನಮಾಝಿನ ಬಳಿಕ (ಮಸೀದಿಯೊಳಗೆ) ತಡೆದಿರಿಸಬೇಕು. ಅವರು ಅಲ್ಲಾಹನ ಪ್ರಮಾಣ ಮಾಡುತ್ತ, "ಒಬ್ಬನು ನಮ್ಮ ಬಂಧು ಬಳಗದವನೇ ಆಗಿದ್ದರೂ (ನಾವು ಅವನಿಗೆ ರಿಯಾಯಿತಿ ತೋರಿಸುವವರಲ್ಲ) ನಾವು ಯಾವುದೇ ಸ್ವಂತ ಲಾಭಕ್ಕಾಗಿ ಸಾಕ್ಷ್ಯ ವಿಕ್ರಯ ಮಾಡುವವರಲ್ಲ ಮತ್ತು ಅಲ್ಲಾಹನಿಗೆ ಸಂಬಂಧಿಸಿದ ಸಾಕ್ಷ್ಯವನ್ನು ಅಡಗಿಸುವವರಲ್ಲ. ಒಂದು ವೇಳೆ ನಾವು ಹಾಗೆ ಮಾಡಿದರೆ ಪಾಪಿಗಳಲ್ಲಿ ಗಣಿಸಲ್ಪಡುವೆವು" ಎಂದು ಹೇಳಬೇಕು. (ಪವಿತ್ರ ಕುರ್‌ಆನ್: 5: 106)

With best compliments from;

MOHAMMED AYYUB SAVANOOR

President, Rabita-e-Millath, Hubli

ಎಂಬುದು ಇಂದಿನ ನೀತಿ. ಮನುಷ್ಯರೆಂದ ಮೇಲೆ ಕೊರತೆ ಎಲ್ಲರಲ್ಲಿಯೂ ಇರುತ್ತದೆ. ಎಲ್ಲ ಕೊರತೆಗಳನ್ನು ಹೇಳಬೇಕೆಂದಿಲ್ಲ. ಆದರೆ ಹೇಳಲೇಬೇಕಾದ ಕೊರತೆಗಳನ್ನು ಹೇಳದಿರಲು ಸಾಧ್ಯವಿಲ್ಲ. ಬರುವ ಹೆಣ್ಣು ಮಗಳನ್ನು ಸಮಸ್ಯೆಗೊಳಪಡಿಸುವ ಮುಂದಿನ ಕೌಟುಂಬಿಕ ಜೀವನವನ್ನು ತೊಂದರೆಗೊಳಪಡಿಸುವ ಸಾಧ್ಯತೆಯಿರುವ ಕೊರತೆಗಳನ್ನು ಹೇಳಲೇಬೇಕು.

ಈ ಚಾರಿತ್ರಿಕ ಘಟನೆಯ ಮತ್ತೊಂದು ಮುಖ ವಿಷಯ ತನ್ನ ಮನೆಯಲ್ಲಿ ಎಂಟು ಅಥವಾ ಹತ್ತು ವರ್ಷಗಳ ಕಾಲ ಕೆಲಸ ಮಾಡಬೇಕೆಂಬ ಶರ್ತದೊಂದಿಗೆ ಮಗಳನ್ನು ಮದುವೆ ಮಾಡಿ ಕೊಡಲಾಗುತ್ತದೆ. ಪತ್ನಿಯ ಮನೆಯಲ್ಲಿರುವುದು ಅವಳ ತಂದೆಯ ಜೊತೆ ಕೆಲಸ ಮಾಡುವುದು ಇತ್ಯಾದಿಗಳನ್ನು ನಮ್ಮ ಇಂದಿನ ಸಮಾಜ ಬಹಳ ಕೆಟ್ಟದಾಗಿ ಚಿತ್ರಿಸುತ್ತದೆ. ಪುರುಷತ್ವವಿಲ್ಲದವನೆಂದೂ ಇಂತಹವರ ಬಗ್ಗೆ ಹೇಳಲಾಗುತ್ತದೆ. ಆದರೆ ಓರ್ವ ಪ್ರವಾದಿಯ ಬಗ್ಗೆ ಯಾರಿಗಾದರೂ ಹಾಗೆ ಭಾವಿಸಲು ಸಾಧ್ಯವೇ? ಪವಿತ್ರ ಕುರ್‌ಆನಿನಲ್ಲಿ ಪ್ರವಾದಿಗಳ ಜೀವನವನ್ನು ನಮಗೆ ಮಾದರಿಯಾಗಿಯಲ್ಲವೇ ಕಲಿಸಲಾಗಿರುವುದು. ಹಾಗಾದರೆ ಈ ಮಾದರಿ ಎಂದೂ ಕೆಟ್ಟದಾಗಿರಲು ಸಾಧ್ಯವಿಲ್ಲ. ನಾಳೆಯಿಂದ ಪತ್ನಿಯ ಮನೆಯಲ್ಲೇ ಹೋಗಿ ಬಿಡಾರ ಹೂಡಿ ಎಂಬುದು ಇಲ್ಲಿನ ಉದ್ದೇಶವಲ್ಲ. ಬದಲಾಗಿ ಯಾರಾದರೂ ಪತ್ನಿಯ ಮನೆಯಲ್ಲಿ ಅವಳ ಕುಟುಂಬದೊಂದಿಗೆ ಜೀವಿಸುತ್ತಿರುವವರಾದರೆ ಅವರ ಬಗ್ಗೆ ಕೆಳಸ್ತರದಲ್ಲಿ ಮಾತನಾಡುವುದಕ್ಕೆ ಯಾವುದೇ ಹಕ್ಕಿಲ್ಲ ಎಂಬುದು ವಾಸ್ತವ. ಹುಟ್ಟೂರು ತೊರೆದು ಬಂದ ಯುವಕನಿಗೆ ಅಗತ್ಯವಿದ್ದುದು ವಾಸಯೋಗ್ಯ ಮನೆ ಮತ್ತು ಕೆಲಸ. ಎರಡನ್ನೂ ಜೊತೆಗೆ ಪತ್ನಿಯನ್ನೂ ನೀಡುವ ಉದಾರತೆಯನ್ನು ಶುಐಬ್(ಅ) ತೋರಿಸಿದ್ದರು. ಇದು ಅವರ ಯುಕ್ತಿಯಾಗಿತ್ತು. ಎಂಟು ವರ್ಷಗಳ ಬಳಿಕ ತನ್ನ ಕಾಲ ಮೇಲೆ ತಾನು ನಿಲ್ಲುವಷ್ಟು ಸ್ವಾವಲಂಬಿಯಾದರೆ ಹೋಗು. ಇಲ್ಲದಿದ್ದರೆ ಮತ್ತೆರಡು ವರ್ಷಗಳ ಕಾಲ ಜೊತೆಗಿರು ಎಂಬುದು ಆ ತಂದೆಯ ಲೆಕ್ಕಾಚಾರವಾಗಿತ್ತು. ಇದಕ್ಕುತ್ತರವಾಗಿ ಮೂಸಾ(ಅ)ರು ಹೇಳಿದ್ದರು, "ಎಂಟು ಹತ್ತು ವರ್ಷಗಳ ಬಳಿಕ ನನಗೆ ಹೋಗಲು ಅನುಮತಿ ನೀಡಬೇಕು. ಅದಕ್ಕೆ ತಡೆಯಬಾರದು." ಅದನ್ನು ಆ ತಂದೆ ಅಂಗೀಕರಿಸಿದರು. ಮಕ್ಕಳ ಗಂಡಂದಿರನ್ನು ಸಂಕಷ್ಟಕ್ಕೆ ಸಿಲುಕಿಸಬಾರದೆಂಬ ಸಂದೇಶ ಕೂಡಾ ಇಲ್ಲಿ ಸಿಗುತ್ತದೆ.

ಇಲ್ಲಿ ವಿವಾಹವೆಂಬುದು ಎಷ್ಟು ಶೀಘ್ರವಾಗಿ ನಡೆಯಿತು ಎಂಬುದನ್ನು ಕೂಡಾ ಗಮನಿಸಬೇಕು. ಮಗಳು ಓರ್ವ ಯುವಕನನ್ನು ನೋಡುತ್ತಾಳೆ. ತಂದೆಯೊಂದಿಗೆ ಹೇಳುತ್ತಾಳೆ. ಅವರು ಅವನೊಂದಿಗೆ ಮಾತನಾಡುತ್ತಾರೆ. ಒಳ್ಳೆಯವನೆಂದು ತಿಳಿಯುತ್ತಾರೆ. ಮಗಳು ಹೇಳದೆಯೇ ಅವಳ ಮನಸ್ಸನ್ನು ಅರಿಯುತ್ತಾರೆ. ವಿವಾಹ ಪ್ರಸ್ತಾಪ ಮಡುತ್ತಾರೆ. ವಿವಾಹ ಮಾಡಿ ಕೊಡುತ್ತಾರೆ. ಮುಗಿಯಿತು. ನಮ್ಮೂರಿನ ವಿವಾಹದ ಬಗ್ಗೆ ಆಲೋಚಿಸಿ ನೋಡಿ. ಕುಟುಂಬದ ಎಲ್ಲರೊಂದಿಗೂ ಕೇಳಿ ಅರಿತು ಹತ್ತು ಹದಿನಾರು ಕಡೆ ಪ್ರಶ್ನಿಸಿ ಬಹಳ ಪ್ರಯಾಸದಿಂದ ವಿವಾಹ ಸಮಾಲೋಚನೆ ನಡೆಯುತ್ತದೆ. ಗಂಡು, ಹೆಣ್ಣಿನ ಬಗ್ಗೆ ಅರಿಯುವುದು ಒಳ್ಳೆಯದೇ, ಆದರೆ ಎಲ್ಲದಕ್ಕೂ ಒಂದು ಮಿತಿ ಇರಬೇಕು. ವಿವಾಹ ಪ್ರಾಯಕ್ಕೆ ಬಂದ ಯುವಕ ಯುವತಿಯರನ್ನು ಆದಷ್ಟು ಬೇಗ ವಿವಾಹ ಮಾಡಿಸುವುದು ಒಳ್ಳೆಯದು.

ಇನ್ನೊಂದು ವಿಷಯ ಹುಡುಗನ ಹೆತ್ತವರ ಬಗ್ಗೆ ಅವರಿಗೆ ಯಾವಾಗಲೂ ತಮ್ಮ ಮಗ ಸುಂದರ, ಸದ್ಗುಣ ಸಂಪನ್ನ. ಅವನಲ್ಲಿ ಒಂದು ಕೊರತೆಯನ್ನು ಕಾಣಲು ಅವರಿಂದ ಸಾಧ್ಯವಿಲ್ಲ. ವಿವಾಹ ಮಾರ್ಕೆಟ್‌ನಲ್ಲಿ ಅತಿ ಹೆಚ್ಚು ಬೆಲೆ ಬಾಳುವವನು ತನ್ನ ಮಗ ಎಂಬುದು ಎಲ್ಲ ಮಾತಾಪಿತರ ಅಭಿಪ್ರಾಯ. ಆದುದರಿಂದ ಯಾವ ಹೆಣ್ಣು ಮಗಳೂ ಅವರ ಕಣ್ಣಿಗೆ ಹಿಡಿಸುವುದಿಲ್ಲ. ಹುಡುಗಿ ಸರಿಯಾಗಿ ನಗುವುದಿಲ್ಲ. ಚಹಾ ತಂದಿಟ್ಟ ರೀತಿ ಸರಿಯಾಗಿರಲಿಲ್ಲ. ಹುಡುಗಿಯ ಮೂಗು ಉದ್ದ ಈ ರೀತಿ ಎಲ್ಲ ಹುಡುಗಿಯರನ್ನು ಸಾರಾಸಾಗಟಾಗಿ ತಿರಸ್ಕರಿಸುತ್ತಾರೆ. ನನಗೆ ಹುಡುಗಿ ಹಿಡಿಸಿದೆ ಎಂದು ಎಲ್ಲಾದರೂ ಹುಡುಗ ತಪ್ಪಿ ಬಾಯಿ ಬಿಟ್ಟರೆ ಮತ್ತೆ ಹೆತ್ತಮ್ಮನ ಕಣ್ಣೀರನ್ನು, ಗಲಾಟೆಯನ್ನು ನೋಡುವವರಾರು?

ಸಂತೋಷಕರವಾದ ಮನೆಯ ವಾತಾವರಣವಿದ್ದರೆ ಮಾತ್ರ ಮಕ್ಕಳು ಹೆತ್ತವರೊಂದಿಗೆ ತಮ್ಮ ಮನಸ್ಸಿನ ಇಚ್ಛೆಯನ್ನು ಪ್ರಕಟಿಸಬಲ್ಲರು. ಹಾಗಿದ್ದಾಗ ಮಾತ್ರ ದಾರಿ ತಪ್ಪಿದರೆ ಸರಿ ಮಾರ್ಗಕ್ಕೆ ಅವರನ್ನು ತರಲು ನಿಮ್ಮಿಂದ ಸಾಧ್ಯವಾಗಬಹುದು. ■

ಬೆಂಕಿ

ಬೆಂಕಿ
ಒಂದು
ವಿಚಿತ್ರ ವಸ್ತು...
ಸೀಮೆ ಎಣ್ಣೆ
ಬೆಂಕಿ ಕಡ್ಡಿ
ಪೆಟ್ರೋಲ್ ಬೇಕಂತಿಲ್ಲ...
ಬಾಯಿಯಿಂದಲೂ
ಕೊಡಬಹುದು

ಜಲೀಲ್ ಮುಕ್ರಿ

ಹೊಸ ವರ್ಷ – ಹೊಸ ತೀರ್ಮಾನಗಳು

■ ಸಬೀಹಾ ಫಾತಿಮಾ

ಮತ್ತೊಂದು ಹೊಸ ವರ್ಷಕ್ಕೆ ಕಾಲಿರಿಸಿದ್ದೇವೆ. ಮನೆ ಕಛೇರಿಗಳ ಗೋಡೆಗಳನ್ನು ಅಲಂಕರಿಸಿದ 2017ರ ಕ್ಯಾಲೆಂಡರು ನಮಗೆ ವಿದಾಯದ ಸೂಚನೆಯನ್ನು ನೀಡಿ ತನ್ನ ಕರ್ತವ್ಯ ಮುಗಿಸಿ ವಿರಮಿಸುತ್ತಿದೆ. ಪುನಃ ಹೊಸ ವರ್ಷದ ಸಂಭ್ರಮ. ವಿವಿಧ ರೀತಿಯಲ್ಲಿ ಈ ಹೊಸ ವರ್ಷವನ್ನು ಸ್ವಾಗತಿಸಲಾಗುತ್ತದೆ. ಕುಣಿದು ಕುಪ್ಪಳಿಸಿ ಕುಡಿದು ತೂರಾಡಿ ಎಲ್ಲವನ್ನೂ ಕಳೆದುಕೊಳ್ಳುವವರ ಸಂಖ್ಯೆಯು ವರ್ಷಗಳು ಉರುಳಿದಂತೆ ಹೆಚ್ಚಾಗುತ್ತಲೇ ಇದೆ. ನಾವು ಈ ಬಾರಿ ಹೊಸ ತೀರ್ಮಾನ ಗಳೊಂದಿಗೆ ಹೊಸ ವರ್ಷವನ್ನು ಸ್ವಾಗತಿಸಬೇಕಿದೆ. ವರ್ಷ ಪೂರ್ತಿ ಮಾನಸಿಕ ನೆಮ್ಮದಿ, ಆರೋಗ್ಯದೊಂದಿಗೆ ಜೀವಿಸಲು ಇದು ಸರ್ವರಿಗೂ ಸಹಕಾರಿಯಾಗಲಿ ಎಂಬುದು ಹೊಸ ವರ್ಷದ ಶುಭ ಹಾರೈಕೆ.

ಪ್ರೀತಿಸುವವರಿಗಾಗಿ ಸಮಯವನ್ನು ಮೀಸಲಿರಿಸುವೆ

ಈ ಯುಗದಲ್ಲಿ ಬದುಕುತ್ತಿರುವ ನಾವು ನಮ್ಮ ಬಹುಪಾಲು ಸಮಯವನ್ನು ಉಪಕರಣಗಳೊಂದಿಗೆ ವ್ಯಯಿಸುತ್ತಿದ್ದೇವೆ. ನಮ್ಮ ಸುತ್ತಮುತ್ತಲೆಲ್ಲ ಅಳುವುದು, ನಗುವುದು ಮತ್ತು ಮಾತ ನಾಡುವುದು, ಭಾವನೆಗಳನ್ನು ಹಂಚಿ ಕೊಳ್ಳುವುದು ಎಲ್ಲ ಕೆಲಸಗಳನ್ನು ಮೊಬೈಲ್ ನಿರ್ವಹಿಸುತ್ತಿದೆ. ದೈಹಿಕವಾಗಿ ಮನೆಯಲ್ಲಿ ಎಲ್ಲರೂ ಉಪಸ್ಥಿತರಿದ್ದರೂ ಅಪರಿಚಿತರಂತೆ ವರ್ತಿಸುತ್ತಿದ್ದೇವೆ. ಈ ಮಧ್ಯೆ ವೃದ್ಧರಾದ ತಂದೆ–ತಾಯಿಯರಿಗೆ ಹದಿಹರೆಯದ ಮಕ್ಕಳಿಂದ ಮಾತು, ನಗುವನ್ನು ಬಯಸುವ ಮಧ್ಯ ವಯಸ್ಕ ಹೆತ್ತವರು ಮಕ್ಕಳ ಅತಿಯಾದ ಮೊಬೈಲ್ ಬಳಕೆಯಿಂದ ಬೇಸತ್ತಿದ್ದಾರೆ. ಹೊಸ ವರ್ಷದಲ್ಲೊಂದಿಷ್ಟು ಹೊಸ ತೀರ್ಮಾನವನ್ನು ಮಾಡಬೇಕಿದೆ. ಮನೆಯಲ್ಲಿರುವಾಗ ಮೊಬೈಲ್‌ನ ಬಳಕೆ ಕನಿಷ್ಠಗೊಳಿಸುತ್ತೇನೆ. ಮಕ್ಕಳು, ಹೆತ್ತವರು, ಒಡಹುಟ್ಟಿದವರೊಂದಿಗೆ ಹೆಚ್ಚು ಸಮಯವನ್ನು ವಿನಿಯೋಗಿಸುತ್ತೇನೆ ಎಂದು ಇಂದೇ ತೀರ್ಮಾನಿಸಿ ಬಿಡಿ. ಒಂದು ವರ್ಷದೊಳಗೆ ನಿಮ್ಮ ಮತ್ತು ನಿಮ್ಮ ಮನೆ ಮಂದಿಯ ಸಂಬಂಧಗಳಲ್ಲಿ ಯಾವ ರೀತಿಯ ಅದ್ಭುತ ಪರಿಣಾಮ ಗಳಾಗುತ್ತವೆ, ಕಾದು ನೋಡಿ.

ಸಾಮಾಜಿಕ ಜಾಲತಾಣಗಳನ್ನು ಅನಗತ್ಯವಾಗಿ ಬಳಕೆ ಮಾಡುವುದಿಲ್ಲ

ಸೋಶಿಯಲ್ ಮೀಡಿಯಾಗಳು ನಮ್ಮನ್ನು ಸಂಪೂರ್ಣ ನಿಯಂತ್ರಿಸಿ ಮುಂದಕ್ಕೊಯ್ಯುವ ದಿನಗಳಲ್ಲಿ ನಾವಿಂದು ಬದುಕುತ್ತಿದ್ದೇವೆ. ಕನಿಷ್ಠ ಹತ್ತು ನಿಮಿಷಕ್ಕೊಮ್ಮೆಯಾದರೂ ಮೊಬೈಲನ್ನು ಎತ್ತಿಕೊಂಡು ಮೆಸೇಜ್ ಗಳನ್ನು ನೋಡದ ವಾಟ್ಸಪ್, ಫೇಸ್‌ಬುಕ್ ಜಾಲಾಡದ ವ್ಯಕ್ತಿಗಳು ವಿರಳ. ನಮ್ಮ ಬಹುಪಾಲು ಸಮಯ ಇದರಲ್ಲಿ ದುರುಪಯೋಗವಾಗುತ್ತಿದೆ. ಈ ಮಾಧ್ಯಮಗಳನ್ನು ಯಾವುದಕ್ಕೆ ಉಪಯೋಗಿಸಬೇಕು. ಯಾಕಾಗಿ ಬಳಸಬೇಕು ಎಂಬುದರ ಬಗ್ಗೆ ಸರಿಯಾದ ಜ್ಞಾನವನ್ನು ಹೊಂದಿರುವುದು ಅತಿ ಅಗತ್ಯ. ಇವುಗಳ ದುರುಪಯೋಗ ಕುಟುಂಬವನ್ನು ಒಡೆಯುತ್ತಿದೆ. ದಂಪತಿಗಳನ್ನು ಬೇರ್ಪಡಿಸುತ್ತಿವೆ. ಮಕ್ಕಳನ್ನು ದಾರಿ ತಪ್ಪುವಂತೆ ಪ್ರೇರೇಪಿಸುತ್ತಿವೆ ಎಂಬುದನ್ನು ಮರೆಯಬಾರದು. ಇತರರನ್ನು ಹಳಿಯಲು, ಮನ ನೋಯಿಸಲು, ಕೀಳಾಗಿಸಲು ಅನಗತ್ಯವಾಗಿ ಈ ಮಾಧ್ಯಮಗಳನ್ನು ಬಳಸುವುದಿಲ್ಲ. ಯಾವುದೇ (ಫೇಕ್) ಅವಾಸ್ತವಿಕ ಸುದ್ದಿಗಳನ್ನು ನಾನು ಫಾರ್ವರ್ಡ್ ಮಾಡುವುದಿಲ್ಲ ಎಂದು ಇಂದೇ ತೀರ್ಮಾನಿಸಿಬಿಡೋಣ.

ಹಾಸಿಗೆ ಇದ್ದಷ್ಟು ಮಾತ್ರ ಕಾಲು ಚಾಚುತ್ತೇನೆ

ಮಿತಿ ಇಲ್ಲದ ಆಗ್ರಹಗಳು, ನಮ್ಮ ಮೇಲೆ ನಮಗೆ ನಿಯಂತ್ರಣವಿಲ್ಲದೆ ಹೋದುದು ನಮ್ಮ ಕಾಲು ಹಾಸಿಗೆಯಿಂದ ಹೊರಬೀಳುತ್ತಿರುವುದಕ್ಕೆ ಪ್ರಮುಖ ಕಾರಣಗಳು. ಸಾಲದ ಶೂಲದಲ್ಲಿ ಮುಳುಗೇಳುತ್ತಿರುವ, ಬಡ್ಡಿಯಲ್ಲಿ ಕೊಳೆಯುತ್ತಿರುವ ಅನೇಕರ ಆರ್ಥಿಕತೆಯು ದಿಗಿಲು ಮೂಡಿಸುವಂತಹದ್ದಾಗಿದೆ. ನಮ್ಮ ಹಿರಿಯರ ಸರಳ ಜೀವನ, ಉನ್ನತ ಚಿಂತನೆಗೆ ನಾವು ಮನಸ್ಸು ಮಾಡಬೇಕಿದೆ. ಹಣ ಸಂಪಾದನೆಗೆ, ಜೀವನಾಧಾರವನ್ನು ವಿಶಾಲಗೊಳಿಸಲು ವಿವಿಧ ಪ್ರಾಮಾಣಿಕ ಮಾರ್ಗಗಳನ್ನು ಕಂಡುಕೊಳ್ಳುವುದರ ಜೊತೆಗೆ, ಹಣವನ್ನು ಇತಿಮಿತಿಯಲ್ಲಿ ಬಳಸುವುದನ್ನು ಅಭ್ಯಾಸ ಮಾಡಿಕೊಳ್ಳಬೇಕಾದ ಅಗತ್ಯವಿದೆ. ನಮ್ಮ ಭವಿಷ್ಯವಾದ ಮಕ್ಕಳ ಅಭ್ಯಾಸವನ್ನು ಸರಿಪಡಿಸಬೇಕು. ಅವರು ಆಶಿಸಿದ್ದೆಲ್ಲವನ್ನು ಖರೀದಿಸಿ ಕೊಡುವ ರೋಬೋಟ್‌ಗಳಾಗಿ ನಾವು ಮಾರ್ಪಡಬಾರದು. ಹಣದ ಸರಿಯಾದ ಉಪಯೋಗವನ್ನು ಮಕ್ಕಳಿಗೂ ಅಭ್ಯಾಸ ಮಾಡಿಸಬೇಕಿದೆ. ಕೇಳಿದಕ್ಕೆಲ್ಲ ಹಣವನ್ನು ಒದಗಿಸುವ ಹೆತ್ತವರನ್ನೇ ಎ.ಟಿ.ಎಂ. ಮೆಷಿನ್‌ನಂತೆ ಮಕ್ಕಳು ಬಳಸುತ್ತಾರೆ. ನೆನಪಿರಲಿ.

ಒಂದಷ್ಟು ಹೊಸ ಪುಸ್ತಕಗಳನ್ನು ಓದುತ್ತೇನೆ

ಮೇಧಾವಿಗಳು ಹೆಚ್ಚು ಓದುವವರಾಗಿರುತ್ತಾರೆ. ಜಗತ್ತಿನ ಪ್ರಸಿದ್ಧ ವ್ಯಕ್ತಿಗಳ ದಿನಚರಿಯನ್ನು ಗಮನಿಸಿದರೆ ಅವರು ದಿನದ ಹೆಚ್ಚು ಸಮಯವನ್ನು ಓದುವುದರಲ್ಲಿ ಕಳೆಯುವವರಾಗಿರುತ್ತಾರೆ. ಓದು ನಮ್ಮನ್ನು ಬೆಳೆಸುತ್ತದೆ. ವಿವಿಧ ರೀತಿಯ ಪುಸ್ತಕಗಳು ನಮ್ಮ ಅರಿವನ್ನು ಹೆಚ್ಚಿಸಲು ಸಹಾಯಕವಾಗುತ್ತದೆ. ನಮ್ಮ ಭಾಷೆ ಉತ್ತಮವಾಗುತ್ತದೆ. ನಮ್ಮಲ್ಲಿ ಧೈರ್ಯ ಮೂಡುತ್ತದೆ. ನಾವು ಓದುವ ಹವ್ಯಾಸ ಬೆಳೆಸಿಕೊಂಡರೆ ನಮ್ಮ ಮಕ್ಕಳಲ್ಲಿಯೂ ಆ ಬಗ್ಗೆ ಅಭಿರುಚಿ ಉಂಟಾಗುತ್ತದೆ. ಸದಭಿರುಚಿಯ ಪುಸ್ತಕಗಳನ್ನು ಮಕ್ಕಳಿಗೆ ಒದಗಿಸಿಕೊಡುವಲ್ಲಿ ಹೆತ್ತವರು ಕಾಳಜಿ ವಹಿಸಬೇಕು. ಮಕ್ಕಳನ್ನು ಪುಸ್ತಕ ಮಳಿಗೆಗಳಿಗೆ ಕರೆದುಕೊಂಡು ಹೋಗಬೇಕು. ಅವರಿಗೆ ಉಡುಗೊರೆಯ ರೂಪದಲ್ಲಿ ಪುಸ್ತಕಗಳನ್ನು ನೀಡಬೇಕು. ಪುಸ್ತಕಗಳಿಗೆ ವ್ಯಯಿಸುವ ಹಣವನ್ನು ವ್ಯರ್ಥವೆಂದು ತಿಳಿಯಬಾರದು. ಮನೆಗೊಂದು ಗ್ರಂಥಾಲಯವನ್ನು ರಚಿಸುವ ಮನಸ್ಸು ಮಾಡಬೇಕು. ಈ ವರ್ಷಪೂರ್ತಿ ಹೊಸ ಪುಸ್ತಕಗಳನ್ನು ಖರೀದಿಸಿ ಓದುತ್ತೇನೆ ಎಂಬುದಾಗಿ ತೀರ್ಮಾನಿಸಿಕೊಳ್ಳಿ.

ನೆರೆಹೊರೆಯವರೊಂದಿಗಿನ ಬಾಂಧವ್ಯವನ್ನು ಗಟ್ಟಿಗೊಳಿಸುವೆ

ನಮ್ಮ ಪ್ರತಿಯೊಂದು ಕಷ್ಟ ಸುಖಗಳಿಗೆ ತಕ್ಷಣ ಓಗೊಡುವ ಸಾಮರ್ಥ್ಯವಿರುವವರು ನಮ್ಮ ನೆರೆಮನೆಯವರು. ಇಂದು ನೆರೆಹೊರೆಯವರೊಂದಿಗೆ ಸಂಬಂಧ ಹೊಂದದಿರುವುದೇ ಒಂದು ಫ್ಯಾಶನ್ ಆಗಿ ಮಾರ್ಪಟ್ಟಿದೆ. ಅವರು ಯಾರ ರಗಳೆಗೂ ಇಲ್ಲ. ಅವರಷ್ಟಕ್ಕೆ ಅವರು. ಬಾಗಿಲು ಹಾಕಿಕೊಂಡರೆ ಯಾವುದಕ್ಕೂ ತಲೆ ಹಾಕುವುದಿಲ್ಲ ಎಂಬಿತ್ಯಾದಿ ಮಾತುಗಳನ್ನು ಸಂಭಾವಿತರ ಲಕ್ಷಣವೆಂದು ಕೊಳ್ಳಲಾಗುತ್ತದೆ. ಆದರೆ ನೆರೆಮನೆಯವರೊಂದಿಗೆ ಸುಮಧುರ ಸಂಬಂಧ ಇರಲೇಬೇಕು. ಅವರ ಕಷ್ಟ ಸುಖಗಳಿಗೆ ಸ್ಪಂದಿಸಬೇಕು. ಅನಗತ್ಯ

ವಿಚಾರಗಳಿಗೆ ಮೂಗು ತೂರಿಸಲೇ ಬಾರದು. ಆದರೆ ಅವರು ತಿಂದಿದ್ದಾರೆಯೇ, ಆರೋಗ್ಯದಿಂದಿದ್ದಾರೆಯೇ? ಮರಣ ಸಂಭವಿಸಿದೆಯೇ ಎಂಬುದು ಕೂಡಾ ತಿಳಿಯದೆ ಇರುವ ಸಂಭಾವಿತರ ವರ್ತನೆ ಆಕ್ಷೇಪಾರ್ಹ. ಉತ್ತಮ ಮಾತುಗಳ ವಿನಿಮಯ, ತಯಾರಿಸಿದ ಆಹಾರ ಪದಾರ್ಥಗಳ ವಿನಿಮಯ, ಹಬ್ಬಗಳ ಸಂದರ್ಭಗಳಲ್ಲಿ ಸಿಹಿತಿಂಡಿ ಉಡುಗೊರೆ ವಿನಿಮಯ ಇತ್ಯಾದಿ ನಮ್ಮ ಸಂಸ್ಕೃತಿಯಾಗಿ ಮಾರ್ಪಡಬೇಕು. ಆಗ ಹಳಸಿದ ಸಂಬಂಧಗಳು ಪುನಃ ಉತ್ತಮಗೊಳ್ಳಲು ಸೌಹಾರ್ದದ ವಾತಾವರಣ ನೆಲೆಗೊಳ್ಳಲು ಕಾರಣವಾಗುತ್ತದೆ. ಅನೇಕ ಸಂದರ್ಭಗಳಲ್ಲಿ ನಮ್ಮ ಮುಚ್ಚಿದ ಬಾಗಿಲುಗಳೇ ಅನೇಕ ರೀತಿಯ ಅಪನಂಬಿಕೆಗಳನ್ನು ಬೆಳೆಸಿ ಪೋಷಿಸಲು ಕಾರಣವಾಗುತ್ತಿದೆ. ಆದುದರಿಂದ ನಾವು ಈ ಬಾರಿ ನೆರೆ ಹೊರೆಯವರನ್ನು ಗೌರವಿಸುವ ಪ್ರೀತಿಯ ಆತ್ಮೀಯತೆಯ ವಾತಾವರಣವನ್ನು ಬೆಳೆಸುತ್ತೇವೆಂದು ತೀರ್ಮಾನಿಸೋಣ.

ಸಮಾಜಮುಖಿ ಕೆಲಸಗಳಿಗಾಗಿ

ಸಮಯವನ್ನು ಹೊಂದಿಸುವೆ

ನಮ್ಮ ಪೈಕಿ ಹೆಚ್ಚಿನವರು ಕೇವಲ ತಮ್ಮ ಬಗ್ಗೆ ಮಾತ್ರ ಚಿಂತಿಸುವವರಾಗಿ ಮಾರ್ಪಟ್ಟಿದ್ದಾರೆ. ನಾನು, ನನ್ನ ಉದ್ಯೋಗ, ನನ್ನ ಕುಟುಂಬ– ಇದರಾಚೆ ಯೋಚಿಸಲು ಅವರಿಗೆ ಸಾಧ್ಯವಾಗುವುದಿಲ್ಲ. ಸಮಾಜದ ಇತರರ ಬಗ್ಗೆ, ಸಹಜೀವಿ ಗಳ ಬಗ್ಗೆ ನಮ್ಮ ಹೊಣೆಗಾರಿಕೆ ಬಹಳಷ್ಟಿದೆ. ಅವುಗಳಿ ಗಾಗಿ ನಮ್ಮ ಸಮಯವನ್ನು ಹೊಂದಿಸಿಕೊಳ್ಳಬೇಕು. ನೊಂದ ವರ ಕಣ್ಣೀರೊರೆಸಲು, ನೋವಿನಲ್ಲಿದ್ದವರನ್ನು ಸಂತೈಸಲು ಆಘಾತಕ್ಕೊಳಗಾದವರನ್ನು ಚೇತರಿಸಿಕೊಳ್ಳುವಂತೆ ಮಾಡಲು, ಮರ್ದಿತರಿಗೆ ನೆರವಾಗಲು, ಮರ್ದಕರ ಕೈಯನ್ನು ತಡೆ ಯಲು ಈ ರೀತಿಯ ವಿವಿಧ ಕೆಲಸಗಳನ್ನು ನಾವು ನೆರವೇರಿಸಬೇಕಿದೆ. ವಿಧವೆಯರ, ಅನಾಥರ, ದರಿದ್ರರ, ದಿಕ್ಕಿಲ್ಲದವರ ಪಾಲಿಗೆ ನಾವು ಆಶಾಕಿರಣವಾಗಿ ಮಾರ್ಪಡ ಬೇಕಾದ ಅಗತ್ಯವಿದೆ. ನಮ್ಮ ಕೆಲಸಗಳ ಬಳಿಕ ಬಿಡುವು ಮಾಡಿಕೊಂಡು ಈ ರೀತಿಯ ಸಹಾಯ ಒದಗಿಸುವ ಸಮಾಜಸೇವೆ ಮಾಡುವ ಸಂಘಟನೆಗಳೊಂದಿಗೆ ಕೈ ಸೇರಿಸ ಬೇಕು. ನಮ್ಮಿಂದಾಗುವ ಸಕಲ ಸಹಾಯ ನೆರವನ್ನು ತನು ಮನ ಧನದ ಮೂಲಕ ನೀಡಬೇಕು. ನಮ್ಮ ಕಾರಣದಿಂದ ಒಂದು ಕುಟುಂಬವು ಚೆನ್ನಾಗಿ ಮುನ್ನಡೆ ದರೆ ಈ ಜಗತ್ತಿನ ಎಲ್ಲ ಸಂಪತ್ತುಗಳಿಗಿಂತ ಅದು ಶ್ರೇಷ್ಠ ಎಂಬುದನ್ನು ಮರೆಯಬಾರದು. ಆದುದರಿಂದ ಈ ಹೊಸ ವರ್ಷದಲ್ಲಿ ನನ್ನಿಂದಾದಷ್ಟು ಸಮಯವನ್ನು ಇಂತಹ ಚಟುವಟಿಕೆಗಳಿಗೆ ಮೀಸಲಿಡುತ್ತೇನೆಂದು ತೀರ್ಮಾನಿ ಸೋಣ ಅಲ್ಲವೇ?

ಹಸಿವಾದಾಗ ಮಾತ್ರ ತಿನ್ನುವೆ
ಆಹಾರ ಪೋಲು ಮಾಡಲಾರೆ

ನಮ್ಮ ಆಸ್ಪತ್ರೆಗಳು, ಕ್ಲಿನಿಕ್‌ಗಳು ರೋಗಿಗಳಿಂದ ತುಂಬಿ ತುಳುಕುತ್ತಿವೆ. ಇದಕ್ಕೆ ಮುಖ್ಯ ಕಾರಣ ನಾವು ತಿನ್ನುವ ಆಹಾರ ಪದ್ಧತಿ. ಆಹಾರವನ್ನು ಹಸಿವಾಗದಿದ್ದರೂ ತಿನ್ನುವುದು ಮನುಷ್ಯರು ಮಾತ್ರ. ಮನುಷ್ಯರ ಹೊರತು ಇತರ ಯಾವ ಜೀವಿಯೂ ಹಸಿವಾಗದಿದ್ದರೆ ತಿನ್ನುವುದಿಲ್ಲ. ತಿನ್ನುವುದು, ನಿರಂತರ ಏನನ್ನಾದರೂ ಮೆಲ್ಲುತ್ತಿರುವುದು, ಹೊತ್ತು ಗೊತ್ತಿಲ್ಲದೆ ತಿನ್ನುವುದು. ತಡ ರಾತ್ರಿಯ ವೇಳೆ ಹೊಟ್ಟೆ ತುಂಬಾ ತಿನ್ನುವುದು ಫ್ಯಾಶನ್ ಆಗಿದೆ. ಆದರೆ ಇದುವೇ ನಮ್ಮನ್ನು ಅತಿ ಹೆಚ್ಚು ಅನಾರೋಗ್ಯಕ್ಕೆ ಈಡು ಮಾಡುತ್ತಿದೆ. ಪುಕ್ಕಟೆ ಸಿಗುತ್ತದೆಯೆಂದು ಮದುವೆ ಮನೆ, ಸಮಾರಂಭ, ಪಾರ್ಟಿಗಳಲ್ಲಿ ಬೇಕಾಬಿಟ್ಟಿ ಹಾಕಿಸಿಕೊಂಡು ಕೊನೆಗೆ ಎಲ್ಲವನ್ನೂ ತಿಂದು ಮುಗಿಸಲಿಕ್ಕಾಗದೆ ಕಸದ ತೊಟ್ಟಿಗೆ ಸುರಿಯುವುದು ಇಂದು ಸರ್ವೇ ಸಾಮಾನ್ಯವಾಗಿ ಬಿಟ್ಟಿದೆ. ಈ ದುಷ್ಟತೆಯನ್ನು ನಾವು ಅಸಹಾಯಕರಂತೆ ನೋಡಿ ಮೂಕಪ್ರೇಕ್ಷಕರಾಗುತ್ತಿದ್ದೇವೆ. ನಾವು ನಮ್ಮಲ್ಲಿ ಬದಲಾವಣೆಯನ್ನು ತರಬೇಕು. ನಾನು ಒಂದು ತುತ್ತು ಆಹಾರವನ್ನು ಪೋಲು ಮಾಡುವುದಿಲ್ಲ. ಅನಗತ್ಯ ಆಹಾರ ಸೇವಿಸುವುದಿಲ್ಲ ಎಂಬುದಾಗಿ ನಮ್ಮಲ್ಲೇ ತೀರ್ಮಾನಿಸಿಕೊಳ್ಳಬೇಕು. ಕನಿಷ್ಠ ಪಕ್ಷ ನಮ್ಮ ಮಕ್ಕಳಿಗೆ ನಮ್ಮ ಕುಟುಂಬಕ್ಕೆ ಈ ಶಿಕ್ಷಣವನ್ನು ನೀಡಬೇಕು. ಈ ಬಗ್ಗೆ ಜಾಗೃತಿಯನ್ನುಂಟು ಮಾಡಲು ವಿವಿಧ ಮಾಧ್ಯಮಗಳ ಮೂಲಕ ನಿರಂತರ ಪ್ರಯತ್ನಿಸುತ್ತಿರಬೇಕು. ಒಪ್ಪೊತ್ತಿನ ಆಹಾರಕ್ಕೆ ಪರದಾಡುತ್ತಿರುವ, ಅಪೌಷ್ಠಿಕತೆಯಿಂದ ಸಾವನ್ನಪ್ಪುತ್ತಿರುವ ಲಕ್ಷಾಂತರ ಮಕ್ಕಳಿರುವ ಒಂದು ದೇಶದಲ್ಲಿ ನಾವು ಬದುಕುತ್ತಿದ್ದೇವೆ ಎಂಬುದನ್ನು ಮರೆಯಬಾರದು. ಆಹಾರ, ನೀರು ಪೋಲಾಗದಂತೆ ನೋಡಿಕೊಳ್ಳುತ್ತೇನೆ ಎಂಬ ದೃಢನಿಶ್ಚಯವನ್ನು ಇಂದೇ ಮಾಡಿಕೊಳ್ಳೋಣ. ■

ರಸ್ತೆ ಅಪಘಾತಕ್ಕೆ ಕೊನೆ ಹೇಗೆ?

ರಸ್ತೆ ಸುರಕ್ಷತಾ ಸಪ್ತಾಹಕ್ಕೆ ವಿಶೇಷ ಲೇಖನ

ಸಾಜಿದಾ ಮೂಮಿನ್

ಕಳೆದ ದಶಕಕ್ಕೆ ಹೋಲಿಸಿದರೆ ಭಾರತದಲ್ಲಿ ವಾಹನಗಳ ಸಂಖ್ಯೆ ಹೆಚ್ಚಾಗಿರುವುದು ಕಂಡು ಬರುತ್ತಿದೆ. ಅದರಂತೆ ರಸ್ತೆಗಳು ಸುಧಾರಣೆಯಾಗುತ್ತಿದೆ. ರಸ್ತೆಗಳ ಗುಣಮಟ್ಟದೊಂದಿಗೆ ರಸ್ತೆಯನ್ನು ಅಗಲ ಮಾಡುವ ಕಾಮಗಾರಿ ಕೂಡ ನಡೆಯುತ್ತಿದೆ.

ಆದರೂ ರಸ್ತೆ ಅಪಘಾತಗಳ ಸಂಖ್ಯೆ ಹೆಚ್ಚುತ್ತಲೇ ಇದೆ ಎಂಬುದು ವಾಸ್ತವಿಕತೆಯಾಗಿದೆ. ಭಾರತದ ರಸ್ತೆಗಳು ಅತ್ಯಧಿಕ ಅಪಘಾತಗಳಿಗೆ ಸಾಕ್ಷಿಯಾಗುತ್ತಿರುವುದು ಖೇದಕರ. ರಸ್ತೆ ಸುರಕ್ಷತೆಯ ವರದಿಗಾಗಿ ಸುಪ್ರೀಮ್‌ಕೋರ್ಟ್ ಒಂದು ಸಮಿತಿಯನ್ನು ರಚಿಸಿತ್ತು. ಅದು ವರ್ಷಕ್ಕೆ 1,500 ಜನರು ಸಾಯುತ್ತಾರೆ ಮತ್ತು 5–6 ಲಕ್ಷ ಜನರು ಗಾಯಗೊಳ್ಳುತ್ತಿದ್ದಾರೆ ಎಂದು ಆ ಸಮಿತಿ ವರದಿ ಮಾಡಿತು. ರಸ್ತೆ ಸುರಕ್ಷತೆಗಾಗಿ ಸರಕಾರ ಮಾಡಿದ ಹಲವು ಪ್ರಯತ್ನಗಳಲ್ಲಿ Road Resput & Traffic Management (Sudar Committee 2007) ಎಂಬ ಒಂದು ಸಮಿತಿಯನ್ನು ರಚಿಸಿತು. ಆದರೂ ಭಾರತದಲ್ಲಿ ಮಾರಣಾಂತಿಕ ಅಪಘಾತಗಳನ್ನು ತಡೆಗಟ್ಟಲು ಸಾಧ್ಯವಾಗುತ್ತಿಲ್ಲ.

ರಸ್ತೆ ಅಪಘಾತಗಳಿಗೆ ಅತಿ ಹೆಚ್ಚು ಒಳಗಾಗುತ್ತಿರುವುದು ದ್ವಿಚಕ್ರ ವಾಹನಗಳು. ಅಪಘಾತಗಳಿಗೆ ಹಲವು ಗಂಭೀರ ಕಾರಣಗಳು ಇವೆ.

1. ಏಕಾಗ್ರತೆ ಇಲ್ಲದೆ ಚಲಾಯಿಸುತ್ತಿರುವ ಚಾಲಕರು. ಮೊಬೈಲ್ ಇದಕ್ಕೆ ಮೊದಲನೆಯ ಕಾರಣ. ಮೊಬೈಲ್‌ನಲ್ಲಿ ಮಾತನಾಡುತ್ತಾ ಮೈಮರೆಯುವ ಚಾಲಕರು ಏಕಾಗ್ರತೆಯನ್ನು ಕಳಕೊಳ್ಳುತ್ತಾರೆ. ಮೆಸೇಜ್ ಮಾಡುವುದು, ತಿನ್ನುವುದು ಇತ್ಯಾದಿಗಳು

ಅಪಘಾತಕ್ಕೆ ಕಾರಣ.

2. ವೇಗವಾಗಿ ಚಲಿಸುವುದು– ರಸ್ತೆ ಬದಿಯಲ್ಲಿ ವೇಗದ ಮಿತಿ ಬರೆದಿದ್ದರೂ ಅದನ್ನು ನಿರ್ಲಕ್ಷಿಸಲಾಗುತ್ತದೆ.

3. ಕುಡಿದು ಚಾಲನೆ.

4. ಅಜಾಗರೂಕತೆಯ ಚಾಲನೆ– ಅಜಾಗರೂಕತೆಯ ಕೊನೆ ಅಪಘಾತ/ಮರಣ. ದಾರಿಯಲ್ಲಿ ಯಾರಾದರೂ ಅಜಾಗರೂಕತೆಯಿಂದ ವಾಹನ ಚಲಾಯಿಸುತ್ತಿದ್ದರೆ ನೀವು ಅತಿ ಹೆಚ್ಚು ಜಾಗರೂಕರಾಗಿರಿ.

5. ರಸ್ತೆ ಸಂಕೇತಗಳ ನಿರ್ಲಕ್ಷ್ಯ– ರಸ್ತೆ ಸಂಕೇತಗಳು ಜನರ ಜಾಗ್ರತೆಗಾಗಿ ಹಾಕಿರುತ್ತಾರೆ. ಅದನ್ನು ನಿರ್ಲಕ್ಷಿಸಿದಾಗ ಅಪಘಾತಕ್ಕೆ ಒಳಗಾಗುತ್ತಿರುವುದು ಖಚಿತ. ತನ್ನೊಂದಿಗೆ ಇತರರ ಪ್ರಾಣವನ್ನು ಅಪಾಯಕ್ಕೆ ಒಡ್ಡುತ್ತಾರೆ.

6. ಯುವ ಚಾಲಕರು– ತಾನು ಏನನ್ನೂ ಮಾಡಬಹುದು. ತನ್ನಂತೆ ಬಲಿಷ್ಠ, ಪರಾಕ್ರಮಿ ಯಾರೂ ಇಲ್ಲ ಎಂದು ಯೋಚಿಸುವ ವಯಸ್ಸಿನಲ್ಲಿ ಹತ್ತು ಹಲವಾರು ಅಪಘಾತಗಳು ನಡೆಯುತ್ತಲೇ ಇರುತ್ತದೆ. ಅದರಲ್ಲೂ ವಿಶೇಷತಃ ದ್ವಿಚಕ್ರ ವಾಹನಗಳ ಅಪಘಾತ ಸರ್ವೇ ಸಾಮಾನ್ಯ. ದಿನನಿತ್ಯ ದ್ವಿಚಕ್ರ ವಾಹನಗಳ ಅಪಘಾತ, ಕೆಲವೊಮ್ಮೆ ಇದರ ಪರಿಣಾಮ ಮರಣವಾದರೆ ಇನ್ನು ಕೆಲವೊಮ್ಮೆ ಜೀವನ್ಮರಣದ ಅವಸ್ಥೆ ಯಲ್ಲಿ ಮಂಚದಲ್ಲಿ ಬಿದ್ದಿರುವುದನ್ನು ನೋಡುತ್ತಾರೆ, ಕೇಳುತ್ತಾರೆ ಆದರೂ ಈ ವಯಸ್ಸು ಅಜಾಗರೂಕತೆ ಸಹಜ ಹಾಗೂ ವೇಗವನ್ನು ಅದುಮಿಡಲು ಕಷ್ಟವೆಂದೇ ಹೇಳಬಹುದು.

7. ಮಳೆ– ರಸ್ತೆ ಮಧ್ಯೆ ಅಥವಾ ರಸ್ತೆ ಬದಿಯಲ್ಲಿ ತೆರೆದಿಟ್ಟ ಹೊಂಡಗಳು. ಅದರಲ್ಲಿ ಮಳೆ ನೀರು ನಿಂತಿರುವುದರಿಂದ ಅಲ್ಲಿ ಹೊಂಡ ಇದೆಯ ಎಂದು ಗೋಚರಿಸುವುದಿಲ್ಲ ಮತ್ತು ಅದರ ಆಳವೂ ಗೊತ್ತಿರುವುದಿಲ್ಲ. ರಸ್ತೆ ಕಾಮಗಾರಿಕೆಯಲ್ಲಿ ಅಗೆದ ರಸ್ತೆಗಳು, ಅದರ ಕಾರಣ ರಸ್ತೆಯಲ್ಲಿರುವ ಮಣ್ಣು ಮತ್ತು ಚಿಕ್ಕ ಕಲ್ಲುಗಳು. ದ್ವಿಚಕ್ರಗಳು ಬಹಳ ಸುಲಭದಲ್ಲಿ ಜಾರಿ ಬೀಳುವುದು ಸಹಜ. ಇನ್ನು ಕೆಲವೊಮ್ಮೆ ಮಳೆಗಾಲ ಆರಂಭಗೊಳ್ಳುವ ಮೊದಲು ಬರುವ ತುಂತುರು ಮಳೆ ರಸ್ತೆಯಲ್ಲಿ ಬಿದ್ದಿರುವ ವಾಹನಗಳ ಎಣ್ಣೆ. ದ್ವಿಚಕ್ರ ವಾಹನಗಳು ಜಾರಿ ಬೀಳುತ್ತವೆ.

8. ರಾತ್ರಿ ಹೊತ್ತಿನ ಚಾಲನೆ–

1) ಕೆಲವರಲ್ಲಿ ದೃಷ್ಟಿದೋಷವಿರುತ್ತದೆ.

2) ಎದುರಿನಿಂದ ಬರುವ ವಾಹನಗಳ ತೀಕ್ಷ್ಣ ಬೆಳಕು.

3) ನಿದ್ದೆಯ ಮಂಪರು.

9. ಒಂದು ಬದಿಯಲ್ಲಿ ಹೋಗುತ್ತಿರುವಾಗ ಇದ್ದಕ್ಕಿದ್ದಂತೆ ದಾರಿ ಬದಲಿಸುವುದು.

10. ರಸ್ತೆ ತಿರುವು, ರಸ್ತೆ ನಿಯಮ ಮತ್ತು ರಸ್ತೆ ಸಂದೇಶಗಳನ್ನು ನಿರ್ಲಕ್ಷಿಸುವುದು.

11. ಮಾದಕ ದ್ರವ್ಯ, ಮದ್ಯಪಾನ.

ಭಾರತದ ರಾಜಧಾನಿ ದೆಹಲಿ ಒಂದರಲ್ಲೇ ಪ್ರತಿದಿನ 5 ಜನರು ರಸ್ತೆ ಅಪಘಾತದಲ್ಲಿ ಮರಣ ಹೊಂದುತ್ತಾರೆ. ಭಾರತದಲ್ಲಿ ಪ್ರತಿ 4 ನಿಮಿಷಕ್ಕೆ ಒಬ್ಬರು ರಸ್ತೆ ಅಪಘಾತಕ್ಕೆ ಬಲಿಯಾಗುತ್ತಾರೆ. ಪ್ರತಿ ನಿಮಿಷಕ್ಕೆ ಒಂದು ಗಂಭೀರ ರಸ್ತೆ ಅಪಘಾತ ಸಂಭವಿಸುತ್ತದೆ ಮತ್ತು ಪ್ರತಿ ಒಂದು ಗಂಟೆಯಲ್ಲಿ 16 ಜನರು ಈ ರೀತಿ ಮರಣ ಹೊಂದುತ್ತಾರೆ.

ರಸ್ತೆ ಅಪಘಾತಗಳು ಸಂಭವಿಸಿದಾಗ ಪೊಲೀಸರು ಪ್ರಾಥಮಿಕ ತನಿಖೆ ನಡೆಸಿ ಪ್ರಕರಣವನ್ನು ದಾಖಲಿಸುತ್ತಾರೆ. ಕೆಲವೊಮ್ಮೆ ಸಣ್ಣ ಪುಟ್ಟ ಅಪಘಾತ ಮತ್ತು ಕೆಲವೊಮ್ಮೆ ಗಂಭೀರ ಅಪಘಾತಗಳು ಸಂಭವಿಸುತ್ತದೆ ಮತ್ತು ಮರಣ ಸಂಭವಿಸುತ್ತದೆ ಅಥವಾ ವ್ಯಕ್ತಿ ಜೀವನ್ಮರಣದ ಸ್ಥಿತಿಯಲ್ಲಿ ಹಲವು ದಿನಗಳು, ತಿಂಗಳು ಮತ್ತು ವರ್ಷಗಳು ಕೋಮಾದಲ್ಲಿ ದಿನ ದೂಡುತ್ತಾನೆ. ತಪ್ಪಿತಸ್ಥರಿಗೆ ಶಿಕ್ಷೆ ಅಥವಾ ದಂಡ ವಿಧಿಸಲಾಗುತ್ತದೆ ಮತ್ತು ಕೆಲವೊಮ್ಮೆ ಬಲವಾದ ಸಾಕ್ಷಿ ಇಲ್ಲದ ಕಾರಣ ತಪ್ಪಿತಸ್ಥರನ್ನು ಬಿಡುಗಡೆ ಗೊಳಿಸಲಾಗುತ್ತದೆ.

ಕೆಲವು ಚಾಲಕರ ತಪ್ಪು ಇದ್ದರೆ, ಇನ್ನು ಕೆಲವೊಮ್ಮೆ ರಸ್ತೆಗಳು ಇದಕ್ಕೆ ಕಾರಣವಾಗುತ್ತದೆ. ಭಾರತದಲ್ಲಿ ಪಿ.ಡಬ್ಲ್ಯೂ.ಡಿ., ನಗರ ಪಾಲಿಕೆ, ವಿದ್ಯುಚ್ಛಕ್ತಿ ಮಂಡಳಿಗಳಿಗೆ ಪರಸ್ಪರ ಸಂಪರ್ಕ ಇದ್ದಂತೆ

ಕಂಡು ಬರುವುದಿಲ್ಲ. ರಸ್ತೆ ಕಾಮಗಾರಿ ಮುಗಿದ ತಕ್ಷಣ ಇನ್ನೊಬ್ಬರು ಅಗೆಯಲು ಪ್ರಾರಂಭಿಸುತ್ತಾರೆ. ರಸ್ತೆಯನ್ನು ಪುನಃ ದುರಸ್ತಿಗೊಳಿಸದೆ ಅಪಘಾತಗಳಿಗೆ ದಾರಿ ಮಾಡಿಕೊಡಲಾಗುತ್ತದೆ. ಕೆಲವೊಮ್ಮೆ ಅರ್ಧಂಬರ್ಧ ಕಾಮಗಾರಿಕೆಗಳಿಗೆ ತಿಂಗಳುಗಳು, ವರ್ಷ ವರ್ಷಗಳು ತಗಲುತ್ತದೆ. ಹಲವು ಅಪಘಾತಗಳು, ಹಲವು ಮರಣಗಳು ಸಂಭವಿಸಿದರೂ ಅದಕ್ಕೆ ಸಂಬಂಧಪಟ್ಟವರ ನಿರ್ಲಕ್ಷ್ಯಕ್ಕೆ ಏನನ್ನೋಣ. ಭಾರತದಲ್ಲಿ ಇಂದು ರಸ್ತೆ ಅಪಘಾತಗಳು. ಬೃಹತ್ ಸಮಸ್ಯೆಯಾಗಿ ಬೆಳೆದಿದೆ.

ಪ್ರಾದೇಶಿಕ ಸಾರಿಗೆಯೂ (ಆರ್‌ಟಿಓ) ಇದಕ್ಕೆ ಕಾರಣ. ಚಾಲಕರಿಗೆ ಪರವಾನಿಗೆ ಕೊಡುವಾಗ ಎಲ್ಲ ರೀತಿ ಕಾನೂನು, ರಸ್ತೆಯ ನಿಯಮ, ರಸ್ತೆ ಸಂಕೇತಗಳ

ಸರಿಯಾದ ಜ್ಞಾನ, ಸರಿಯಾದ ತಿಳುವಳಿಕೆ ಇರುವವರಿಗೆ ಮಾತ್ರ ಪರವಾನಿಗೆ ಕೊಡದೆ, ಹೆಚ್ಚಿನ ಸಂಖ್ಯೆಯಲ್ಲಿ 18 ವರ್ಷ ಮೇಲ್ಪಟ್ಟ ಎಲ್ಲರಿಗೂ ಕೊಡಲಾಗುತ್ತದೆ. ಇಂತಹ ಚಾಲಕರ ನಿರ್ಲಕ್ಷ್ಯ ಇನ್ನೊಬ್ಬರ ಜೀವ ತೆಗೆದು ಬಿಡುತ್ತದೆ ಎಂದು ಗೊತ್ತಿದ್ದೂ ಆರ್‌ಟಿಓ ನಿರ್ಲಕ್ಷಿಸುತ್ತದೆ.

ಇನ್ನೊಂದು ಕಡೆ ಟ್ರಾಫಿಕ್ ಪೊಲೀಸ್. ವಾಹನಗಳು ಇವರ ಮೂಗಿನ ಅಡಿಯಿಂದ ರಸ್ತೆ ನಿಯಮವನ್ನು ಉಲ್ಲಂಘಿಸಿ ಹೋದರೆ ಇವರಿಗೆ ಪರಿವೆಯೇ ಇರುವುದಿಲ್ಲ. ಕೆಲವೊಮ್ಮೆ ಅವರು ಬಿಸಿಲಿನ ಧಗೆಯನ್ನು ಸಹಿಸ ಲಾಗದೆ ನೆರಳು ಹುಡುಕಿ ಒಂದು ಮೂಲೆಯಲ್ಲಿ ನಿಂತರೆ, ಕೆಲವೊಮ್ಮೆ ಮೊಬೈಲ್ ಅಥವಾ ತಮ್ಮ ಪರಿಚಯದವರೊಂದಿಗೆ ಪಟ್ಟಾಂಗದಲ್ಲಿ ಬ್ಯುಸಿ ಆಗಿರುತ್ತಾರೆ. ಇವರ ಈ ರೀತಿಯ ನಿರ್ಲಕ್ಷದಿಂದ ಅದೆಷ್ಟೋ ಜನರು ಜೀವ ಕಳೆದಿದ್ದಾರೆ ಮತ್ತು ಇನ್ನು ಮುಂದಕ್ಕೆ ಯಾರು ಯಾವಾಗ ಎಷ್ಟು ಜೀವ ಕಳೆದುಕೊಳ್ಳುತ್ತಾರೆ ಎಂದು ಹೇಳಲು ಸಾಧ್ಯವಿಲ್ಲ. ಕೆಲವೊಮ್ಮೆ ಇಂತಹ ಚಾಲಕರನ್ನು ಹಿಡಿದರೂ ಒಂದಿಷ್ಟು ಜುಲ್ಮಾನೆ ಹಾಕಿ (ಲಂಚ ಪಡೆದು) ಅವರನ್ನು ಬಿಟ್ಟು ಬಿಡುತ್ತಾರೆ. ಶ್ರೀಮಂತರು ಅಥವಾ ರಾಜಕೀಯ ವ್ಯಕ್ತಿಗಳು ಅಥವಾ ಪ್ರಸಿದ್ಧ ವ್ಯಕ್ತಿಗಳಿಂದ ಅಪರಾಧ ಸಂಭವಿಸಿದರೆ ಅಥವಾ ನಿರ್ಲಕ್ಷ್ಯ ಚಾಲನೆ ಮಾಡಿ ದರೆ ಬಿಟ್ಟು ಬಿಡುತ್ತಾರೆ (ಎಲ್ಲ ಪೊಲೀಸ್‌ನವರಿಗೆ ಇದು ಅನ್ವಯಿಸುವುದಿಲ್ಲ). ಕಾನೂನು ಪಾಲಿಸುವವರೇ ಈ ರೀತಿ ಇದ್ದರೆ, ಅಪಘಾತಗಳನ್ನು ತಡೆ ಹಿಡಿಯುವುದು ಹೇಗೆ?

ಈ ತಿಂಗಳಿನಲ್ಲಿ ರಸ್ತೆ ಸುರಕ್ಷತಾ ಸಪ್ತಾಹ ಆಚರಿಸುತ್ತಿರುವ ಸರಕಾರ ಇಂತಹ ವಿಷಯಗಳನ್ನು ಚರ್ಚಿಸಿ, ಅಮೂಲ್ಯ ಜೀವಗಳನ್ನು ರಕ್ಷಿಸುವ ಬಗ್ಗೆ ಗಂಭೀರ ಅವಲೋಕನ ನಡೆಸಿ ಕಾರ್ಯ ಪ್ರವೃತ್ತವಾಗುವುದು ಒಳಿತು.

ಭಾರತದಲ್ಲಿ ಪಾದಚಾರಿಗಳಿಗೆ ಫುಟ್‌ಪಾತ್ ಇರುವುದು ಬಹಳ ವಿರಳ. ಸಾಮಾನ್ಯ ಜನರು ತಮ್ಮ ಜೀವವನ್ನು ಉಳಿಸಿಕೊಂಡು ಸುರಕ್ಷಿತವಾಗಿ ತಮ್ಮ ಮನೆಯವರನ್ನು ಸೇರಲು ಬಹಳ ಸಾಹಸ ಪಡಬೇಕಾಗುತ್ತದೆ. ನಮ್ಮ ಮಂಗಳೂರು ನಗರ, ಸ್ಮಾರ್ಟ್ ಸಿಟಿ ಎಂಬ ಹೆಸರು ಪಡೆದಂತಹ ನಗರದಲ್ಲೂ ಪಾದಚಾರಿಗಳು ದಾರಿ ಬದಿಯಲ್ಲಿ ನಡೆಯಲು ಪರದಾಡುತ್ತಿರುವುದು ಕಂಡು ಬರುತ್ತದೆ.

ರಸ್ತೆ ನಿಯಮಗಳನ್ನು, ರಸ್ತೆ ಸಂಕೇತಗಳನ್ನು ನಿರ್ಲಕ್ಷಿಸುವ ಉಲ್ಲಂಘಿಸುವ ಚಾಲಕರಿಗೆ ಸರಕಾರ ಕಠಿಣ ಶಿಕ್ಷೆಯನ್ನು ವಿಧಿಸಬೇಕು ಮತ್ತು ದೊಡ್ಡ ಮೊತ್ತದ ದಂಡವನ್ನು ತೆಗೆಯಬೇಕು. ಹೀಗಾದರೆ ಬಹುಶಃ ಒಂದಿಷ್ಟು ರಸ್ತೆ ಅಪಘಾತಗಳನ್ನು ತಡೆಹಿಡಿಯ ಬಹುದೋ ಏನೋ! ■

ಅಲ್ಲಾಹನ ಸಂದೇಶವಾಹಕರು(ಸ) ಹೇಳಿದರು, "ನಾನು ಬೆಂಕಿ ಉರಿಸಿದ ಓರ್ವ ವ್ಯಕ್ತಿಗೆ ಸಮಾನವಾಗಿದ್ದೇನೆ. ಅದು ಪರಿಸರವನ್ನು ಬೆಳಗಿದಾಗ ಹಾತೆಗಳು ಮತ್ತು ಕ್ರಿಮಿಕೀಟಗಳು ಅದರಲ್ಲಿ ಬೀಳಲಾರಂಭಿಸಿದುವು. ಆತನು ಅವುಗಳನ್ನು ತಡೆಯಲು ಪ್ರಯತ್ನಿಸಿದನು. ಆದರೆ ಅವು ಆತನನ್ನು ತಪ್ಪಿಸಿ ಅದಕ್ಕೆ ಧುಮುಕುತ್ತಿದ್ದುವು. ನೀವು ಮತ್ತು ನಾನು ಹಾಗೆಯೇ ಇದ್ದೇವೆ. ನಿಮ್ಮನ್ನು ನರಕದ ಬೆಂಕಿಯಿಂದ ದೂರ ಸರಿಸಲಿಕ್ಕಾಗಿ ನಾನು ನಿಮ್ಮ ಸೊಂಟದ ಪಟ್ಟಿಯನ್ನು ಹಿಡಿದೆಳೆಯುತ್ತಿದ್ದೇನೆ. ಆದರೆ ನೀವು ನನ್ನನ್ನು ಮೀರಿಸಿ ಅದಕ್ಕೆ ಧುಮುಕುತ್ತಿರುವಿರಿ." [ಬುಖಾರಿ, ಮುಸ್ಲಿಮ್: ಅಬೂಹುರೈರಾ(ರ)]

With best compliments from;

ROYAL INDUSTRIES

FABRICATION CONTRACTOR

Shed No. S-59, Ist Gate, Industrial Estate, Gokul Road, HUBLI.
Mob: 9972487912

ಪೀಠಿಕೆ:

ಇಸ್ಲಾಮೀ ವಸ್ತ್ರಧಾರಣೆಯನ್ನು ಕಟ್ಟುಪಾಡು, ಬಂಧನ, ಮುಖ್ಯವಾಹಿನಿಗೆ ಬರಲು ತೊಡಕು ಎಂದೆಲ್ಲ ಬಣ್ಣಿಸುವ ಇಂದಿನ ಈ ಕಾಲಘಟ್ಟದಲ್ಲಿ ಇಸ್ಲಾಮೀ ವಸ್ತ್ರ ಸಂಹಿತೆಯನ್ನು ಪಾಲಿಸುತ್ತಾ ತಮ್ಮ ಕ್ಷೇತ್ರದಲ್ಲಿ ಅಚ್ಚಳಿಯದ ಛಾಪನ್ನು ಮೂಡಿಸಿ ಮುಂದಿನ ಪೀಳಿಗೆಗೆ ಮಾದರಿಯಾದ ಇಬ್ಬರು ಸ್ತ್ರೀಯರು ಇಂದಿನ ದಿನಗಳಲ್ಲಿ ಚರ್ಚೆಯಲ್ಲಿದ್ದಾರೆ.

ಮಾದರಿ ಮಹಿಳಾಮಣಿಗಳು

● ಸಯೀದಾ ಸಲ್ವಾ ಫಾತಿಮಾ

ಇಸ್ಲಾಮಿನ ವಸ್ತ್ರ ಸಂಹಿತೆಯನ್ನು ಪಾಲಿಸುತ್ತಾ ಇಂದಿನ ಮಹಿಳೆಯರು ಎಲ್ಲ ರಂಗಗಳಲ್ಲೂ ಮುಂದುವರಿಯುತ್ತಿದ್ದಾರೆ. ಇತ್ತೀಚೆಗೆ ಪರ್ದಾಧಾರಣೆಯೊಂದಿಗೆ ವಿಮಾನ ಚಾಲಕಿಯಾದ 27 ವರ್ಷದ ಸಯೀದಾ ಸಲ್ವಾ ಫಾತಿಮಾ ಸುದ್ದಿಯಲ್ಲಿದ್ದಾರೆ. ಫಾತಿಮಾ ತನ್ನ ದೃಢ ನಿಲುವಿನೊಂದಿಗೆ ವಿಮಾನವನ್ನು ಚಲಾಯಿಸಲು ಕಲಿತು ಪ್ರಥಮ ಮುಸ್ಲಿಮ್ ವಿಮಾನ ಚಾಲಕಿಯಾಗಿದ್ದಾರೆ. ಪರ್ದಾ ಧರಿಸಿ ಸಾಮಾನ್ಯ ಮುಸ್ಲಿಮ್ ಯುವತಿಯಂತೆ ಕಾಣುವ ಫಾತಿಮಾರ ಅದ್ಭುತ ಆತ್ಮವಿಶ್ವಾಸವೇ ಆಕೆ ವಿಮಾನ ಚಾಲಕಿಯಾಗುವ ಪರವಾನಿಗೆ ಪಡೆಯುವಲ್ಲಿ ಸಫಲಳಾಗುವಂತೆ ಮಾಡಿತು.

ಸಾಮಾನ್ಯ ಬೇಕರಿ ನಡೆಸುವ ಸಯ್ಯದ್ ಅಶ್ಫಾಕ್ ಅಹಮ್ಮದ್‌ರ ಮಗಳಾದ ಫಾತಿಮಾರ ಬದುಕು ಬಡತನದಲ್ಲೇ ಸಾಗಿತ್ತು. ಸಣ್ಣಂದಿನಿಂದಲೇ ಹಾರಾಡುವ ವಿಮಾನಗಳನ್ನು ನೋಡುತ್ತಾ ಖುಷಿ ಪಡುತ್ತಿದ್ದ ಫಾತಿಮಾ ಪತ್ರಿಕೆಗಳಲ್ಲಿ ಬರುವ ವಿಮಾನಗಳ ಚಿತ್ರಗಳನ್ನು ಸಂಗ್ರಹಿಸಿಡುತ್ತಿದ್ದಳು. ತಾನೂ ಓರ್ವ ವಿಮಾನ ಚಾಲಕಿಯಾಗಬೇಕೆಂಬ ದೃಢ ನಿರ್ಧಾರವನ್ನು ಚಿಕ್ಕಂದಿನಲ್ಲಿಯೇ ಮಾಡಿದ್ದಳು ಹಾಗೂ ಅದನ್ನು ತನ್ನ ಸಹಪಾಠಿಗಳೊಂದಿಗೆ ಹಂಚಿಕೊಂಡಿದ್ದಳು.

ಪಿ.ಯು.ಸಿ. ಶಿಕ್ಷಣವನ್ನು ಪೂರೈಸಿದ ಬಳಿಕ ತನ್ನ ಹೆತ್ತವರ ಇಚ್ಛೆಯಂತೆ ಫಾತಿಮಾ ಇಂಜಿನಿಯರಿಂಗ್ ಕಲಿಕೆಯನ್ನು ಆಯ್ಕೆ ಮಾಡಿದಳು. ಇಲ್ಲಿಂದ ಆಕೆಯ ಜೀವನದ ಮಹತ್ತರ ಬದಲಾವಣೆಯ ಶುರುವಾಯಿತು. 'ಸಿಯಾಸತ್ ಡೈಲಿ'ಯ ಪ್ರಾಯೋಜಕತ್ವದಲ್ಲಿ ನಡೆಸಲ್ಪಡುವ 'EAMCET' ಕೋಚಿಂಗ್ ತರಗತಿಗೆ ಫಾತಿಮಾ ಹೋಗಲು ಪ್ರಾರಂಭಿಸಿದಳು. 'ಸಿಯಾಸತ್ ಡೈಲಿ'ಯ ಸಂಪಾದಕರಾದ ಝಾಹಿದ್ ಅಲಿ ಖಾನ್‌ರು ನಡೆಸಿದ ಸಂವಾದ ಕಾರ್ಯಕ್ರಮದಲ್ಲಿ "ಮುಂದೆ ಏನಾಗಲಿಚ್ಛಿಸುವಿರಿ?" ಎಂಬ ಪ್ರಶ್ನೆಗೆ ಫಾತಿಮಾ 'ಪೈಲೆಟ್' ಎಂದುತ್ತರಿಸಿದ್ದಳು. ಝಾಹಿದ್ ಅಲಿ ಖಾನ್‌ರು ಅವಳ ದೃಢ ನಿಲುವಿನಿಂದ ಪ್ರೇರಿತರಾಗಿ, ತನ್ನ ಸ್ನೇಹಿತರೊಂದಿಗೆ ಸೇರಿ ಹದಿನೆಂಟು ಲಕ್ಷಗಳಷ್ಟು ವೆಚ್ಚ ತಗಲುವ ಈಕೆಯ ಪೈಲೆಟ್ ಟ್ರೈನಿಂಗ್‌ಗೆ ಸಮ್ಮತಿ ದೊರಕಿಸಿಕೊಟ್ಟರು. ಹೀಗೆ ಭವಿಷ್ಯದ ಹೈದರಾಬಾದೀ ಪೈಲಟ್ ಆಗಲಿರುವ ಫಾತಿಮಾ 2007ರಲ್ಲಿ ಆಂಧ್ರ ಪ್ರದೇಶದ ಏವಿಯೇಷನ್ ಅಕಾಡೆಮಿಗೆ ಸೇರಿದ್ದರು. ಮುಂದೆ ಕಮರ್ಷಿಯಲ್ ಪೈಲಟ್ ಆಗಲು ಬೇಕಾದ ಕೋಚಿಂಗ್ ಆದ 'ಮಲ್ಟಿ ಎಂಜಿನ್ ರೇಟಿಂಗ್'(ಎಂ.ಇ.ಆರ್)ನ್ನು ಫಾತಿಮಾ ನ್ಯೂಜಿಲೆಂಡ್‌ನಲ್ಲಿ ಪೂರೈಸಿದರು.

ಪುರುಷ ಪ್ರಧಾನ ವೃತ್ತಿಯನ್ನು ಆಯ್ದುಕೊಂಡು ಫಾತಿಮಾ ಮುಸ್ಲಿಮ್ ಹೆಣ್ಣುಮಕ್ಕಳಿಗೆ ತನ್ನ ವಸ್ತ್ರಸಂಹಿತೆಯನ್ನು ಪಾಲಿಸಿಕೊಂಡು ಮುಂದುವರಿಯಲು ಸಾಧ್ಯವಿದೆ ಎಂದು ತೋರಿಸಿಕೊಟ್ಟಿದ್ದಾಳೆ. ಬಡತನ ಹಾಗೂ ಜ್ಞಾನದ ಕೊರತೆಯಿಂದ ಹಿಂದುಳಿದಿರುವ ಪ್ರತಿಯೋರ್ವ ಹೆಣ್ಣು ಮಗಳಿಗೂ ಫಾತಿಮಾ ಪ್ರೇರಣೆಯಾಗಿದ್ದಾಳೆ. ಹೆತ್ತವರಿಂದಲೂ, ಪತಿ ಮನೆಯವರಿಂದಲೂ ಸಹಕಾರ ಗಳಿಸಿರುವ ಫಾತಿಮಾ ತನ್ನ 18

ತಿಂಗಳ ಮಗಳನ್ನು 'ಐ.ಎ.ಎಸ್. ಆಫೀಸರ್' ಮಾಡಬೇಕೆನ್ನುವ ಕನಸನ್ನು ಕಾಣುತ್ತಿದ್ದಾಳೆ. ಅಕಾಡೆಮಿಯಲ್ಲಿ ತನ್ನ ಅನುಭವವನ್ನು ಹಂಚಿಕೊಳ್ಳುತ್ತಾ ಫಾತಿಮಾ, ತಾನು ಓರ್ವ ಮುಸ್ಲಿಮ್ ಪರ್ದಾಧಾರಿಣಿಯಾಗಿ ಯಾವುದೇ ಕಹಿ ಅನುಭವವನ್ನು ಎದುರಿಸಿಲ್ಲ ಎನ್ನುತ್ತಾರೆ. ತಾವು ಧರಿಸುವ ವಸ್ತ್ರ ಸಂಹಿತೆಯನ್ನು ಮನಸೋ ಇಚ್ಛೆ ಧರಿಸುವುದಾದರೆ ಅಲ್ಲಿ ವಿವಾದಗಳಿಗೆ ಆಸ್ಪದವಿಲ್ಲದಂತೆ ಮಾಡಬಹುದು. ದೃಢ ನಿಲುವು ನಮ್ಮದಾಗಿರಬೇಕು. ಉನ್ನತ ಶಿಕ್ಷಣಕ್ಕೆ ಹೋಗುವ ಮುಸ್ಲಿಮ್ ಮಹಿಳೆಯರ ಅನುಪಾತ 100ರಲ್ಲಿ 4 ಮಾತ್ರ ಆಗಿದೆ. ಇಂತಹ ಸನ್ನಿವೇಶದಲ್ಲಿ ತಾನು ಇಚ್ಛಿಸಿದ ಕ್ಷೇತ್ರದಲ್ಲಿ ಮುನ್ನಡೆದು ಸಾಧಿಸಿ ತೋರಿಸಿದ ಫಾತಿಮಾ ಭಾರತೀಯ ಎಲ್ಲ ಹೆಣ್ಣು ಮಕ್ಕಳಿಗೂ ಮಾದರಿಯಾಗಿದ್ದಾಳೆ.

● ಹಲೀಮಾ ಯಾಕೂಬ್

ಯಾವುದೇ ಕ್ಷೇತ್ರದಲ್ಲೂ ತಾನು ಹಿಂದಿಲ್ಲ ಎಂದು ಇಂದಿನ ಮಹಿಳೆ ಎಲ್ಲ ರಂಗಗಳಲ್ಲೂ ತನ್ನ ಛಾಪನ್ನು ಮೂಡಿಸುತ್ತಿದ್ದಾಳೆ. ಅದರಲ್ಲೂ ಪರ್ದಾಧಾರಿಣಿಯಾದ ಮುಸ್ಲಿಮ್ ಮಹಿಳೆಯು ರಾಜಕೀಯ ಕ್ಷೇತ್ರದಲ್ಲಿ ಮುನ್ನುಗ್ಗುವುದೆಂದರೆ ಅಚ್ಚರಿಯೇ ಸರಿ. ಸಿಂಗಾಪುರದಲ್ಲಿ 2017ರ ಅಧ್ಯಕ್ಷೆಯಾಗಿ ಅವಿರೋಧವಾಗಿ ಆಯ್ಕೆಯಾದ ಹಲೀಮಾ ಬಿಂತಿ ಯಾಕೂಬ್ ಓರ್ವ ಮಾದರಿ ಮಹಿಳೆಯಾಗಿದ್ದಾರೆ. ವಸ್ತ್ರವು ಸಾಧನೆಗೆ ತೊಡಕಾಗಲಾರದು ಎನ್ನುವುದಕ್ಕೆ ಇವರು ಸಾಕ್ಷಿಯಾಗಿದ್ದಾರೆ.

ಭಾರತೀಯ ಸಂಜಾತ ತಂದೆಯನ್ನು ಚಿಕ್ಕಂದಿನಲ್ಲಿಯೇ ಕಳೆದುಕೊಂಡ ಹಲೀಮಾ ಯಾಕೂಬ್‌ರ ಬಾಲ್ಯ ಬಡತನ ದಲ್ಲಿಯೇ ಸಾಗಿತು. ಸಿಂಗಾಪುರ್ ಚೈನೀಸ್ ಗರ್ಲ್ಸ್ ಸ್ಕೂಲ್ ಹಾಗೂ ತಾನ್‌ಜಾಂಗ್ ಕ್ಯಾಟಾಂಗ್ ಗರ್ಲ್ಸ್ ಸ್ಕೂಲ್‌ನಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿದ ಇವರು ನ್ಯಾಷನಲ್ ಯೂನಿವರ್ಸಿಟಿ ಆಫ್ ಸಿಂಗಾಪುರ್‌ನಲ್ಲಿ ಎಲ್.ಎಲ್.ಬಿ. (1978) ಪದವಿ ಗಳಿಸಿದರು. ಎಲ್.ಎಲ್.ಎಂ. ಪದವಿಯನ್ನು 2001ರಲ್ಲಿ ಪಡೆದುಕೊಂಡರು ಹಾಗೂ ಗೌರವ ಡಾಕ್ಟರೇಟ್ ಆಫ್ ಲಾ ಪದವಿಯನ್ನು ಎನ್.ಯು.ಎಸ್.ನಿಂದ 2016ರಲ್ಲಿ ಗಳಿಸಿದರು.

2001ರಲ್ಲಿ ಹಲೀಮ ಯಾಕೂಬ್ ರಾಜಕೀಯ ಪ್ರವೇಶಿಸಿ, ಜುರೋಂಗ್ ಗ್ರೂಸ್ ರೆಪ್ರೆಸೆಂಟೇಶನ್ ಕ್ಷೇತ್ರದಿಂದ ಎಂ.ಪಿ. ಆಗಿ ಆಯ್ಕೆಯಾದರು. ಮುಸ್ಲಿಮ್ ಮಿಲಾಯ್ ಅಲ್ಪಸಂಖ್ಯಾತ ಸಮುದಾಯದ ಪ್ರತಿನಿಧಿಯಾಗಿದ್ದ ಹಲೀಮ ಯಾಕೂಬ್ 2013ರಲ್ಲಿ ಸ್ಪೀಕರ್ ಆಫ್ ಪಾರ್ಲಿಮೆಂಟ್ ಆಗಿ ಆಯ್ಕೆಯಾದರು. 2017 ಆಗಸ್ಟ್ 7 ರಂದು ತಮ್ಮ ಪಕ್ಷವಾದ ಪೀಪಲ್ಸ್ ಆ್ಯಕ್ಸನ್ ಪಾರ್ಟಿ(ಪಿ.ಎ.ಪಿ.)ಯ ಪಾರ್ಲಿಮೆಂಟಿನ ಸ್ಪೀಕರ್ ಹಾಗೂ ಎಂ.ಪಿ. ಸ್ಥಾನಕ್ಕೆ ರಾಜೀನಾಮೆ ನೀಡಿ, ಅಧ್ಯಕ್ಷೀಯ ಸ್ಥಾನಕ್ಕೆ ಚುನಾವಣೆಗೆ ಸ್ಪರ್ಧಿಸಿ, 13ನೇ ಸೆಪ್ಟೆಂಬರ್‌ನಂದು ಅವಿರೋಧನಾಗಿ ಆಯ್ಕೆಗೊಂಡರು. ಇತರ ಅಭ್ಯರ್ಥಿಗಳು ಚುನಾವಣಾ ನಿಯಮಕ್ಕೆ ಬದ್ಧರಾಗಿಲ್ಲ ಕಾರಣ ಹಲೀಮಾ ಅವಿರೋಧವಾಗಿ ಚುನಾಯಿತರಾದರು.

ಸಿಂಗಾಪುರ 5.5 ಮಿಲಿಯನ್ ಚೈನೀಸ್ ಜನಾಂಗವನ್ನು ಹೊಂದಿದ ನಗರ. ರಾಜ್ಯ ಪ್ರದೇಶಗಳಲ್ಲಿ ಶಾಂತಿ, ಸೌಹಾರ್ದತೆ ಕಾಪಾಡುವ ಉದ್ದೇಶದಿಂದ ಅಧಿಕಾರಿಗಳು ಮಲಾಯ್ ಸಮುದಾಯ ದಿಂದ ಅಭ್ಯರ್ಥಿಗಳು ಮಾತ್ರವೇ ಅಧ್ಯಕ್ಷೀಯ ಸ್ಥಾನಕ್ಕೆ ಮುಂದೆ ಬರಬೇಕೆಂದು ನಿರ್ಧರಿಸಿದ್ದರು. ಅದರಂತೆ ಇವರು ಅಧ್ಯಕ್ಷೀಯ ಚುನಾವಣೆಗೆ ಸ್ಪರ್ಧಿಸಿದ್ದರು. ಅಧ್ಯಕ್ಷರಿಗೆ ದೇಶದ ರಾಷ್ಟ್ರೀಯ ಆಸ್ತಿ ನಿಕ್ಷೇಪಗಳ ಮೇಲುಸ್ತುವಾರಿಯ ಹೊಣೆಗಾರಿಕೆಯನ್ನು ನೀಡಲಾಗಿದೆಯಾದರೂ, ಪ್ರಧಾನಮಂತ್ರಿ ಅಥವಾ ಕ್ಯಾಬಿನೆಟ್‌ನ ಯಾವುದೇ ಸದಸ್ಯರ ಮೇಲೆ ಅವರಿಗೆ ಹಿಡಿತವಿರುವುದಿಲ್ಲ.

ಅಧ್ಯಕ್ಷೀಯ ಸ್ಥಾನಕ್ಕೆ ಘೋಷಣೆಯಾದ ಬಳಿಕ ಹಲೀಮಾ ಯಾಕೂಬ್ ತನ್ನ ಬೆಂಬಲಿಗರನ್ನು ಉದ್ದೇಶಿಸಿ, "ಸಿಂಗಾಪುರಕ್ಕೆ ಇದು ಹೆಮ್ಮೆಯ ಕ್ಷಣ. ಇದು ಬಹುಸಂಸ್ಕೃತಿ ಹಾಗೂ ಬಹು ಜನಾಂಗೀಯತೆಗೆ ದೊರೆತ ಜಯ" ಎಂದು ಹೇಳಿದರು.

1960ರಲ್ಲಿ ಆಡಳಿತ ನಡೆಸಿದ ಯೂಸುಫ್ ಇಶಾಕ್‌ರ ನಂತರ 47 ವರ್ಷಗಳ ಬಳಿಕ ಸಿಂಗಾಪುರದ ಮಲಾಯ್ ಅಧ್ಯಕ್ಷೆಯಾಗಿರುವ ಹಲೀಮಾ ಇಸ್ಲಾಮೀ ಪರ್ದಾಧಾರಣೆಯನ್ನು ಸಂಪೂರ್ಣವಾಗಿ ಪಾಲಿಸುತ್ತಾರೆ. ಅಲ್ಪಸಂಖ್ಯಾತ ಸಮುದಾಯದ ಪ್ರತಿನಿಧಿಯಾಗಿದ್ದರೂ, ಅವರು ತನ್ನನ್ನು ಸಂಪೂರ್ಣವಾಗಿ ಜನರ ಸೇವೆಗೆ ತೊಡಗಿಸಿಕೊಳ್ಳುವುದಾಗಿ ಭರವಸೆ ನೀಡಿದ್ದಾರೆ. "ನಾನು ಎಲ್ಲರ ಪ್ರತಿನಿಧಿಯಾಗಿದ್ದೇನೆ. ಸ್ಪರ್ಧೆ, ಭಾಷೆ, ಮತ ಅಥವಾ ನಂಬಿಕೆ ಇವೆಲ್ಲವುಗಳ ಹೊರತಾಗಿಯೂ, ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದರೂ ನಾನು ನಿಮ್ಮ ಸೇವೆಗೆ ಸದಾ ಬದ್ಧಳಾಗಿರುವೆ ಹಾಗೂ ಅದೇ ರೀತಿಯ ಸೇವೆಯನ್ನು ಮುಂದೆಯೂ ಸದಾ ನನ್ನಿಂದ ನೀವು ನಿರೀಕ್ಷಿಸ ಬಹುದು" ಎಂದು ಜನರಿಗೆ ಆಶ್ವಾಸನೆ ನೀಡಿದ್ದಾರೆ. ■

ಕಥೆ

ಶಬೀನಾ ಬಾನು ವೈ.ಕೆ.

ಟಿವಿ ಚಾನೆಲ್

ಅದೊಂದು ಸುಂದರ ಮನೆ. ಮನೆ ಎದುರು ಬಣ್ಣ ಬಣ್ಣದ ಹೂಗಳು ನಾನಾ ವಿಧದ ಮರಗಳು ಬೆಳೆದು ನಿಂತಿದ್ದವು. ಮನೆಯ ಮುಂಭಾಗದಲ್ಲಿ ಅರಳಿನಿಂತ ಗುಲಾಬಿ ಹೂಗಳು ಇಳಿ ಬಿಸಿಲಲ್ಲಿ ಹೊಳೆಯುತ್ತಿದ್ದವು. ಶುಭ್ರಗಾಳಿ ಪಡೆಯ ಬೇಕಾದರೆ ಈ ಮನೆಗೊಮ್ಮೆ ಹೋಗಿ ಬಂದರೆ ಸಾಕಿತ್ತು ಎಂದು ದಾರಿಹೋಕರು ಹೇಳುವುದು ಆಗಾಗ ಕಿವಿ ಗುಂದುತ್ತಿತ್ತು.

ಮನೆಯಲ್ಲಿ ನವ ವಿವಾಹಿತ ದಂಪತಿಗಳು ವಾಸವಾಗಿದ್ದರು. ವಿವಾಹವಾದ ಎರಡು ವರುಷಗಳಲ್ಲಿ ಬರಡು ಬರಡಾಗಿದ್ದ ಮನೆಯನ್ನು ನವ ವಧು ಗಿಡಮರಗಳಿಂದ ಅಲಂಕರಿಸಿ ಬಿಟ್ಟಳು. ಅವರಿಬ್ಬರ ನಡುವಿನ ಸಂಬಂಧ ಗಟ್ಟಿಯಾಗಿತ್ತು. ಮುಂಜಾನೆಯ ಪತ್ರಿಕೆಯೋದುವುದರಲ್ಲಿ ಆತ ಸಮಯ ವ್ಯಯಿಸಿದರೆ ಈಕೆ ಗಿಡಮರಗಳಿಗೆಲ್ಲ ನೀರುಣಿಸಿ ಅಡುಗೆ ಮನೆಯಲ್ಲಿ ತನ್ನ ಕೈ ಚಳಕ ಮೆರೆಯುತ್ತಿದ್ದಳು. ಇಬ್ಬರ ತಿಂಡಿ ನಸು ನಗುವಿನಲ್ಲೇ ಕಳೆದು ಆಫೀಸಿಗೆ ಸಮಯವಾದುದು

ತಿಳಿಯದೇ ಆತ ಓಡೋಡಿ ಮನೆಯತ್ತ ಕೈ ಚಾಚುತ್ತಾ ಪತ್ನಿಗೆ ವಿದಾಯ ಕೋರುವುದು ವಾಡಿಕೆಯಾಗಿತ್ತು.

ಆ ದಿನ ಆತ ಆಫೀಸಿಗೆ ತೆರಳಿದ. ಆತನ ಸಹೋದ್ಯೋಗಿಯೊಬ್ಬ ತಲೆಯ ಮೇಲೆ ಕೈ ಹೊತ್ತು ಕುಳಿತಿರುವುದನ್ನು ಕಂಡು "ಏನಾಯ್ತು?" ಎಂದು ಪ್ರಶ್ನಿಸಿದ.

"ಏನಿಲ್ಲ... ಇವತ್ತಿನ ಟಿವಿ ಚಾನೆಲ್‌ನ ಪ್ರಸಾರ ನೋಡು ಎಲ್ಲ ಗೊತ್ತಾಗುತ್ತೆ" ಎಂದಾತ ಹೇಳಿದವನೇ ತಲೆ ಕೆರೆದುಕೊಳ್ಳುತ್ತಾ ಹೊರ ನಡೆದ.

"ಇವನ್ಯಾಕೆ ಏನೂ ಹೇಳುತ್ತಿಲ್ಲ. ಅಂತಹದ್ದೇನಿರಬಹುದು ಟಿವಿಯಲ್ಲಿ ನೋಡುವಂತಹದ್ದು" ಎಂದುಕೊಂಡವನೇ ತನ್ನ ಕೆಲಸ ಕಾರ್ಯಗಳಲ್ಲಿ ನಿರತನಾದ. ಸಂಜೆ ಮನೆಯೊಳಗಡಿ ಇಡುತ್ತಲೇ ಆತನಿಗೆ ತನ್ನ ಸಹೋದ್ಯೋಗಿ ಹೇಳಿದ ಮಾತು ನೆನಪಾಯ್ತು. ಯಾವ ಚಾನೆಲ್? ಎಷ್ಟು ಗಂಟೆಗೆ ನೋಡಬೇಕೆಂದು ಆತನಿಗೆ ಫೋನಾಯಿಸಿ ವಿಚಾರಿಸಿದನು. ಪತಿ-ಪತ್ನಿಯರಿಬ್ಬರ ದೈನಂದಿನ ಮಾತುಕತೆಗಳ ನಡುವೆ ಆತನಿಗೆ ಮತ್ತೊಮ್ಮೆ ಸಹೋದ್ಯೋಗಿ ಹೇಳಿದ ಚಾನೆಲ್ ನೆನಪಾಯ್ತು. ಲಗುಬಗೆಯಿಂದ ಟಿವಿ ನೋಡಲು ಧಾವಿಸಿದಾತ ರಿಮೋಟ್ ಬಟನ್ ಒತ್ತಿದ್ದೇ ತಡ ಪರದೆಯ ಮೇಲೆ ಚಿತ್ರ-ವಿಚಿತ್ರ ಕಥೆಯೊಂದು ಹೊರಬಿತ್ತು. "ಗಂಡ ಆಫೀಸಿಗೆ ತೆರಳಿದ ನಂತರ ಪತ್ನಿ ಮಾಡಿದ್ದೇನು ಗೊತ್ತೇ?" ಎಂದು ಹೇಳುವುದರೊಂದಿಗೆ ಸಹೋದ್ಯೋಗಿಯ ಪತ್ನಿಯು ಮನೆಯಿಂದ ನಾಪತ್ತೆಯಾಗಿರುವುದರ ಹಿಂದೆ ಆಕೆಯ ಅನೈತಿಕ ಸಂಬಂಧವೇ ಕಾರಣ, ಆಕೆ ಪತಿಯನ್ನು ಆಫೀಸಿಗೆ ಕಳುಹಿಸಿ ಮನೆಯಿಂದ ಪರಾರಿಯಾಗಿದ್ದಳೆಂದು ವಿಹಂಗಮವಾಗಿ ನಿರೂಪಕರು ಪ್ರಸಾರ ಮಾಡಿದರು. ಸಹೋದ್ಯೋಗಿಯ ವಿವಾಹವು ಎರಡು ವರ್ಷಗಳ ಹಿಂದಷ್ಟೇ ನಡೆದಿತ್ತು. ತನ್ನ ಪತ್ನಿಯು ಮನೆಯಲ್ಲೇ ಇರುತ್ತಾಳೆ ಹಾಗಿರುವಾಗ ಆಕೆ ಏನಾದರೂ ಇಂತಹ ಆಲೋಚನೆಗಳಲ್ಲಿರಬಹುದೇ ಎಂಬ ಸಂಶಯ ಆತನ ಮನದಲ್ಲಿ ಬಂದು ಹೋಯ್ತು. ಪತ್ನಿಯಾದರೋ ಆತನ ಆಫೀಸಿನ ಬಟ್ಟೆಗಳನ್ನು ಇಸ್ತ್ರಿ ಹಾಕುವುದರಲ್ಲಿ ನಿರತಳಾಗಿದ್ದಳು.

ಆತನ ದಿನಚರಿ ತದನಂತರ ಬದಲಾಯ್ತು. ತನ್ನ ಪತ್ನಿಯ ದಿನಚರಿಯನ್ನೊಮ್ಮೆ ಅವಲೋಕಿಸಬೇಕೆಂಬ ತವಕ ಆತನನ್ನು ಕಾಡಿತು. ಬೆಳಿಗ್ಗೆ ಪೇಪರ್ ಓದುವುದನ್ನು ಬಿಟ್ಟು ಆಕೆಗಿಂತ ಮೊದಲೇ ಎದ್ದು ಗಿಡ-ಮರಗಳಿಗೆ ನೀರುಣಿಸಿದನು. ಇದನ್ನು ಕಂಡ ಆಕೆ "ಸೂರ್ಯ ನಿಮ್ಮ ಕೋಣೆಯಿಂದ ಎದ್ದನೋ ಹೇಗೆ?" ಎಂದು ಹೇಳಿದವಳೇ ಅಲ್ಲಿಂದ ಅಡುಗೆ ಮನೆಗೆ ಕಾಲಿಟ್ಟಳು. ಆತ ಲಗುಬಗೆಯಿಂದ ಅಡುಗೆ ಕೋಣೆಗೆ ಬಂದನು. ಅದಾಗಲೇ ಆಕೆ ತಿಂಡಿಯನ್ನು ತಯಾರಿಸಿ ಆಗಿತ್ತು. ಆಕೆಯಾದರೋ ಎಂದಿನಂತೆ ತನ್ನ ಕೆಲಸ ಕಾರ್ಯಗಳನ್ನು ಮಾಡಿ ಮುಗಿಸಿದಳು. ಆಫೀಸಿಗೆ ತೆರಳುವೆನೆಂದ ಆತ ಅಂದು ಆಫೀಸಿಗೆ ತೆರಳದೇ ಪತ್ನಿ ಅದೇನು ಮಾಡುವಳೆಂದು ತಿಳಿಯಲು ಬಯಸಿದ್ದ. ಇತ್ತ ಆಕೆ ಮನೆಯಂಗಳ ಗುಡಿಸಿ ತನ್ನ ಕೆಲಸ ಕಾರ್ಯಗಳನ್ನೆಲ್ಲ ಮುಗಿಸಿ ಒಂದು ತುಂಬಿದ ಬ್ಯಾಗನ್ನು ಹಿಡಿದು ಪೇಟೆಯತ್ತ ಹೊರಟಳು. ಆತ ಆಕೆಯನ್ನು ಕಳ್ಳರಂತೆ ಹಿಂಬಾಲಿಸಿದ. ನನ್ನ ಪತ್ನಿ ನನಗೆ ಮೋಸ ಮಾಡುತ್ತಿದ್ದಾಳೆಯೇ? ಆಕೆ ಎಲ್ಲಿಗೆ ಹೋಗುತ್ತಾಳೆಂದು ನಾನಿಂದು ನೋಡೇ ಬಿಡುವೆನೆಂದು ಆತ ಕೋಪೋದ್ರಿಕ್ತನಾದ. ಟೈಲರ್ ಅಂಗಡಿಗೆ ತೆರಳಿದ ಆಕೆ ಕೆಲವೊಂದು ಬಟ್ಟೆಗಳಿಗೆ ಹೊಲಿಕೆ ಹಾಕಿಸಿದಳು. ಈ ನಡುವೆ ಪತಿಗಾಗಿ ತೆಗೆದಿರಿಸಿಟ್ಟ ಹೊಸ ಬಟ್ಟೆಗಳನ್ನು ಹೊಲಿಸಲು ಅಳತೆ ಕೊಟ್ಟು ಮಾರ್ಕೆಟ್ ಹಾದಿಯಲ್ಲಿ ಸಾಗಿ ತರಕಾರಿ ಖರೀದಿಸಿದವಳೇ ಮನೆಯತ್ತ ಧಾವಿಸಿದಳು. ಈತ ನಿಟ್ಟುಸಿರು ಬಿಟ್ಟು ತಾನು ತನ್ನ ಪತ್ನಿಯ ಮೇಲೆ ಸಂಶಯ ಪಡಬಾರದಿತ್ತು ಎಂದುಕೊಂಡು ಆಫೀಸಿಗೆ ತೆರಳಿದನು.

ಆತನ ದಿನಚರಿ ಅತಿ ಸಂತೋಷದಿಂದಲೇ ಕಳೆಯಿತು. ಸಂಜೆ 4 ಗಂಟೆಗೆ ಆಫೀಸಿನ ಬಾಸ್ ತನಗೊಂದು ಕರೆ ಬಂದಿರುವುದಾಗಿ ಆತನನ್ನು ಕರೆದರು. ಕರೆಯನ್ನು ಸ್ವೀಕರಿಸಿ "ಯಾರು?" ಎಂದು ಈತ ಕೇಳಿದ.

"ಸರ್ ನಾವು ಟಿವಿ ಚಾನೆಲ್‌ನಿಂದ ಮಾತಾಡ್ತೀರೋದು! ತಾವು ಮನೆಗೆ ಬರಬಹುದಾ. ನಿಮಗೊಂದು ವಿಷಯ ಹೇಳೋಕಿದೆ" ಎಂದು ಆ ಕಡೆಯಿಂದ ಧ್ವನಿ ಬಂತು.

ಭಯ

ಮಂದಿರ, ಮಸೀದಿ, ಚರ್ಚ್‌ಗಳಲ್ಲಿ
ದೇವರಿಗೆ ಭಯ ಪಡುವವರನ್ನು
ನಾನೆಲ್ಲೂ ಕಾಣಲೇ ಇಲ್ಲ
ದೇವರ ಹೆಸರಲ್ಲಿ ಬೆದರಿಸುವವರನ್ನು
ಧಾರಾಳ ಕಂಡೆ

ಬಡ್ಡೂರು

ಆತನಲ್ಲಿ ಗಾಬರಿ ಮನೆ ಮಾಡಿತು. ನನ್ನ ಪತ್ನಿ ತಪ್ಪು ಮಾಡಿರುವಳೇ. ಟಿವಿ ಚಾನೆಲ್‌ನವರೆಲ್ಲ ನಮ್ಮ ಆಫೀಸ್ ಸಿಬ್ಬಂದಿಗಳ ಮೇಲೆ, ಅವರ ಮನೆಗಳ ಮೇಲೆ ನಿಗಾ ವಹಿಸಿರಬಹುದೇ! ಅಂತಹದ್ದೇನು ವಿಷಯವಿರಬಹುದು?? ಎಂದು ಕೊಂಡು ಮನೆಯತ್ತ ಧಾವಿಸಿ ಬಂದ.

ಕಂಪೌಂಡಿನೆದುರು ಕೆಲವು ಜನರು ನಿಂತು ಇಣುಕುತ್ತಿದ್ದರು. ಆತನಿಗೆ ಕೊಂಚ ಭಯ ಆವರಿಸಿತು. ನಿಂತವರೆಲ್ಲ ಸಾವಿರಾರು ಮಾತಾಡಿಕೊಳ್ಳುತ್ತಾರೆ ಒಳಗೇ ಹೋಗೋಣ ಎಂದಾತ ಒಳ ನಡೆದ. ಮನೆ ಇಡೀ ತಡಕಾಡಿದರೂ ಯಾರೂ ಕಾಣಲಿಲ್ಲ. ಹಿತ್ತಿಲ ಬಾಗಿಲಿನಲ್ಲಿ ಅದೇನೋ ಧ್ವನಿ ಕೇಳಿಬಂತು.

ಆತ ಧಾವಿಸಿ ಬಂದ "ಓಹ್ ನನ್ನ ಪತಿ ಬಂದು ಬಿಟ್ರು. ಇನ್ನು ನೀವು ಅವರೊಂದಿಗೆ ಮಾತನಾಡಿದ ನಂತರವೇ ನನ್ನೊಂದಿಗೆ ಸಮಾಲೋಚಿಸ ಬಹುದು. ಅವರ ಅನುಮತಿ ಇಲ್ಲದೇ ನಾನು ನಿಮ್ಮ ಮಾತಿಗೆ ಸಮ್ಮತಿಸಲಾರೆ" ಎಂದ ಆಕೆ ಪತಿಯತ್ತ ಧಾವಿಸಿ ಬಂದಳು.

"ಸರ್, ನಾವು ನಿಮ್ಮ ಮನೆಯನ್ನೊಮ್ಮೆ ಶೂಟಿಂಗ್ ಮಾಡ್ತೇವೆ. ನಿಮ್ಮ ಪತ್ನಿ ತುಂಬಾ ಚೆನ್ನಾಗಿ ಗಾರ್ಡನ್ ಮಾಡಿದ್ದಾರೆ. ಮನೆಯಲ್ಲಿ ಅವರು ಬಿಡಿಸಿದ ಕಲಾಕೃತಿಗಳು ತುಂಬಾ ಚೆನ್ನಾಗಿವೆ. ತಾವು ಅನುಮತಿಸಿದರೆ ಅವರನ್ನು ಓರ್ವ ಉತ್ತಮ ಕಲೆಗಾರ್ತಿಯನ್ನಾಗಿ ಗುರುತಿಸಬಹುದು" ಎಂದು ನಿರೂಪಕಿ ಬಡಬಡನೆ ಹೇಳಿದಳು. ಆತನ ಬಾಯಿಗೆ ಬಂದಿದ್ದ ಜೀವ ಒಮ್ಮೆಲೆ ಒಳಹೊಕ್ಕು ಅಚಲವಾಗಿ ಸಂತೋಷ ಎದ್ದು ಕಂಡಿತು. ಪತ್ನಿ ಬಿಡಿಸಿದ ಕಾಲಾಕೃತಿಗಳನ್ನು ಅಲ್ಲಲ್ಲಿ ಜೋಡಿಸಿದ ಸಹಾಯಕರು ಪತ್ನಿಯೊಂದಿಗೆ ಪತಿಗೂ ಬಣ್ಣ ಬಳಿದು ಸಂದರ್ಶನ ನಡೆಸಿದರು.

ಆತನಲ್ಲಿ ಮನೆಮಾಡಿದ್ದ ಸಂಶಯವದಾಗಲೇ ಗಾಳಿಗೆ ಹಾರಿತ್ತು. ಆದರೂ ಈ ಟಿವಿ ಚಾನೆಲ್‌ನವರು ಯಾರ ಮನೆಗೆ ಕನ್ನ ಕೊರೀತಾರೆ, ಯಾರ ಮನೆಗೆ ಬಣ್ಣ ಬಳೀತಾರೆ ಅನ್ನೋದು ಒಂದೂ ಗೊತ್ತಾಗಲ್ವೇ. ಎಲ್ಲ ಟಿಆರ್‌ಪಿ ಲೀಲೆ!! ಎಂದು ಪತ್ನಿಯ ಬಳಿ ತನ್ನ ಸಿಬ್ಬಂದಿ ಮಿತ್ರನ ವಿಷಯವನ್ನು ತಿಳಿಸಿ ನಸು ನಕ್ಕನು. ■

ನಾವು ಮಾನವನನ್ನು ಮಣ್ಣಿನ ಸತ್ವದಿಂದ ಸೃಷ್ಟಿಸಿದೆವು. ತರುವಾಯ ಅದನ್ನು ಒಂದು ಸುರಕ್ಷಿತ ಸ್ಥಳದಲ್ಲಿ ತೊಟ್ಟಿಕ್ಕಿದ ಹನಿಯಾಗಿ ಮಾರ್ಪಡಿಸಿದೆವು. ಅನಂತರ ಆ ಹನಿಗೆ ಮಾಂಸಪಿಂಡದ ರೂಪ ಕೊಟ್ಟೆವು. ಬಳಿಕ ಮಾಂಸಪಿಂಡವನ್ನು ಮಾಂಸಖಂಡವನ್ನಾಗಿ ಮಾಡಿದೆವು. ಆಮೇಲೆ ಮಾಂಸಖಂಡವನ್ನು ಎಲುಬುಗಳಾಗಿ ಮಾಡಿದೆವು. ತರುವಾಯ ಎಲುಬುಗಳ ಮೇಲೆ ಮಾಂಸ ತೊಡಿಸಿದೆವು. ಆ ಬಳಿಕ ಅದನ್ನೊಂದು ಬೇರೆಯೇ ಸೃಷ್ಟಿಯನ್ನಾಗಿ ಮಾಡಿ ನಿಲ್ಲಿಸಿದೆವು. ಅಲ್ಲಾಹನು ಮಹಾ ಸಮೃದ್ಧನು; ಸಕಲ ಶಿಲ್ಪಿಗಳಿಗಿಂತ ಶ್ರೇಷ್ಠ ಶಿಲ್ಪಿ.

(ಪವಿತ್ರ ಕುರ್‌ಆನ್, 23: 12-14)

With best compliments from

ARAFAT AHMED

ಮಗುವಿನ ಆರೋಗ್ಯ – ಅಮ್ಮಂದಿರ ಕೈಯಲ್ಲಿ

ಡಾ। ನಸೀಮ ಪಿ.ಕೆ.

ಓರ್ವ ವ್ಯಕ್ತಿಯ ಆರೋಗ್ಯ ಮತ್ತು ವ್ಯಕ್ತಿತ್ವವನ್ನು ರೂಪಿಸುವುದರಲ್ಲಿ ಅವನು ಜನಿಸಿದ್ದರಿಂದ ಆರಂಭಿಸಿ ಪ್ರತಿ ನಿಮಿಷವು ಬಹಳ ಮುಖ್ಯವಾಗಿರುತ್ತದೆ. ನವಜಾತ ಶಿಶುಗಳನ್ನು ಸರಿಯಾದ ರೀತಿಯಲ್ಲಿ ಆರೈಕೆ ಮಾಡಿದರೆ ಮಾತ್ರ ಮುಂದೆ ಆರೋಗ್ಯಪೂರ್ಣ ವ್ಯಕ್ತಿತ್ವವುಳ್ಳ ಮನುಷ್ಯರಾಗಲು ಸಾಧ್ಯ.

ಗರ್ಭಿಣಿ ಸ್ತ್ರೀಯರ ಆಹಾರ, ವಿಹಾರ, ಶಾರೀರಿಕ ಮತ್ತು ಮಾನಸಿಕ ಆರೋಗ್ಯವು ಗರ್ಭದಲ್ಲಿರುವ ಮಗುವಿನ ಮೇಲೆ ನೇರ ಪರಿಣಾಮವನ್ನುಂಟು ಮಾಡ ಬಲ್ಲದು. ಗರ್ಭಸ್ಥ ಶಿಶುವಿನ ಬೆಳವಣಿಗೆ ಮತ್ತು ಸ್ವಾಸ್ಥ್ಯವನ್ನು ನಿರ್ಧರಿಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುವ ಅನೇಕ ವಿಷಯಗಳಿವೆ.

ಗರ್ಭಿಣಿಯಾಗುವುದರೊಂದಿಗೆ ಶಿಶುವಿನ ಬೆಳವಣಿಗೆ ಆರಂಭವಾಗುತ್ತದೆ. ಗರ್ಭಧಾರಣೆಯ ಎರಡನೆಯ ಹಂತದಲ್ಲಿ ಮತ್ತು ಮಗು ಜನಿಸಿದ ಆರಂಭದ ದಿನಗಳಲ್ಲಿ ಮಗುವಿನ ಬೆಳವಣಿಗೆ ಶೀಘ್ರವಾಗಿ ನಡೆಯುತ್ತದೆ.

ಎದೆಹಾಲು ಉಣಿಸುವುದು:

ಹೆರಿಗೆಯಾಗಿ ಅರ್ಧ ಗಂಟೆಯಲ್ಲೇ ಮಗುವಿಗೆ ಎದೆಹಾಲು ಉಣಿಸಲು ಆರಂಭಿಸಬೇಕು. ಆರೋಗ್ಯವಂತ ಮಗು ಎದೆಹಾಲು ಚೀಪಿ ಕುಡಿಯಲು ಆರಂಭಿಸುತ್ತದೆ. ಮಗುವಿನ ಮುಖಕ್ಕೆ ತಾಯಿಯ ಎದೆಯು ತಾಗಿದ ಕೂಡಲೇ ಮಗು ತಾಯಿಯೆಡೆಗೆ ತಿರುಗಿ ಎದೆಹಾಲು ಚೀಪಲು ಆರಂಭಿಸುತ್ತದೆ. ಅವಧಿ ಪೂರ್ವ ಜನಿಸಿದ ಮಗು ಅಥವಾ ಯಾವುದಾದರೂ ಆರೋಗ್ಯ ಸಮಸ್ಯೆ ಇರುವ ಮಗುವಿಗೆ ಚೆನ್ನಾಗಿ ಹಾಲು ಕುಡಿಯಲು ಸಾಧ್ಯವಾಗುವುದಿಲ್ಲ. ಹೆರಿಗೆಯಾದ ಕೂಡಲೇ ಮೊದಲ ಬಾರಿ ಸ್ತನಗಳಿಂದ ಸ್ರವಿಸುವ ಹಾಲಿಗೆ ಕೊಲೆ ಸ್ಟ್ರೋಮ್ ಎನ್ನುತ್ತಾರೆ. ಇದು ಮಗುವಿಗೆ ಅಮೃತ ಸಮಾನ. ರೋಗ ಪ್ರತಿರೋಧಕ ಶಕ್ತಿ ದೊರಕಲು ಮತ್ತು ಆರೋಗ್ಯಪೂರ್ಣ ಬೆಳವಣಿಗೆಗೆ ಇದು ಬಹಳ ಅಗತ್ಯ.

ಎದೆಹಾಲುಣಿಸುವ ವಿಧಾನಗಳು:

ಮಗು ಮತ್ತು ತಾಯಿಗೆ ಅನುಕೂಲವಾಗುವ ರೀತಿಯಲ್ಲಿ ಹಾಲುಣಿಸಬೇಕು. ಆರಂಭದ ಕೆಲವು ತಿಂಗಳಲ್ಲಿ ಕುಳಿತುಕೊಂಡೇ ಎದೆಹಾಲುಣಿಸುವುದು ಅತ್ಯುತ್ತಮ. ತಾಯಿ ಒರಗಿ ಕುಳಿತು ಮಗುವನ್ನು ಒಂದು ಕೈಯಲ್ಲಿ ಆಸರೆಯಾಗಿ ಹಿಡಿದುಕೊಂಡು, ಎದೆಯ ತೊಟ್ಟನ್ನು ಜೊತೆಗೆ ಅದರ ಸುತ್ತಲಿರುವ ಕಪ್ಪು ವೃತ್ತಾಕೃತಿಯ ಭಾಗ(ಎರಿಯೋಲ)ವನ್ನು ಮಗುವಿನ ಬಾಯಿಯೊಳಕ್ಕೆ ಹೋಗುವಂತೆ ಮಾಡಿ ಹಾಲುಣಿಸಬೇಕು. ಮಗು ಜನಿಸಿದ ಆರಂಭದ ದಿನಗಳಲ್ಲಿ ಈ ರೀತಿಯ ಉಣಿಸುವಿಕೆ ಬಹಳ ಪ್ರಯೋಜನಕಾರಿ. ಕೇವಲ ಸ್ತನದ ತೊಟ್ಟನ್ನು ಮಾತ್ರ ಮಗುವಿನ ಬಾಯಿಯೊಳಕ್ಕೆ ಹಾಕಿದರೆ ಮಗು ಎಳೆದು ಸ್ತನದ ತೊಟ್ಟು ನೋವು, ಬಾವು ಉಂಟಾಗಬಹುದು.

ಪ್ರತಿ ಎರಡು ಗಂಟೆಗಳಿಗೊಮ್ಮೆ ಮಗುವಿಗೆ ಎದೆಹಾಲುಣಿಸಬೇಕು. ಹೀಗೆ ನಿಯಮಿತವಾಗಿ ಎದೆಹಾಲುಣಿಸಿದರೆ ಮಾತ್ರ ಎದೆಹಾಲು ಸ್ರವಿಸುವ ಗ್ರಂಥಿಗಳು ಉತ್ತೇಜನಗೊಂಡು ಮಗುವಿಗೆ ಅಗತ್ಯವಿರುವಷ್ಟು ಹಾಲು ಉತ್ಪತ್ತಿಯಾಗಬಹುದು. ಎದೆಹಾಲು ಉಣಿಸುವುದರಿಂದ ಮಗು ಮತ್ತು ತಾಯಿಯ ಮಧ್ಯೆ ಭಾವನಾತ್ಮಕ ಸಂಬಂಧ ದೃಢಗೊಳ್ಳುವುದು.

ಮೊದಲು ಆರು ತಿಂಗಳಲ್ಲಿ ಮಗುವಿಗೆ ಎದೆಹಾಲು ಮಾತ್ರ ಸಾಕಾಗುತ್ತದೆ. ಮಾನಸಿಕ ಒತ್ತಡದಿಂದಾಗಿ, ವಿವಿಧ ಆರೋಗ್ಯ ಸಮಸ್ಯೆಗಳ ಕಾರಣದಿಂದಾಗಿ, ಔಷಧಗಳ ಸೇವನೆಯಿಂದಾಗಿ ಮಗುವಿಗೆ ಸಾಕಷ್ಟು ಎದೆಹಾಲು ಸಿಗದೆ ಹೋಗ

ಬಹುದು. ಆಗ ವೈದ್ಯರ ಮಾರ್ಗದರ್ಶನ ದಲ್ಲಿ ಎದೆಹಾಲು ವರ್ಧಕವಾದ ಔಷಧ ಗಳನ್ನು ಸೇವಿಸಬಹುದು. ಆದರೂ ಮಗುವಿಗೆ ಎದೆಹಾಲು ಉಣಿಸುವುದನ್ನು ಯಾವುದೇ ಕಾರಣಕ್ಕೂ ನಿಲ್ಲಿಸಬಾರದು.

ಎದೆಹಾಲಿನಲ್ಲಿರುವ ಅಂಶಗಳು:

ಎದೆಹಾಲಿನಲ್ಲಿ 80% ನೀರೇ ಇರುತ್ತದೆ. ಆದುದರಿಂದ ಚೆನ್ನಾಗಿ ಹಾಲು ಕುಡಿಯುವ ಮಕ್ಕಳಲ್ಲಿ ಆರಂಭದ ತಿಂಗಳುಗಳಲ್ಲಿ ಬೇರೆ ನೀರನ್ನು ಕುಡಿಸಬೇಕಾದ ಅಗತ್ಯವಿರುವುದಿಲ್ಲ. ಎದೆಹಾಲುಂಡ ಮಗು ಚೆನ್ನಾಗಿ ನಿದ್ರಿಸಿದರೆ ಪ್ರಾಯಕ್ಕನುಸಾರವಾಗಿ ದೇಹದ ತೂಕ ಹೆಚ್ಚುತ್ತಿದ್ದರೆ ಚಟುವಟಿಕೆಯಿಂದ ಇದ್ದರೆ, ಲವಲವಿಕೆಯಿಂದ ಇದ್ದರೆ ಮಗುವಿಗೆ ಅಗತ್ಯವಾದ ಹಾಲು ಸಿಗುತ್ತದೆ ಎಂದರ್ಥ. ಪ್ರತಿಬಾರಿ ಹಾಲುಣಿಸಿದ ಬಳಿಕವೂ ಮಗುವನ್ನು ಭುಜದ ಮೇಲೆ ಮಲಗಿಸಿ ನಿಧಾನವಾಗಿ ತಟ್ಟಿ ಹೆಚ್ಚಾದ ಗಾಳಿಯನ್ನು (ತೇಗು) ಹೊರಡಿಸುವುದು ಅತ್ಯಗತ್ಯ. ಎರಡು ವರ್ಷದ ವರೆಗೆ ಮಗುವಿಗೆ ಎದೆಹಾಲುಣಿಸಬೇಕು.

ಮಗುವಿನ ಸ್ನಾನ:

ಆರೋಗ್ಯಪೂರ್ಣವಾಗಿ ಜನಿಸಿದ ಮಗುವನ್ನು 2–4 ಗಂಟೆಗಳ ಬಳಿಕ ಸ್ನಾನ ಮಾಡಿಸಬಹುದು. ಶರೀರದ ತೂಕ, ಮಗುವಿನ ಪರಿಸ್ಥಿತಿ, ಆರೋಗ್ಯ ಮುಂತಾದವುಗಳನ್ನು ಗಮನಿಸಿಯೇ ಸ್ನಾನ ಮಾಡಿಸಬೇಕು.

ಎದೆಹಾಲಿನೊಂದಿಗೆ ಘನ ಆಹಾರ:

ಮಗುವಿಗೆ ಆರು ತಿಂಗಳ ಬಳಿಕ ಎದೆಹಾಲಿನೊಂದಿಗೆ ಘನ ಆಹಾರವನ್ನು ನೀಡಲು ಆರಂಭಿಸಬೇಕು. ಏಕೆಂದರೆ ಮಗುವಿನ ಬೆಳವಣಿಗೆ ಶೀಘ್ರಗತಿಯಲ್ಲಿ ಆಗುವುದರಿಂದ ಘನ ಆಹಾರದ ಅಗತ್ಯವಿರುತ್ತದೆ. ಮಕ್ಕಳು ಎಚ್ಚರದಿಂದಿರುವ ಸಮಯವು ಹೆಚ್ಚಾಗುವುದರಿಂದ ಅಧಿಕ ಶಕ್ತಿಯು ಬೇಕಾಗುತ್ತದೆ. ಆದುದರಿಂದ ಪೂರಕ ಆಹಾರ ನೀಡಬೇಕು. ಎದೆಹಾಲಿನಲ್ಲಿ ಕಬ್ಬಿಣದ ಅಂಶ ಕಡಿಮೆ ಇರುವುದರಿಂದ ಆರು ತಿಂಗಳ ಬಳಿಕ ಪೂರಕ ಆಹಾರವನ್ನು ನೀಡಬೇಕಾಗುತ್ತದೆ.

ಆಯುರ್ವೇದದ ಪ್ರಕಾರ ಮಗುವಿನ ಬಾಯಿಯಲ್ಲಿ ಹಲ್ಲುಗಳು ಕಾಣಿಸಲಾರಂಭಿಸುವಾಗ ಘನ ಆಹಾರವನ್ನು ಕೊಡಲು ಆರಂಭಿಸಬಹುದು. ದ್ರಾಕ್ಷಿ, ಕಿತ್ತಳೆ ಹಣ್ಣನ್ನು ಕೊಡಬಹುದು. ಯಾವುದೇ ಆಹಾರವನ್ನು ನೀಡುವಾಗ ಹಿರಿಯರು ಮಕ್ಕಳನ್ನು ನೋಡಿಕೊಳ್ಳಬೇಕು. ಧಾನ್ಯಗಳನ್ನು ಹುಡಿ ಮಾಡಿ ಪಾಯಸ (ಮಣ್ಣಿ) ತಯಾರಿಸಿ ಕೊಡುವಾಗಲೂ ಆರಂಭದಲ್ಲಿ ಒಂದಕ್ಕಿಂತ ಹೆಚ್ಚು ಧಾನ್ಯಗಳನ್ನು ಒಟ್ಟಿಗೆ ಸೇರಿಸಿ ಕೊಡಬಾರದು. ಇದು ಮಗುವಿನ ಜೀರ್ಣ ವ್ಯವಸ್ಥೆಗೆ ತೊಂದರೆಯುಂಟು ಮಾಡಬಹುದು. ಒಂದೊಂದೇ ಧಾನ್ಯದ ಹುಡಿಯನ್ನು ಪ್ರತ್ಯೇಕವಾಗಿ ತಿನ್ನಿಸಿ ಅಭ್ಯಾಸವಾದ ಬಳಿಕ ಒಂದಕ್ಕಿಂತ ಹೆಚ್ಚು ಧಾನ್ಯಗಳನ್ನು ಒಟ್ಟಿಗೆ ಹುಡಿಮಾಡಿಕೊಡಬಹುದು. ನೀರು ಅಥವಾ ಹಾಲನ್ನು ಸೇರಿಸಿ ಪಾಯಸ ತಯಾರಿಸಬಹುದು. ಸಿಹಿಯನ್ನು ಸೇರಿಸಿಕೊಟ್ಟರೆ ಉತ್ತಮ. ಮಗುವಿನ ಜೀರ್ಣಶಕ್ತಿಯ ಸಾಮರ್ಥ್ಯವನ್ನು ಗಮನದಲ್ಲಿರಿಸಿ ಆಲೂಗಡ್ಡೆ ಮತ್ತು ಸೇಬು ಹಣ್ಣನ್ನು ಆವಿಯಲ್ಲಿ ಬೇಯಿಸಿ ಕೊಡಬಹುದು. ಬಾಯಾರಿಕೆ ನೀಗಿಸಲು ಗಂಜಿ ನೀರು, ತುಳಸಿ ಎಲೆ ಹಾಕಿ ಕುದಿಸಿ ಸೋಸಿದ ನೀರು, ಸ್ವಲ್ಪ ಬಿಸಿಯುಳ್ಳ ನೀರು ಅಗತ್ಯಾನುಸಾರ ಕೊಡಬಹುದು. ಅಕ್ಕಿಯ ಮೃದುವಾದ ಗಂಜಿ ತಯಾರಿಸಿ ಅದಕ್ಕೆ ತುಪ್ಪ ಹಾಕಿಯೂ ಮಗುವಿಗೆ ತಿನ್ನಿಸಬಹುದು.

> **ಕು(ಯುಕ್ತಿ)**
>
> ಯುಕ್ತಿ-ಸಯುಕ್ತಿಗಳ ಮಧ್ಯೆ
> ಬಲು ಸೂಕ್ಷ್ಮ ಅಂತರ
> ಯುಕ್ತಿಯಲ್ಲದೆ
> ನ್ಯಾಯ-ನೀತಿ ದೇವಭಯ, ನಿಷ್ಠೆ
> ಕುಯುಕ್ತಿಯಲ್ಲದೆ
> ಸ್ವಾರ್ಥ, ಕುತಂತ್ರ ಆತ್ಮ ಪ್ರತಿಷ್ಠೆ
>
> **ಅಬೂ ಅನೀಸ್, ಕಲ್ಲಾಪು**

ಮಗುವಿನ ಆಟದ ಸ್ಥಳ ಮತ್ತು ಆಟಿಕೆಗಳು:

ಮಗು ಆಟವಾಡುವ ಸ್ಥಳ ಶುದ್ಧವಾಗಿರುವಂತೆ ಮತ್ತು ಸ್ವಚ್ಛವಾಗಿರುವಂತೆ ಜಾಗರೂಕತೆ ವಹಿಸಬೇಕು. ಮಗುವಿನ ಆಟಿಕೆಗಳನ್ನು ಮಗುವಿನ ವಯಸ್ಸು ಅನುಸರಿಸಿ ನೀಡಬೇಕು. ಬುದ್ಧಿಶಕ್ತಿ ಹೆಚ್ಚಿಸುವ, ವ್ಯಕ್ತಿತ್ವ ವಿಕಸನಕ್ಕೆ ಸಹಾಯಕವಾಗುವ ಆಟಿಕೆಗಳನ್ನು ಆರಿಸಿಕೊಳ್ಳಿ. ಮಗುವಿನ ಕಿವಿ, ಮೂಗಿನ ಹೊಳ್ಳೆಯೊಳಗೆ ಹೋಗುವಷ್ಟು ಪುಟ್ಟದಾದ ಆಟಿಕೆ ನೀಡಬೇಡಿ. ಅದೇ ರೀತಿ ಚೂಪಾದ ಅಂಚುಳ್ಳ ಯಾವುದೇ ಆಟಿಕೆಯನ್ನು ಮಗುವಿಗೆ ನೀಡಬೇಡಿ.

ರೋಗ ಮತ್ತು ಚಿಕಿತ್ಸೆ:

* ಮಗು ಜನಿಸಿದಾಗ ಮಗುವಿನ ತಲೆಯ ಆಕಾರವು ಸ್ವಲ್ಪ ಭಿನ್ನವಾಗಿರುತ್ತದೆ. ಇದಕ್ಕೆ ಗಾಬರಿಪಡಬೇಕಾಗಿಲ್ಲ. ಮಗು ಬೆಳೆದಂತೆ ಇದು ತನ್ನಿಂತಾನೇ ಸರಿಹೋಗುತ್ತದೆ.

* ಮಗು ಜನಿಸಿ ಎರಡು ದಿನಗಳು ಕಳೆದಾಗ ಚರ್ಮದ ಬಣ್ಣವು ಸ್ವಲ್ಪ ಮಟ್ಟಿಗೆ ಹಳದಿಯಾಗುತ್ತದೆ. ಬೆಳಗ್ಗಿನ ಸೂರ್ಯನ ಬಿಸಿಲಿಗೆ ಮಗುವನ್ನು ಸ್ವಲ್ಪ ಹೊತ್ತು ಹಿಡಿಯಿರಿ. ಹೆಚ್ಚು ಪ್ರಮಾಣದಲ್ಲಿ ಹಳದಿ ಬಣ್ಣ ಕಂಡು ಬಂದರೆ ವೈದ್ಯರನ್ನು ಸಂಪರ್ಕಿಸಿ.

* ಮಗು ಜನಿಸಿ 6–7 ದಿನಗಳಲ್ಲಿ ಹೊಕ್ಕುಳ ಬಳ್ಳಿ ಒಣಗಿ ಬೀಳುತ್ತದೆ.

* ಹೊಕ್ಕಳಲ್ಲಿ ಏನಾದರೂ ಸ್ರಾವ, ವಾಸನೆ ಇದ್ದರೆ ಅದು ಬ್ಯಾಕ್ಟೀರಿಯಾ ಸೋಂಕಿನಿಂದ ಆಗಿರಬಹುದು. ವೈದ್ಯರನ್ನು ಸಂಪರ್ಕಿಸಿ.

* ಒಂದು ವಾರ ಕಳೆದ ಬಳಿಕ ಮಗುವಿನ ದೇಹದಲ್ಲಿ ಸಣ್ಣ ಸಣ್ಣ ದಡ್ಡುಗಳು ಕಾಣಿಸಬಹುದು. ಇದರ ಜೊತೆ ಜ್ವರವಿದ್ದರೆ ವೈದ್ಯರನ್ನು ಸಂಪರ್ಕಿಸಿ. ಇಲ್ಲದಿದ್ದರೆ ಅದು ತನ್ನಷ್ಟಕ್ಕೆ ಗುಣವಾಗುತ್ತದೆ.

* ಕಂಕುಳ, ಕುತ್ತಿಗೆಯ ಅಡಿ ಭಾಗದಲ್ಲಿ ಕೆಂಪು ಆಗುತ್ತದೆ. ನೀರಿನ

ಪಸೆ ಸ್ವಲ್ಪವೂ ಉಳಿಯದಂತೆ ಒರೆಸಿ ತೆಗೆಯಿರಿ.

ಮಲಬದ್ಧತೆ:

ಒಣದ್ರಾಕ್ಷಿಯನ್ನು ನೀರಿನಲ್ಲಿ ನೆನೆಹಾಕಿ ಮರುದಿನ ಅದನ್ನು ಹಿಚುಕಿ ತೆಗೆದು ಆ ನೀರನ್ನು ಎದೆಹಾಲಿನೊಂದಿಗೆ ಸೇರಿಸಿ ಮಗುವಿಗೆ ಕುಡಿಸಿ. ಇದರಿಂದ ಮಲ ಬದ್ಧತೆ ನಿವಾರಣೆಯಾಗುತ್ತದೆ.

ಸಾಯಂಕಾಲವಾಗುತ್ತಿದ್ದಂತೆ ಅಳು:

ಯಾವುದೇ ಕಾರಣವಿಲ್ಲದೆಯೂ ಮಗು ಸಾಯಂಕಾಲವಾಗುತ್ತಿದ್ದಂತೆ ಅಳುವುದಕ್ಕೆ ಆರಂಭಿಸಬಹುದು. ಕೆಲವು ವೇಳೆ ಹೊಟ್ಟೆನೋವು ಅಥವಾ ಬೇರೆ ಯಾವುದಾದರೂ ಕಾರಣಕ್ಕೆ ಆಗಿರಬಹುದು. ಮಗುವನ್ನು ಹೆಗಲ ಮೇಲೆ ಹಾಕಿ ಬೆನ್ನನ್ನು ನೀವಿದರೆ, ಹೊಟ್ಟೆಯಲ್ಲಿ ಹೆಚ್ಚಾಗಿ ಸೇರಿದ ವಾಯು ಹೊರ ಹೋಗುತ್ತದೆ.

ಎದೆಹಾಲುಣಿಸುವಾಗ ಗಮನಿಸಿ:

ಒಮ್ಮೆ ಮಗುವಿಗೆ ಹಾಲುಣಿಸುವಾಗ ಒಂದು ಸ್ತನದಲ್ಲಿ ಸಂಪೂರ್ಣ ಹಾಲು ಮುಗಿಯುವವರೆಗೆ ಕುಡಿಸಿ. ಸಾಮಾನ್ಯವಾಗಿ ಒಂದು ಬಾರಿಗೆ ಎರಡು ಕಡೆಯ ಸ್ತನಗಳಿಂದ ಹಾಲುಣಿಸಲು ಪ್ರಯತ್ನಿಸುತ್ತಾರೆ. ಇದರಿಂದ ಮೊದಲು ಸ್ರವಿಸುವ ನೀರಿನ ಅಂಶ ಹೆಚ್ಚಿರುವ ಹಾಲು ಮಾತ್ರ ಮಗುವಿಗೆ ಸಿಗುತ್ತದೆ. ಆದುದರಿಂದ ಒಂದು ಬಾರಿ ಎರಡು ರೀತಿಯ ಹಾಲು ಸಿಗುವಂತೆ ನೀಡಿದರೆ ಮಗು ಅಪೌಷ್ಠಿಕತೆಗೆ ಒಳಗಾಗುವುದರಿಂದ ತಪ್ಪಿಸಬಹುದು.

ಘನ ಆಹಾರ ಆರಂಭಿಸುವಾಗ ಗಮನಿಸಿ:

ಆರು ತಿಂಗಳ ಬಳಿಕ ಮಗುವಿಗೆ ಘನ ಆಹಾರ ನೀಡಲು ಆರಂಭಿಸುವಾಗ ಸ್ವಲ್ಪ ಹೆಚ್ಚು ನೀರಾಗಿರುವಂತೆ ತಯಾರಿಸಿ. ಕ್ರಮೇಣ ಅದನ್ನು ಸ್ವಲ್ಪ ಮಂದಗೊಳಿಸಬಹುದು. ಆರಂಭದಲ್ಲಿ ದಿನಕ್ಕೊಂದು ಬಾರಿ ಘನ ಆಹಾರ ನೀಡಿದರೆ ಸಾಕು. ಕ್ರಮೇಣ ದಿನಕ್ಕೆರಡು ಬಾರಿ ಮೂರು ಬಾರಿಯೂ ನೀಡಬಹುದು. ಮಗುವಿಗೆ ಹಲ್ಲು ಮೂಡುವಾಗ ಹೆಚ್ಚು ಅನಾರೋಗ್ಯ ಉಂಟಾಗುತ್ತದೆ. ಆದುದರಿಂದ ನೀಡುವ ಆಹಾರದ ಬಗ್ಗೆ ಬಹಳ ಜಾಗರೂಕತೆ ಪಾಲಿಸಬೇಕು.

ಒಂದು ವರ್ಷವಾದ ಬಳಿಕ ಮಗುವಿಗೆ ಮನೆಯ ಹಿರಿಯರು ತಿನ್ನುವ ಎಲ್ಲ ಆಹಾರವನ್ನು ನೀಡಬಹುದು. ಆದರೆ ಹಿತಮಿತವಾಗಿ ನೀಡಬೇಕು. ಮಗುವಿನ ಜೀರ್ಣಶಕ್ತಿಯ ಬಗ್ಗೆ ಗಮನವಿರಬೇಕು. ಎರಡು ವರ್ಷದವರೆಗೆ ನಿರಂತರ ಎದೆಹಾಲುಣಿಸುವುದನ್ನು ಮುಂದುವರಿಸಬೇಕು. ಸಣ್ಣ ಮಕ್ಕಳು ಆಹಾರ ಸೇವಿಸಲು ಹಠ ಮಾಡುವುದು ಸ್ವಾಭಾವಿಕ. ಆದುದರಿಂದ ಆಹಾರದ ರುಚಿಯನ್ನು ಬದಲಾಯಿಸಿ ನೋಡಿ. ಪ್ರೀತಿಯಿಂದ ತಿನ್ನಿಸಿ. ■

ನಿಮ್ಮ ಪೈಕಿ ಚಾರಿತ್ರ್ಯದಲ್ಲಿ ಉತ್ತಮನೇ ಅತ್ಯುತ್ತಮನು.
(ಪ್ರವಾದಿ ಮುಹಮ್ಮದ್(ಸ))

With best compliments from

CANARA TRADING CO.

All kinds of Timber and Centering Plywood

84, Lakdi Bunder Darukhana, MAZGAON, MUMBAI - 400 010
Phone: (022) 23745348 / 9821311353

Branch: **CANARA WOODPLY**

All kinds of Timbers, Centering Plywood, Bamboo, Poles and Stead Plates

Palaspa Phata, Opp. Mahindra Showroom, Old Mumbai,
Pune Road, Panvel, Dist. - Raigadh
Phone : 9821044924 / 9821311353

ಕಾರ್ನ್ ಆ್ಯಂಡ್ ಚೀಸ್ ಕಟ್ಲೆಟ್

ಬೇಕಾಗುವ ಸಾಮಗ್ರಿಗಳು:

ಅಮೇರಿಕನ್ ಕಾರ್ನ್– 200 ಗ್ರಾಂ, ಬಟಾಟೆ– 100 ಗ್ರಾಂ (ಬೇಯಿಸಿದ್ದು), ಮೆಣಸಿನ ಕಾಯಿ ಪೇಸ್ಟ್– 1/2 ಟೀ.ಸ್ಪೂ., ಬ್ರೆಡ್ ಹುಡಿ– ಅಗತ್ಯಕ್ಕೆ, ಮೊಟ್ಟೆ– 1, ಚೀಸ್– ಒಂದು ಕಪ್(ಹುಡಿ ಮಾಡಿದ್ದು), ಉಪ್ಪು– ರುಚಿಗೆ, ಎಣ್ಣೆ– ಕಾಯಿಸಲು.

ತಯಾರಿಸುವ ವಿಧಾನ: ಅಮೇರಿಕನ್ ಜೋಳವನ್ನು ಮಿಕ್ಸಿಯಲ್ಲಿ ಹಾಕಿ ತರಿತರಿಯಾಗಿ ಹುಡಿ ಮಾಡಿಕೊಳ್ಳಿ. ಬೇಯಿಸಿದ ಬಟಾಟೆ, ಉಪ್ಪು, ಮೆಣಸಿನ ಪೇಸ್ಟ್ ಸೇರಿಸಿ ಚೆನ್ನಾಗಿ ಮಿಕ್ಸ್ ಮಾಡಿಕೊಳ್ಳಿ. ಅದನ್ನು ಸ್ವಲ್ಪ ಅಂಗೈಯಲ್ಲಿ ತೆಗೆದು ತಟ್ಟಿ ಮಧ್ಯದಲ್ಲಿ ಚೀಸ್ ಹುಡಿ ಹಾಕಿ ಸುತ್ತಿ. ಅದನ್ನು ಮೊಟ್ಟೆಯಲ್ಲಿ ಮುಳುಗಿಸಿ ಬ್ರೆಡ್ ಹುಡಿ ಹರಡಿ ಎಣ್ಣೆಯಲ್ಲಿ ಕಾಯಿಸಿ ತೆಗೆಯಿರಿ.

ಚಿಕನ್ ವಡ

ಬೇಕಾಗುವ ಸಾಮಗ್ರಿಗಳು:

ಚಿಕನ್ ಕೀಮ– 1/2 ಕೆ.ಜಿ., ಹಸಿಮೆಣಸಿನ ಕಾಯಿ– 5, ಬ್ರೆಡ್ ಹುಡಿ– 1 1/2 ಕಪ್, ಮೈದ– 1 ಕಪ್, ಕಡ್ಲೆಹಿಟ್ಟು– ಒಂದು ಟೀ.ಸ್ಪೂ., ಬಟಾಟೆ– 2 (ಬೇಯಿಸಿ ಹುಡಿ ಮಾಡಿದ್ದು), ಮೊಟ್ಟೆ– 3, ಶುಂಠಿ ಬೆಳ್ಳುಳ್ಳಿ ಪೇಸ್ಟ್– 2 ಟೀ.ಸ್ಪೂ., ಪುದಿನ ಎಲೆ– 1/4 ಕಪ್, ಕರಿಬೇವಿನ ಎಲೆ– 2 ಟೀ.ಸ್ಪೂ., ಕರಿ ಮೆಣಸಿನ ಹುಡಿ– 2 ಟೀ.ಸ್ಪೂ., ಬೇಕಿಂಗ್ ಪೌಡರ್–1/2 ಟೀ.ಸ್ಪೂ., ಉಪ್ಪು– ರುಚಿಗೆ, ಎಣ್ಣೆ– ಕರಿಯಲು.

ತಯಾರಿಸುವ ವಿಧಾನ: ಕೋಳಿ ಕೀಮ ಬೇಯಿಸಿದ್ದು, ಬಟಾಟೆ ಬೇಯಿಸಿ ಹುಡಿ ಮಾಡಿದ್ದು, ಕಡಲೆ ಹಿಟ್ಟು, ಮೈದ ಎಲ್ಲವನ್ನು ಮಿಕ್ಸ್ ಮಾಡಿ, ಬ್ರೆಡ್ ಹುಡಿ ಮತ್ತು ಮೊಟ್ಟೆಯನ್ನು ಬಿಟ್ಟು ಉಳಿದೆಲ್ಲ ವಸ್ತುಗಳನ್ನು ಇದಕ್ಕೆ ಸೇರಿಸಿ ಮಿಕ್ಸ್ ಮಾಡಿ. ಬಳಿಕ ಒಂದೊಂದೇ ಉಂಡೆಯನ್ನು ತೆಗೆದು ವಡೆಯಾಕೃತಿ ಮಾಡಿ ಮೊಟ್ಟೆಯಲ್ಲಿ ಮುಳುಗಿಸಿ, ಬ್ರೆಡ್ ಹುಡಿ ಹರಡಿ ಬಿಸಿ ಎಣ್ಣೆಯಲ್ಲಿ ಕಡಿದು ತೆಗೆಯಿರಿ.

ಅನುಪಮ
ಚಂದಾ ವಿವರ

	ಭಾರತದಲ್ಲಿ	ಗಲ್ಫ್ ರಾಷ್ಟ್ರಗಳಲ್ಲಿ
ವಾರ್ಷಿಕ	ರೂ. 250/-	ರೂ. 1000/-
ದ್ವೈ ವಾರ್ಷಿಕ	ರೂ. 500/-	ರೂ. 2000/-
ಬಿಡಿ ಪ್ರತಿ	ರೂ. 23/-	---

ಚಿಕನ್ ಮಲಾಯ್ ಬೋಟಿ

ಬೇಕಾಗುವ ಸಾಮಗ್ರಿಗಳು:

ಎಲುಬಿಲ್ಲದ ಚಿಕನ್ ತುಂಡುಗಳು– 500 ಗ್ರಾಂ, ದಪ್ಪ ಮೊಸರು– 2 ಟೀ.ಸ್ಪೂ., ಫ್ರೆಶ್‌ಕ್ರೀಮ್– 4 ಟೀ.ಸ್ಪೂ., ಹಸಿಮೆಣಸಿನ ಕಾಯಿ– 2, ಕೊತ್ತಂಬರಿ ಸೊಪ್ಪು– 4 ಟೀ.ಸ್ಪೂ., ಕರಿಮೆಣಸಿನ ಹುಡಿ– 1 ಟೀ.ಸ್ಪೂ., ಬಿಳಿಕರಿ ಮೆಣಸಿನ ಹುಡಿ– 1/2 ಟೀ.ಸ್ಪೂ., ಮೆಣಸಿನ ಹುಡಿ– 1/2 ಟೀ.ಸ್ಪೂ., ಹಳದಿ ಹುಡಿ– 1 ಚಿಟಿಕೆ, ಜೀರಿಗೆ ಹುಡಿ– 1 ಟೀ.ಸ್ಪೂ., ಕೊತ್ತಂಬರಿ ಹುಡಿ– 1/2 ಟೀ.ಸ್ಪೂ., ಗರಮ್ ಮಸಾಲ ಹುಡಿ– 1/4 ಟೀ.ಸ್ಪೂ., ಬೆಳ್ಳುಳ್ಳಿ ಪೇಸ್ಟ್– 1 ಟೀ.ಸ್ಪೂ., ಶುಂಠಿ ಪೇಸ್ಟ್– 1 ಟೀ.ಸ್ಪೂ., ಕಾರ್ನ್‌ಫ್ಲೋರ್– 1 ಟೀ.ಸ್ಪೂ., ಎಣ್ಣೆ/ಬೆಣ್ಣೆ– 1 ಟೀ.ಸ್ಪೂ., ಉಪ್ಪು ರುಚಿಗೆ.

ತಯಾರಿಸುವ ವಿಧಾನ: ಕೋಳಿಯನ್ನು ಕ್ಯೂಬ್‌ಗಳಾಗಿ ಕತ್ತರಿಸಿ ಚೆನ್ನಾಗಿ ತೊಳೆದು ನೀರು ಬಸಿಯಿರಿ. ಉಪ್ಪು, 1/2 ಟೀ.ಸ್ಪೂ. ಶುಂಠಿ ಮತ್ತು ಬೆಳ್ಳುಳ್ಳಿ ಪೇಸ್ಟ್, ಮೆಣಸಿನ ಹುಡಿ ಸೇರಿಸಿ ಒಂದು ಗಂಟೆ ಫ್ರಿಜ್‌ನಲ್ಲಿಡಿ. ಹಸಿ ಮೆಣಸು ಮತ್ತು ಕೊತ್ತಂಬರಿ ಸೊಪ್ಪನ್ನು ಮಿಕ್ಸಿಯಲ್ಲಿ ಅರೆಯಿರಿ. ಉಳಿದ ಎಲ್ಲ ವಸ್ತುಗಳನ್ನು ಇದಕ್ಕೆ ಸೇರಿಸಿ ಮಿಕ್ಸ್ ಮಾಡಿ. ಫ್ರಿಜ್‌ನಲ್ಲಿಟ್ಟ ಕೋಳಿ ತುಂಡುಗಳನ್ನು ಹೊರತೆಗೆದು ತಯಾರಿಸಿಟ್ಟ ಮಸಾಲೆಯನ್ನು ಸವರಿ ಇಡಿ. ಇದನ್ನು ಒಂದು ಕಡ್ಡಿಗೆ 4–5 ತುಂಡುಗಳನ್ನು ಸೇರಿಸಿ. 5 ಗಂಟೆ ಫ್ರಿಜ್‌ನಲ್ಲಿಡಿ. ಇದನ್ನು ಓವನ್‌ನಲ್ಲಿ ಅಥವಾ ಸಣ್ಣ ಉರಿಯಲ್ಲಿ ತವಾದ ಮೇಲಿಟ್ಟು ಕೋಳಿ ಬೇಯುವವರೆಗೆ ಕಾಯಿಸಿ.

ಕ್ರೀಮಿ ಕಾಲ್‌ಸ್ಲೋ

ಬೇಕಾಗುವ ಸಾಮಗ್ರಿಗಳು:

ಕ್ಯಾಬೇಜ್– 1/2 ಕಪ್, ಕ್ಯಾರೆಟ್ ತುರಿ– 1/4 ಕಪ್, ಮಯೊನೀಸ್– 1/2 ಕಪ್, ಆಪಲ್ ವಿನೇಗರ್– ಎರಡು ಟೀ.ಸ್ಪೂ., ದಪ್ಪ ಮೊಸರು– ಒಂದು ಟೀ.ಸ್ಪೂ., ಉಪ್ಪು– ಒಂದು ಚಿಟಿಕೆ, ಹಾಲು– ಮೂರು ಟೀ.ಸ್ಪೂ., ಸಕ್ಕರೆ ಹುಡಿ– 1 1/2 ಟೀ.ಸ್ಪೂ.

ತಯಾರಿಸುವ ವಿಧಾನ: ಮಯೊನೀಸ್, ವಿನೇಗರ್, ಮೊಸರು, ಉಪ್ಪು ಹಾಕಲು, ಸಕ್ಕರೆ ಹುಡಿ ಎಲ್ಲವನ್ನು ಒಟ್ಟಿಗೆ ಸೇರಿಸಿ ಮಿಕ್ಸ್ ಮಾಡಿ. ಇದಕ್ಕೆ ತುರಿದಿಟ್ಟ ಕ್ಯಾರೆಟ್ ಮತ್ತು ಕ್ಯಾಬೇಜ್ ಸೇರಿಸಿ ಮಿಕ್ಸ್ ಮಾಡಿ ಎರಡು ಗಂಟೆ ಫ್ರಿಜ್‌ನಲ್ಲಿಡಿ. ಬಳಿಕ ಬಡಿಸಬಹುದು.

ರವೆ–ಈರುಳ್ಳಿ ವಡೆ

ಬೇಕಾಗುವ ಸಾಮಗ್ರಿಗಳು:

ರವೆ ಹುರಿದದ್ದು– 3 ಕಪ್, ಮೈದ– 1/4 ಕಪ್, ಅಕ್ಕಿ ಹುಡಿ–1/2 ಕಪ್, ಹಸಿಮೆಣಸಿನ ಕಾಯಿ– 5 (ಸಣ್ಣಗೆ ಕತ್ತರಿಸಿದ್ದು), ಶುಂಠಿ– 1 ಟೀ.ಸ್ಪೂ. (ಸಣ್ಣಗೆ ಕತ್ತರಿಸಿದ್ದು), ಈರುಳ್ಳಿ– 1/2 ಕಪ್ (ಸಣ್ಣಗೆ ಕತ್ತರಿಸಿದ್ದು), ಕೊತ್ತಂಬರಿ ಸೊಪ್ಪು– 1/2 ಕಪ್, ಬೇಕಿಂಗ್ ಪೌಡರ್– 1 ಟೀ.ಸ್ಪೂ., ಮೊಸರು– 1 ಕಪ್, ನೀರು– ಅಗತ್ಯಕ್ಕೆ, ಉಪ್ಪು– ಅಗತ್ಯಕ್ಕೆ, ಎಣ್ಣೆ– ಕರಿದು ತೆಗೆಯಲು.

ತಯಾರಿಸುವ ವಿಧಾನ: ಎಲ್ಲಾ ವಸ್ತುಗಳನ್ನು (ಎಣ್ಣೆಯನ್ನು ಬಿಟ್ಟು) ಚೆನ್ನಾಗಿ ಮಿಕ್ಸ್ ಮಾಡಿ. ಸಣ್ಣ ಉಂಡೆ ಮಾಡಿ ವಡೆಯಾಕಾರದಲ್ಲಿ ತಟ್ಟಿ ಬಿಸಿಯಾದ ಎಣ್ಣೆಯಲ್ಲಿ ಕರಿದು ತೆಗೆಯಿರಿ. ಕಡಲೆ ಚಟ್ನಿಯೊಂದಿಗೆ ಸವಿಯಲು ಚೆನ್ನಾಗಿರುತ್ತದೆ.

ಪಾಕೆಟ್ ಶವರ್ಮ

ಬೇಕಾಗುವ ಸಾಮಗ್ರಿಗಳು:

ಮೈದ– 2 ಕಪ್, ಈಸ್ಟ್– 2 ಟೀ.ಸ್ಪೂ., ತುಸು ಬೆಚ್ಚಗಿನ ಹಾಲು– ಹಿಟ್ಟನ್ನು ನಾದಲು, ಸಕ್ಕರೆ– 1 ಟೀ.ಸ್ಪೂ., ಉಪ್ಪು– ರುಚಿಗೆ.

ಸ್ವಲ್ಪ ಹಾಲಿನಲ್ಲಿ ಈಸ್ಟ್ ಮತ್ತು ಸಕ್ಕರೆ ಹಾಕಿ ಕರಗಿಸಿ. ಹೆಚ್ಚು ನಿಮಿಷ ಇಡಿ. ಇದನ್ನು ಮೈದಕ್ಕೆ ಸೇರಿಸಿ ಉಳಿದ ಹಾಲು, ಉಪ್ಪು ಸೇರಿಸಿ ಹಿಟ್ಟನ್ನು ಗಟ್ಟಿಯಾಗಿ (ಚಪಾತಿ ಹಿಟ್ಟಿ ನಂತೆ) ನಾದಿಟ್ಟುಕೊಳ್ಳಿ. ಗಾಳಿಯಾಡದ ಡಬ್ಬ ದಲ್ಲಿ ಹಾಕಿ ಎರಡು ಗಂಟೆ ಇಡಿ.

ಶವರ್ಮ ಫಿಲ್ಲಿಂಗ್ ತಯಾರಿಸಲು: ಎಲುಬಿಲ್ಲದ ಕೋಳಿ ತುಂಡುಗಳು ಬೇಯಿಸಿ ಸಣ್ಣಗೆ ಕತ್ತರಿಸಿದ್ದು. (ಬೇಯಿಸುವಾಗ ಹಳದಿಹುಡಿ, ಕರಿಮೆಣಸಿನ ಹುಡಿ, ಉಪ್ಪು ಸೇರಿಸಿ).

ಕ್ಯಾಬೇಜ್ ತುರಿದದ್ದು 1 ಕಪ್, ಕ್ಯಾರೆಟ್– $^1/_4$ ಕಪ್, ಮಯೊನೀಸ್– 2 ಟೀ.ಸ್ಪೂ., ಆಲಿವ್ ಆಯಿಲ್– 3 ಟೀ.ಸ್ಪೂ., ಕರಿಮೆಣಸಿನ ಹುಡಿ– 1 ಟೀ.ಸ್ಪೂ., ಹಸಿಮೆಣಸಿನ ಕಾಯಿ, ಶುಂಠಿ, ಬೆಳ್ಳುಳ್ಳಿ ಪೇಸ್ಟ್, 1 ಸ್ಪೂ., ಉಪ್ಪು– ರುಚಿಗೆ, ಎಣ್ಣೆ– ಅಗತ್ಯಕ್ಕೆ ತಕ್ಕಷ್ಟು, ಕರಿಯಲು ಎಣ್ಣೆ.

ತಯಾರಿಸುವ ವಿಧಾನ: ಒಂದು ಪ್ಯಾನ್‌ನಲ್ಲಿ ಆಲಿವ್ ಆಯಿಲ್ ಬಿಸಿ ಮಾಡಿ ಚಿಕನ್ ತುಂಡುಗಳನ್ನು ಸಣ್ಣಗೆ ಹುರಿಯಿರಿ. ಅದಕ್ಕೆ ಕ್ಯಾಬೇಜ್, ಕ್ಯಾರೆಟ್ ಶುಂಠಿ, ಬೆಳ್ಳುಳ್ಳಿ ಸೇರಿಸಿ ಬಾಡಿಸಿ. ಒಲೆಯಿಂದ ಕೆಳಗಿಳಿಸಿದ ಬಳಿಕ ಮಯೊನೀಸ್ ಸೇರಿಸಿ. ತಯಾರಿಸಿಟ್ಟ ಮೈದ ಹಿಟ್ಟನ್ನು ಪೂರಿಯಂತೆ ಲಟ್ಟಿಸಿ. ಅದರ ಮೇಲೆ ಕ್ಯಾಬೇಜ್ ಮಿಶ್ರಣ ಸೇರಿಸಿ ಪುನಃ ಒಂದು ಹಿಟ್ಟು ಲಟ್ಟಿಸಿ ಅದರ ಮೇಲೆ ಹಾಕಿ ಬದಿಯನ್ನು ಒತ್ತಿ ಬಿಡಿ. ಇದನ್ನು ಬಿಸಿಯಾದ ಎಣ್ಣೆಯಲ್ಲಿ ಕರಿದು ತೆಗೆಯಿರಿ. ಕಂದು ಬಣ್ಣ ಬರುವ ಮೊದಲೇ ತೆಗೆಯಿರಿ. ಮಯೊನೀಸ್ ಕೆಚಪ್‌ನೊಂದಿಗೆ ಸವಿಯಿರಿ.

ಹಿಬಾ ಅನಮ್

ಶೃಂಗಾರ

■ ಹಸೀನಾ ಆಲಿಯ

ಹಸೀನಾ ಕಾರವಾರ

- **ಶೋಭಾ ಕರಂದ್ಲಾಜೆ ಮುಖ್ಯ ಮಂತ್ರಿ ಆಗ್ತಾರಂತೆ ಹೌದಾ...?**

- ❍ ಗಾಳಿ ಸುದ್ದಿಗಳನ್ನು ಜಾಸ್ತಿ ಕೇಳ್ಬಾರ್ದು ಅನ್ನೋದು ಇದಕ್ಕೆ ನೋಡಿ.

ಗುರು ರಾಜಚಾರು ಸಂಗನಕಲ್ಲು

- **ಮೂಗಿನ ಮೇಲೆ ಸಿಟ್ಟು ಜಾಸ್ತಿ ಹೆಣ್ಣಿಗೋ ಗಂಡಿಗೋ?**
- ❍ ಸುಮ್ನೆ ಕೋಪ ಬರಿಸ್ಬೇಡ ಅಂತಾ ರಲ್ಲ ಅವರಿಗೆ.

ಪ್ರೀತಿ ಆರ್. ರಾಮನಗರ

- **ಕೊಲೆಯನ್ನು ರಾಜಕೀಯ ಲಾಭಕ್ಕಾಗಿ ಬಳಸುವವರಿಗೆ ನಿಮ್ಮ ಕಿವಿಮಾತು?**
- ❍ ಹೆಣದ ಮೇಲೆ ಅಧಿಕಾರ ಸಿಂಹಾಸನ ಕಟ್ಟಬೇಡಿ.

ಅಮರೇಶ್ ರಾಯಚೂರು

- **ಗೌರಿ ಹಂತಕರ ಹುಡುಕ ಹೋಗಿ ರವಿ ಬೆಳಗೆರೆ ಸಿಕ್ಕಿ ಬಿದ್ದ ಬಗ್ಗೆ...?**
- ❍ ಸಾಚಾ ಸಾಹಿತಿಗಳ ಕಾಲ ಈಗೆಲ್ಲಿದೆ ಅನ್ನಿಸಿತು.

ವೆಂಕಮ್ಮ ಹೊಸಪೇಟೆ

- **ಹಾಲು-ಜೇನು ಸೇರಿದರೆ ಸಂಸಾರ, ಬೇವು-ಬೆಲ್ಲ ಸೇರಿದರೆ...?**
- ❍ ಸಮರಸದ ಸ್ವಾದ...

ಹರ್ಷಿತಾ ಚಿಕ್ಕಮಗಳೂರು

- **ಕಪ್ಪಾಗಿದ್ದರೂ ಪರ್ವಾಗಿಲ್ಲ ಹೆಂಡತಿ ತೆಪ್ಪಗಿರಬೇಕೆಂದು ಇಲ್ಲೊಬ್ಬ ಸಲಹೆ ನೀಡುತ್ತಾನಲ್ಲಾ?**
- ❍ ಹುಡುಗಿ ಬೊಂಬೆಯಂತಿದ್ರೆ ಆತ ಕೈಗೊಂಬೆಯಾಗಿರಬಹುದು ಅದಕ್ಕೆ.

ಮಧು ಸೊರಬ

- **ಸಖಿ, ಕರಾವಳಿ ಹೊತ್ತಿ ಉರಿಯುವು ದರ ಹಿಂದಿನ ಗುಟ್ಟೇನು?**
- ❍ ಹೊತ್ತಿ ಉರಿದರೆ ತಾನೇ ಅವರ ಓಟಿನ ಬುತ್ತಿ ತುಂಬುವುದು.

ರೇಶ್ಮಾ ತುಮಕೂರು

- **ಹೆಣ್ಣಿನ ನಾಲಗೆ ಉದ್ದನೋ? ಗಂಡಿನ ನಾಲಗೆಯೋ?**
- ❍ ಶೋಭಕ್ಕ ಮತ್ತು ಅನಂತ್‌ರ ನಡುವೆ ಸ್ಪರ್ಧೆಯಿಡೋಣ ಏನಂತೀರಿ.

ಶಿಹಾಬ್ ಮಂಗಳೂರು

- **ಫೇಸ್‌ಬುಕ್‌ನಲ್ಲಿ ನಕಲಿ ಖಾತೆ ತೆರೆದು ಪ್ರಚೋದನಕಾರಿ ಬರಹದ ಬಗ್ಗೆ ನಿಮ್ಮನಿಸಿಕೆ?**
- ❍ ತಮ್ಮ ಅಸಲಿ ಮುಖವನ್ನು ಪ್ರದರ್ಶಿಸುತ್ತಾರೆ ಅಷ್ಟೇ...

ರಾಗಿಣಿ ಕೋಲಾರ

- **ಚರಂಡಿಯಲ್ಲಿ ಬಿದ್ದ ಕುಡುಕನಿಗೂ, ಕೆಸರಿನಲ್ಲಿ ಮಲಗಿದ್ದ ಕೋಣಕ್ಕೂ ಏನು ವ್ಯತ್ಯಾಸ?**
- ❍ ಕುಡುಕ ನಿಷ್ಪ್ರಯೋಜಕ, ಕೋಣ ಪ್ರಯೋಜನಕಾರಿ.

ಎಂ. ನೇಹಾವರ್ಷಿಣಿ ಬಳ್ಳಾರಿ

- **'ಕನ್ನಡಿ ಏಕೆ ಸುಳ್ಳು ಹೇಳುವುದಿಲ್ಲ?**

- ❍ ಯಾರು ಹೇಳಿದ್ದು ನೀವು ಬಲಕೈ ಎತ್ತಿ ನೋಡಿ ಅದು ಎಡಕೈ ಎತ್ತುತ್ತೆ.

ಇಸ್ಲಾಮ್: ಸಂಶಯ ನಿವಾರಣೆ ಬಯಸುವಿರಾ?

ಇಸ್ಲಾಮ್, ಪವಿತ್ರ ಕುರ್‌ಆನ್, ಪ್ರವಾದಿ ಮುಹಮ್ಮದ್(ಸ), ಜಿಹಾದ್ ಇತ್ಯಾದಿ ವಿಷಯಗಳ ಕುರಿತು ನಿಮ್ಮ ಸಂಶಯಗಳು ಮತ್ತು ಪ್ರಶ್ನೆಗಳಿಗೆ ಸೂಕ್ತ ಪರಿಹಾರ ಬಯಸುವಿರಾ?

ಹಿಂದೂ, ಕ್ರೈಸ್ತ ಮತ್ತಿತರ ದೇಶ ಬಾಂಧವರಿಗೆ ಓದಲು ಉಚಿತವಾಗಿ ಪುಸ್ತಕಗಳನ್ನು ರವಾನಿಸಲಾಗುವುದು.

ಸಂಪರ್ಕಿಸಿರಿ : ISMIKA, P.B. No. 229, Mangalore- 575 001



ಗೊಂದಲದ ಗೂಡಾದ ಇಮಾಮ

ಮೂಲ: ಉಮ್ಮೈರಾ ಅಹ್ಮದ್
ಅನು: ಎಂ. ಅಶ್ರಫ್

ತನ್ನ ಧಾರ್ಮಿಕ ಸಾಹಿತ್ಯ ಮತ್ತು ಪವಿತ್ರ ಗ್ರಂಥಗಳ ಕುರಿತು ತನ್ನ ಮನಸ್ಸಿಗೀಗ ಬೇಸರಿಕೆ ಉಂಟಾಗತೊಡಗಿದೆ ಎಂಬುದು ಇಮಾಮಳಿಗೆ ಅರಿವಾಗಿರಲಿಲ್ಲ. ಮೊದಲಿನಂತಹ ವಿಶ್ವಾಸ ಬಿಡಿ, ಅವುಗಳ ವಿಶ್ವಾಸಾರ್ಹತೆಯ ಬಗ್ಗೆಯೇ ಅವಳಲ್ಲಿ ಸಂಶಯ ಮೂಡತೊಡಗಿತು. ಈಗ ತನ್ನ ಧಾರ್ಮಿಕ ಗ್ರಂಥಗಳನ್ನು ಬಿಟ್ಟು ಇತರ ಗ್ರಂಥಗಳನ್ನು ಓದಲು ಪ್ರಾರಂಭಿಸಿರುವುದನ್ನು ಆಕೆ ಜುವೈರಿಯಳಿಗೂ ತಿಳಿಸಿರಲಿಲ್ಲ. ಅವಳೀಗ ಎಂತಹ ಗ್ರಂಥಗಳನ್ನು ತಂದು ಓದುತ್ತಿದ್ದಾಳೆ ಎಂಬುದು ಅವಳ ಮನೆಯವರಿಗೂ ಗೊತ್ತಾಗಿರಲಿಲ್ಲ. ಅವುಗಳನ್ನು ಇಮಾಮಾ ತನ್ನ ಕೋಣೆಯಲ್ಲಿ ಬಹಳ ಜತನದಿಂದ ಅಡಗಿಸಿಟ್ಟುಕೊಂಡಿದ್ದಳು. ಆದರೆ ಒಂದು ದಿನ ವಸೀಮ್ ಆಕೆಯ ಕೋಣೆಗೆ ಬಂದು ಅವಳ ರ್‍ಯಾಕ್‌ನಿಂದ ಯಾವುದೋ ಪುಸ್ತಕವನ್ನು ಹುಡುಕುತ್ತಿದ್ದನು. ಏಕಾಏಕಿ ಅವನಿಗೆ ಪವಿತ್ರ ಕುರ್‌ಆನಿನ ಎರಡು ತಫ್ಸೀರ್ ಗ್ರಂಥಗಳು ಸಿಕ್ಕವು. ಅದನ್ನು ನೋಡುತ್ತಲೇ ಆತ ಹೌಹಾರಿದನು.

"ಇದೇನಿದು, ಇಮಾಮಾ?" ಆತ ಹೊರಳಿ ಆಶ್ಚರ್ಯದಿಂದ ಕೇಳಿದನು. ಇಮಾಮಾ ತಲೆ ಎತ್ತಿ ಅವನೆಡೆಗೆ ನೋಡಿದಳು. ಅವನ ಕೈಯಲ್ಲಿರುವ ಗ್ರಂಥ ಕಂಡು ಸ್ತಂಭಿಸಿ ಹೋದಳು.

"ಅದೂ... ಅದೂ... ಆಂ... ಪವಿತ್ರ ಕುರ್‌ಆನಿನ ತಫ್ಸೀರ್ ಗ್ರಂಥ..." ಆಕೆ ತನ್ನ

ತೊದಲುತ್ತಿದ್ದ ನಾಲಗೆಯನ್ನು ತಹಬಂದಿಗೆ ತರುತ್ತಾ ಅಂದಳು.

“ನನ್ಗೊತ್ತು. ಆದ್ರೆ ಇದಿಲ್ಲಿ ಏನ್ಮಾಡ್ತಿದೆ? ನೀನಿದನ್ನ ಪರ್ಚೇಸ್ ಮಾಡಿ ತಂದಿದೀಯಾ?” ವಸೀಮ್ ಗಂಭೀರವಾಗಿ ಕೇಳಿದನು.

“ಹ್ಞೂಂ. ನಾನೇ ಇದನ್ನ ಪರ್ಚೇಸ್ ಮಾಡಿ ತಂದಿರೋದು. ಆದ್ರೆ ನೀನೇಕೆ ವರಿ ಮಾಡ್ತಿದೀಯಾ?”

“ಪಪ್ಪಂಗೆ ಗೊತ್ತಾದ್ರೆ ಎಷ್ಟು ಕೋಪಿಸ್ಕೋಬೋದು ಗೊತ್ತಾ ನಿನ್ಗೆ?”

“ಹೌದು. ನನ್ಗೊತ್ತು. ಆದ್ರೆ ಇದ್ರಲ್ಲಿ ನನ್ಗೇನೂ ಆಕ್ಷೇಪಾರ್ಹವಾದದ್ದು ಕಾಣ್ತಿಲ್ಲ.”

“ಇಷ್ಟಕ್ಕೂ ನಿನ್ಗೆ ಈ ಬುಕ್‌ನ ಅಗತ್ಯಾನಾದ್ರೂ ಯಾಕಿತ್ತು?” ವಸೀಮ್ ಗ್ರಂಥವನ್ನು ಅಲ್ಲೇ ಇಡುತ್ತಾ ಕೇಳಿದ.

“ಯಾಕೆಂದ್ರೆ... ಬೇರೆ ಬೇರೆ ಪಂಗಡದೋರು ಪವಿತ್ರ ಕುರ್‌ಆನಿನ ಕುರಿತು ಎಂತೆಂಥ ವ್ಯಾಖ್ಯಾನ ಮಾಡ್ತಾರೆ ಮತ್ತು ನಂ ಬಗ್ಗೆ, ಕುರ್‌ಆನ್ ಉಲ್ಲೇಖಗಳ ಬಗ್ಗೆ ಅವ್ರ ದೃಷ್ಟಿಕೋನ ಏನಿದೆ ಅನ್ನೋದನ್ನ ನನ್ಗೆ ತಿಳೀಬೇಕಿತ್ತು” ಇಮಾಮಾ ಗಂಭೀರವಾಗಿ ಹೇಳಿದಳು.

ವಸೀಮ್ ಕಣ್ಣು ಬಾಯಿ ಬಿಟ್ಟು ಅವಳನ್ನೇ ನೋಡತೊಡಗಿದ.

“ನಿನ್ನ ತಲೆ ಕೆಟ್ಟಿಲ್ಲ ತಾನೇ?”

“ನನ್ತಲೆ ಸರಿಯಾಗೇ ಇದೆ” ಇಮಾಮಾ ಶಾಂತವಾಗಿ ಹೇಳಿದಳು, “ಇತರ ಪಂಗಡದೋರ ಬಗ್ಗೆ ಅರಿಯೋದ್ರಲ್ಲಿ ಮತ್ತು ಅವರ ತಫ್ಸೀರ್‌ಗಳನ್ನ ಓದೋದ್ರಲ್ಲ ತಪ್ಪೇನಿದೆ?”

“ನಮ್ಗೆ ಇದರ ಅಗತ್ಯ ಇಲ್ಲ...” ವಸೀಮ್ ಕೊಂಚ ಕೋಪದಿಂದ ಹೇಳಿದ.

“ನಿನ್ಗೆ ಅಗತ್ಯ ಇಲ್ದಿರ್ಬೋದು. ಆದ್ರೆ ನನ್ಗೆ ಇದೆ.” ಇಮಾಮಾ ಕಡ್ಡಿ ಮುರಿದಂತೆ ಹೇಳಿದಳು. “ನಾನು ಕಣ್ಮುಚ್ಕೊಂಡು ಎಲ್ಲವನ್ನೂ ನಂಬೋ ಹುಡ್ಗಿಯಲ್ಲ” ಆಕೆ ಸ್ಪಷ್ಟವಾಗಿ ಹೇಳಿದಳು.

“ಅಂದ್ರೆ ಈ ತಫ್ಸೀರ್ ಓದೋದ್ರಿಂದ ನಿನ್ನ ಸಂಶಯಗಳು ದೂರವಾಗ್ಬೋದಾ?” ವಸೀಮ್ ವ್ಯಂಗ್ಯವಾಗಿ ಕೇಳಿದನು.

ಇಮಾಮಾ ತಲೆ ಎತ್ತಿದಳು, “ಮೊದ್ಲು

ಕಳೆದ ಸಂಚಿಕೆಯಲ್ಲಿ...

ಇಮಾಮಳ ಚಿಂತೆಗೆ ಕಾರಣ ವೇನೆಂದು ಅರಿಯಲು ವಸೀಮ್ ಪ್ರಯತ್ನಿಸುತ್ತಾನೆ. ಆದರೆ ಅವಳು ಸಮಯ ಬಂದಾಗ ಖಂಡಿತ ಹೇಳ್ತೀನಿ ಅಂದು ಬಿಡುತ್ತಾಳೆ. ಜುವೈರಿಯಳೊಂದಿಗೆ ನಡೆದ ಜಗಳದಿಂದಾಗಿ ಇಮಾಮಾ ಚಿಂತೆಗೀಡಾಗಿದ್ದಳು. ಜುವೈರಿಯ ತನ್ನನ್ನು ಮುಸ್ಲಿಮಳೆಂದು ಯಾಕೆ ಭಾವಿಸುವುದಿಲ್ಲ ಎಂಬುದನ್ನು ಅರಿಯಲು ಇಮಾಮಾ ದೇಶದ ದೊಡ್ಡ ದೊಡ್ಡ ವಿದ್ವಾಂಸರ ಕುರ್‌ಆನ್ ತಫ್ಸೀರ್ ಗಳನ್ನು ತಂದು ಓದತೊಡಗಿದಳು. ಹೀಗೆ ತನ್ನ ಪಂಗಡದ ಹುಳುಕುಗಳೆಲ್ಲವೂ ಅವಳ ಮುಂದೆ ಅನಾವರಣಗೊಳ್ಳತೊಡಗಿದುವು.

ಮುಂದಕ್ಕೆ ಓದಿ...

ನಮ್ಮ ನಂಬಿಕೆಯ ಬಗ್ಗೆ ಸಂಶಯವಿರ್ಲಿಲ್ಲ. ಆದ್ರೆ ಈಗಿದೆ...”

ಆಕೆಯ ಮಾತಿಗೆ ವಸೀಮ್ ರೇಗಿದ. “ನೋಡಿದ್ಯಾ? ಇಂಥ ಪುಸ್ತಕಗಳನ್ನು ಓದೋದ್ರಿಂದ ಹಿಂಗೇನೇ ಆಗೋದು. ಅದಿಕ್ಕೇ ಇಂಥ ಪುಸ್ತಕಗಳನ್ನ ಓದೋ ಅಗತ್ಯ ಇಲ್ಲಾಂತ ಹೇಳ್ತಿರೋದು ನಾನು. ನಮ್ಮ ಮಟ್ಟಿಗೆ ನಮ್ಮ ಪುಸ್ತಕಗಳೇ ಸಾಕು.”

“ನಾನು ಇಷ್ಟೆಲ್ಲ ತಫ್ಸೀರ್‌ಗಳನ್ನು ಓದಿದೀನಿ. ಪವಿತ್ರ ಕುರ್‌ಆನಿನ ಅದೆಷ್ಟೋ ಅನುವಾದ ಗ್ರಂಥಗಳನ್ನು ಓದಿದೀನಿ. ಆದ್ರೆ ವಂಡರ್ ಏನ್ಗೊತ್ತಾ ವಸೀಮ್? ಎಲ್ಲೂ ನಮ್ಮ ಪ್ರವಾದಿಯ ಬಗ್ಗೆ ಪ್ರಸ್ತಾಪಾನೇ ಇಲ್ಲಾಂತೀನಿ! ಪ್ರತಿಯೊಂದು ತಫ್ಸೀರ್‌ನಲ್ಲೂ ಅಹ್ಮದ್ ಅಂದ್ರೆ ಮುಹಮ್ಮದ್(ಸ) ಅಂತನೇ ಅರ್ಥ ನೀಡಲಾಗಿದೆಯೇ ಹೊರತು ನಮ್ಮ ಪ್ರವಾದಿ ಎಂದಲ್ಲ. ಇನ್ನು ನಮ್ಮ ಪ್ರವಾದಿಯ ಪ್ರಸ್ತಾಪ ಬಂದಿದ್ದರೂ ಅದೊಂದು ಸುಳ್ಳು ಪ್ರವಾದಿತ್ವದ ಘೋಷಣೆ ಎಂದು ಹೇಳಲಾಗಿದೆಯೇ ಹೊರತು ಬೇರೇನಿಲ್ಲ” ಇಮಾಮಾ ಗೊಂದಲದ ಗೂಡಾದಳು.

“ಈ ಜನ ನಮ್ ಬಗ್ಗೆ ಹಿಂಗೆ ಬರೀದಿದ್ರೆ ಮತ್ತ್ಯಾರು ಬರೀತಾರೆ? ಅವ್ರು ನಮ್ಮ ಪ್ರವಾದೀನ ಒಪ್ಕೊಂಡ್ರೆ ಮತ್ತೆ ಭಿನ್ನಾಭಿಪ್ರಾಯ ಎಲ್ಲಿ ಉಳೀತದೆ? ಇವ್ರು ಯಾವತ್ತಿಗೂ ತಮ್ಮ ತಫ್ಸೀರ್‌ಗಳಲ್ಲಿ ಸತ್ಯ ಬರಿಯಲ್ಲ...” ವಸೀಮ್ ಕೊಂಚ ಖಾರವಾಗಿಯೇ ಹೇಳಿದ.

“ಮತ್ತೆ ನಮ್ಮ ತಫ್ಸೀರ್‌ಗಳಿವೆಯಲ್ಲ. ಅದ್ರಲ್ಲಿ ನಾವು ಸತ್ಯ ಬರ್ದಿದೀವಾ?”

“ಅಂದ್ರೆ?” ವಸೀಮ್ ಆಶ್ಚರ್ಯಕ್ಕೀಡಾದ.

“ನಮ್ಮ ಪ್ರವಾದಿ ಇತರ ಪ್ರವಾದಿಗಳ ಬಗ್ಗೆ ಕೆಟ್ಟ ಪದಗಳನ್ನು ಯಾಕೆ ಬಳಸ್ತಾರೆ?”

“ಅವ್ರು... ತಮ್ಮ ಮೇಲೆ ವಿಶ್ವಾಸವಿರಿಸದ ಜನರ ಬಗ್ಗೆ ತಮ್ಮ ಅಭಿಪ್ರಾಯವನ್ನು ತಿಳಿಸ್ತಾರಷ್ಟೇ.”

“ಯಾರು ವಿಶ್ವಾಸವಿರಿಸಿಲ್ವೋ ಅವ್ರನ್ನು ಬೈಯಬೇಕೇನು?”

“ಹೌದು. ಕೋಪವು ಯಾವುದಾದ್ರೊಂದು ರೂಪದಲ್ಲಿ ವ್ಯಕ್ತವಾಗ್ತದೆ ತಾನೇ?” ವಸೀಮ್ ಭುಜ ಕುಣಿಸುತ್ತಾ ಅಂದ.

“ಕೋಪನೋ ಹತಾಶೆಯೋ?” ಇಮಾಮಳ ಪ್ರಶ್ನೆಗೆ ವಸೀಮ್ ಗರ ಬಡಿದಂತಾಗಿ ಅವಳನ್ನೇ ನೋಡತೊಡಗಿದ.

“ಪ್ರವಾದಿ ಈಸಾ(ಅ)ರ ಮೇಲೆ ಜನರು ವಿಶ್ವಾಸವಿರಿಸದ ಕಾರಣಕ್ಕೆ ಅವರು ಜನರನ್ನು ಬೈಯಲಿಲ್ಲ. ಪ್ರವಾದಿ

PRESTIGE Engineering Industries LLC

Prestige

ISO 9001:2008 Certification ISO 14001:2004 Certification
OHSAS 18001:2007 Certification

Design, Drawing, Supply, Fabrication, Blasting and Painting of Pressure Vessels/Static Equipments, Shop Built Storage Tanks, all types of Piping, Pipe Supports, Ducts, Power Plant Exhaust & Inlet System, Air Filltration System, Silos, Stacks and all types of Structural's with Painting or Galvanizing.

☎ +971-2-4124757 / 700, Fax: +971-2-4124777 / 778
P.O. Box 13180 Abu Dhabi, United Arab Emirates
E-Mail: nafoosen@emirates.net.ae presteng@emirates.net.ae
Website: www.prestigeuae.com ICAD III, Plot No. 42 NR 32

PRESTIGE Steel Construction Co. LLC

Laser Jet, Water Jet, Sheet Perforation, Sheet Engraving & CNC Machining

☎ +971-2-5544975 / 77, Fax: +971-2-5547380
P.O. Box 9468 Abu Dhabi, United Arab Emirates, M-11 Mussafah

PREMIER INTERIORS
Interior Architects – Design & Build

Phone: +971 4 4204718, Fax: +971 4 4214758
P.O.Box 37289, Dubai – U.A.E.
E-mail: info@premier-interiors.org , www.premier-interiors.org

Associate Company

U-LOC

UNILOC FASTENERS

ISO 9001 : 2008

Manufacturers & Exporters of Fasteners, High Tensile & Stainless Steel - Standard & Specials

☎ +91-250-2480082 / 2480106, +91-9326699287, Fax: +91-250-2481556, Mobile: +91-9892108201
9, Godavari, Tungareshwar Industrial Complex No. 1, Village Sativali, Vasai (East), Dist. Thane-401208 Mumbai - India
E-Mail: uniloc9@gmail.com / unilocindia@yahoo.com Website: www.unilocindia.net

ಮುಹಮ್ಮದ್(ಸ)ರವರು ತಮ್ಮ ಮೇಲೆ ವಿಶ್ವಾಸವಿರಿಸದವರನ್ನು ಬೈಯಲಿಲ್ಲ. ಮುಹಮ್ಮದ್(ಸ)ರಾದರೋ ತಮಗೆ ಕಲ್ಲೆಸೆದವರ ಒಳಿತಿಗಾಗಿ ಪ್ರಾರ್ಥಿಸಿದ್ದರು. ಪವಿತ್ರ ಕುರ್‌ಆನಿನ ರೂಪದಲ್ಲಿ ಪ್ರವಾದಿ ಮುಹಮ್ಮದ್(ಸ)ರಿಗೆ ಅವತೀರ್ಣವಾಗಿರುವ ದೇವವಾಣಿಯಲ್ಲಿಯೂ ಬೈಗುಳ ಕಾಣಿಸಲ್ಲ. ಆದ್ರೆ ನಮ್ಮ ಪ್ರವಾದಿಗೆ ಅವತೀರ್ಣಗೊಂಡ ಗ್ರಂಥ ಎನ್ನಲಾಗುವ ಸಂಗ್ರಹದಲ್ಲಿ ಬೈಗುಳಗಳೇ ತುಂಬ್ಕೊಂಡಿವೆ."

"ಇಮಾಮಾ! ಪ್ರತಿಯೋರ್ವ ವ್ಯಕ್ತಿಯ ಸ್ವಭಾವ ಭಿನ್ನವಾಗಿರುತ್ತೆ. ಪ್ರತಿಯೊಬ್ಬನೂ ಬೇರೆ ಬೇರೆ ರೀತೀಲಿ ಪ್ರತಿಕ್ರಿಯಿಸ್ತಾನೆ." ವಸೀಮ್ ತಕ್ಷಣ ಹೇಳಿದ. ಇಮಾಮಾ ನಕಾರಾತ್ಮಕವಾಗಿ ತಲೆ ಅಲ್ಲಾಡಿಸಿದಳು,

"ನಾನು ಪ್ರತಿಯೋರ್ವ ವ್ಯಕ್ತಿಯ ಬಗ್ಗೆ ಹೇಳ್ತಿಲ್ಲ. ನಾನು ಪ್ರವಾದಿಯ ಬಗ್ಗೆ ಮಾತಾಡ್ತಿದೀನಿ. ತನ್ನ ಕೋಪವನ್ನೇ ನಿಯಂತ್ರಿಸಲಾಗದ ವ್ಯಕ್ತಿ ಪ್ರವಾದಿತ್ವವನ್ನು ಹೇಗೆ ಪ್ರತಿಪಾದಿಸ್ತಾನೆ? ಯಾರ ಬಾಯಿಯಿಂದ ಬೈಗುಳವೇ ಹೊರಡ್ತಿದೆಯೋ ಅವನ ಬಾಯಿಂದ ಸತ್ಯದ ಮಾತು ಹೊರಡಲು ಸಾಧ್ಯವೇ?" ವಸೀಮ್, ನನಗೆ ನಮ್ಮ ಧರ್ಮದ ಬಗ್ಗೆಯೇ ಸಂಶಯವಾಗ್ತಿದೆ.

ಕ್ಷಣಕಾಲ ಮೌನ ವಹಿಸಿದ ಮೇಲೆ ಇಮಾಮಾ ಮತ್ತೆ ಹೇಳಿದಳು, "ನಾನು ಇಷ್ಟೆಲ್ಲ ತಫ್ಸೀರ್‌ಗಳಲ್ಲಿ ಓದಿರುವಂತೆ ಆ ಉಮ್ಮತಿ ನಬಿ ಪ್ರವಾದಿ ಈಸಾ(ಅ) ಆಗಿದ್ದಾರೆ ಎಂದೇ ಅರ್ಥವಾಗುತ್ತದೆ. ನಮ್ಮ ಈ ನಬಿ ಈಸಾ(ಅ) ಅಥವಾ ಮಸೀಹ್ ಆಗಿರಲು ಸಾಧ್ಯವೇ ಇಲ್ಲ."

"ಇಲ್ಲ... ಯಾರು ಮರಳಿ ಬರುವರೆಂದು ಪವಿತ್ರ ಕುರ್‌ಆನಿನಲ್ಲಿ ಹೇಳಲಾಗಿದೆಯೋ ಅದು ಇವರಲ್ಲ." ಈ ಬಾರಿ ಆಕೆ ತನ್ನ ಮಾತನ್ನು ಸ್ವಯಂ ಒತ್ತು ಕೊಟ್ಟು ಹೇಳಿದಳು.

"ಸಾಕು ಸುಮ್ನಿರು... ವಸೀಮ್‌ನ ಕೋಪ ನೆತ್ತಿಗೇರಿತು, ಅತಿಯಾಯ್ತು ನಿನ್ದು... ಸ್ಟಾಪ್ ಟಾಕಿಂಗ್ ರಬ್ಬಿಶ್!"

"ರಬ್ಬಿಶ್!?" ಇಮಾಮಾ ನಂಬಲಾಗದಂತೆ ಅವನನ್ನೇ ನೋಡಿದಳು, "ನಾನು ನಿರರ್ಥಕ ಮಾತನ್ನಾಡ್ತಿದ್ದೀನಂತ ನೀನು ಹೇಳ್ತಿದೀಯಾ! ನೋಡು, ಮಸ್ಜಿದುಲ್ ಅಕ್ಸಾದ ಬಗ್ಗೆ ಮುಸ್ಲಿಮರಷ್ಟೇ ಅಲ್ಲ, ಯಹೂದಿಗಳೂ ಕ್ರೈಸ್ತರೂ ಮಾತ್ರವಲ್ಲ, ಇಡೀ ಜಗತ್ತೇ ಅದನ್ನು ಮುಸ್ಲಿಮರ ಪ್ರಥಮ ಕಿಬ್ಲಾ ಎಂದು ನಂಬ್ತಾರೆ. ಆದ್ರೆ ನಾವು ಮಾತ್ರ ಅದನ್ನು ಒಪ್ತಿಲ್ಲ. ಸ್ಟ್ರೇಂಜ್ ಅಲ್ವಾ!"

"ಇಮಾಮಾ! ಈ ವಿಷ್ಯದಲ್ಲಿ ನಿನ್ಜತೆ ತರ್ಕಸೋಕೆ ನನ್ಗೆ ಇಷ್ಟವಿಲ್ಲ. ಇದನ್ನ ಪಪ್ಪಂಜತೆ ಡಿಸ್ಕಸ್ ಮಾಡೋದೊಳ್ಳೇದು."

ವಸೀಮ್ ಬೇಸತ್ತು ಹೇಳಿದ, "ಅಂದಹಾಗೆ, ಇಂಥ ನಿರರ್ಥಕ ಚರ್ಚೆ ಮಾಡ್ಕೊಂಡು, ನೀನು ತಪ್ಪೆಸಗ್ತಿದೀಯಾ. ಇದನ್ನೆಲ್ಲ ಪಪ್ಪಂಗೆ ಹೇಳ್ತೀನಿ, ಮತ್ತೆ ನೀನು ಎಂಥ ಪುಸ್ತಕಗಳನ್ನ ಓದ್ತಿದೀಯಾ ಅನ್ನೋದನ್ನೂ ಹೇಳ್ತೀನಿ." ವಸೀಮ್ ಅವಳನ್ನು ಎಚ್ಚರಿಸುವ ಧಾಟಿಯಲ್ಲಿ ಹೇಳುತ್ತಾ ಕೋಣೆಯಿಂದ ಹೊರ ನಡೆದ. ಇಮಾಮಾ ಏನನ್ನೋ ಆಲೋಚಿಸುತ್ತಾ ಗೊಂದಲಗೊಂಡು ನಾಲಗೆ ಕಚ್ಚಿದಳು. ಬಳಿಕ ಆಕೆ ಕೋಣೆಯಲ್ಲಿ ಶತಪಥ ಹಾಕತೊಡಗಿದಳು. ಅವಳು ತನ್ನ ತಂದೆಗೆ ಬಹಳ ಭಯಪಡುತ್ತಿದ್ದಳು ಮತ್ತು ವಸೀಮ್ ಎಲ್ಲ ವಿಷಯಗಳನ್ನೂ ಹೇಳುವನೆಂದೂ ಅವಳಿಗೆ ಖಾತರಿಯಿತ್ತು. ಆಕೆ ತಂದೆಯ ಪ್ರತಿಕ್ರಿಯೆ ನೆನೆದೇ ಬೆವತು ಹೋದಳು.

❖ ❖ ❖

ವಸೀಮ್ ಎಚ್ಚರಿಸಿದಂತೆಯೇ, ಇಮಾಮಳೊಂದಿಗೆ ನಡೆದ ಚರ್ಚೆಯ ಕುರಿತು ಹಾಶಿಮ್ ಮುಬೀನ್‌ರಿಗೆ ತಿಳಿಸಿದ. ಆದರೆ ಹಲವು ಮಾತುಗಳನ್ನು ಸೆನ್ಸಾರ್ ಮಾಡಿದ್ದ. ಏಕೆಂದರೆ ಅದನ್ನು ಕೇಳಿದರೆ ಅಪ್ಪನ ಕೋಪ ನೆತ್ತಿಗೇರಬಹುದು ಎಂದು ಅವನು ಭಯಪಟ್ಟಿದ್ದ. ಆದರೂ ಅವನ ಮಾತು ಕೇಳಿ ಹಾಶಿಮ್ ಮುಬೀನ್ ಗರಬಡಿದಂತಾಗಿ ಬಿಟ್ಟರು. ಹಾವು ತುಳಿದಂತೆ ಬೆಚ್ಚಿಬಿದ್ದರು.

ಮಧುಮೇಹ

ಬೇಡ ಸಿಹಿಯ ಮೋಹ
ತಡೆಯದಂತೆ ದಾಹ
ಹರಿಸು ಬೆವರ
ದುಡಿದು ನಡೆದು
ಬರದೆ ಇರಲು ಮೇಹ.

ಬೆಳೆಸ ಬೇಡ ಬೊಜ್ಜು ದೇಹ
ದಲ್ಲಿ ಹೆಚ್ಚುವಂತೆ ಕೊಬ್ಬು
ರಕ್ತಛಾಪ ದೊಡನೆ ರಕ್ತ
ನಾಳ ಕೊಡದು ತೊಂದರೆ.
ಸೋಮಾರಿಯಾಗಿ ಇರಲು ಸ್ನೇಹ
ಹೆಚ್ಚಿ ಮೇಹವನ್ನು ಸೇರಿ
ಹೃದಯ ಬಡಿತ ನಿಂತು ಹೋಗಿ
ಬಾಳು ನಿಂತು ಬಿಡುವುದು.

ತಿನ್ನು ನೀ ಹದವರಿತು
ಸಮತೂಕದಾಹಾರ
ಕೊಬ್ಬು ಸಕ್ಕರೆ ಹೆಚ್ಚು ಇರದ ಹಾಗೆ.
ಮತಿಗೆಟ್ಟು ನಾಲಗೆಯ ಚಾಪಲ್ಯಕ್ಕೆ
ಬಲಿಯಾಗದಿರು ಸುಖದಲಿರೆ
ಧೀರತಮ್ಮ.

ಡಾ। ಸುರೇಶ ನೆಗಳಗುಳಿ

"ಇದನ್ನೆಲ್ಲ ಇಮಾಮಾ ನಿನ್ಜೊತೆ ಹೇಳಿದ್ಲಾ?" ಒಂದು ದೀರ್ಘ ಮೌನದ ಬಳಿಕ ಅವರು ವಸೀಮ್‌ನೊಡನೆ ಕೇಳಿದರು. ಆತ ಹೌದೆಂದು ಗೋಣಾಡಿಸಿದ.

"ಅವಳನ್ನು ಬರೋಕೆ ಹೇಳು..." ವಸೀಮ್ ಕೊಂಚ ಅಳುಕುತ್ತಲೇ ಅವರ ಕೋಣೆಯಿಂದ ಹೊರ ಹೋದ. ಇಮಾಮಳನ್ನು ಸ್ವಯಂ ಕರೆತರುವ ಬದಲು, ಸೇವಕನೊಡನೆ ಹೇಳಿ ಕಳುಹಿಸಿ, ಸ್ವತಃ ತನ್ನ ಕೋಣೆಗೆ ಹೋಗಿಬಿಟ್ಟ. ಇಮಾಮಾ ಮತ್ತು ಹಾಶಿಮ್ ಮುಬೀನ್‌ರ ನಡುವಿನ ಮಾತುಕತೆಯ ವೇಳೆ ಅಲ್ಲಿರಲು ಅವನು ಇಷ್ಟಪಡಲಿಲ್ಲ.

ಇಮಾಮಾ ತಂದೆಯ ಕೋಣೆಯ ಬಾಗಿಲು ತಟ್ಟಿ ಒಳಗೆ ಪ್ರವೇಶಿಸಿದಾಗ, ಹಾಶಿಮ್ ಮತ್ತವರ ಪತ್ನಿ ಮೌನ

ವಾಗಿ ಕೂತಿದ್ದರು. ಹಾಶಿಮ್‌ರವರು ಇಮಾಮಳೆಡೆಗೆ ನೋಡಿದ ನೋಟದಿಂದಲೇ ಅವಳ ಭಯವು ಇಮ್ಮಡಿಸಿತು.

"ಪಪ್ಪಾ... ನನ್ನನ್ನು... ಕರೆದ್ರಾ..?" ಎಷ್ಟೇ ಪ್ರಯತ್ನಿಸಿದರೂ ಅವಳಿಂದ ಸರಿಯಾಗಿ ಉಚ್ಚರಿಸಲಾಗಲಿಲ್ಲ.

"ಹೌದು. ನಾನೇ ಕರ್ದಿರೋದು. ವಸೀಮ್ ಜತೆ ಏನು ಬೊಗಳಿದೆ ನೀನು?" ಹಾಶಿಮ್ ಮುಬೀನ್ ಪೀಠಿಕೆ ಯಿಲ್ಲದೆ ನೇರವಾಗಿ ಕೇಳಿದರು. ಆಕೆ ತನ್ನ ಒಣಗಿದ ತುಟಿಗಳಿಗೆ ನಾಲಗೆ ಸವರಲಷ್ಟೇ ಶಕ್ತಳಾಗಿದ್ದಳು. "ಏನು? ಬಾಯಿಗೆ ಬೀಗ ಜಡಿದಿದ್ದೀಯಾ?" ಅವರು ಮತ್ತೊಮ್ಮೆ ಗರ್ಜಿಸಿದರು. "ನಾಚಿಕೆಯಾಗ್ಬೇಕು ನಿನ್ಗೆ! ನೀನೂ ಪಾಪವೆಸಗ್ತೀಯಾ ಮತ್ತೆ ನಮ್ಮನ್ನೂ ಪಾಪಿಗಳನ್ನಾಗಿ ಮಾಡ್ತಿದೀಯಾ..."

ಇಮಾಮಳ ಕಣ್ಣುಗಳು ಮಂಜಾದುವು.

"ನಿನ್ನನ್ನು ನನ್ನ ಮಗಳೆಂದು ಹೇಳೋಕೇನೇ ನಾಚ್ಕೆಯಾಗ್ತಿದೆ. ಯಾವ ಪುಸ್ತಕಗಳನ್ನು ತಂದಿದೀಯಾ?" ಅವರು ಇನ್ನಷ್ಟು ರೌದ್ರಾವತಾರ ತಾಳಿದರು. "ಎಲ್ಲಿಂದ ತಂದಿದೀಯೋ, ನಾಳೆ ಅಲ್ಲಿಗೇ ಮರಳಿಸಿ ಬಿಡ್ಬೇಕು. ಇಲ್ದಿದ್ರೆ ನಾನೇ ಅದನ್ನ ಎಸೆದು ಬಿಡ್ತೀನಿ."

ಇಮಾಮಾ ತನ್ನ ಕಣ್ಣೀರೊರೆಸುತ್ತಾ, "ಆಯ್ತು ಪಪ್ಪಾ..." ಎಂದಷ್ಟೇ ಹೇಳಿದಳು.

"ಇನ್ನು ಮುಂದೆ ನೀನು ಜುವೈರಿಯಳೊಂದಿಗೆ ಸೇರಿದ್ರೆ, ನಿನ್ನ ಕಾಲೇಜ್‌ಗೆ ಹೋಗೋದನ್ನೇ ಬಂದ್ ಮಾಡಿಬಿಡ್ತೀನಿ."

"ಪಪ್ಪಾ... ಜುವೈರಿಯಾ ನನ್ನೊಡನೆ ಏನೂ ಹೇಳಿಲ್ಲ. ಅವ್ಳಿಗೇನೂ ಗೊತ್ತಿಲ್ಲ." ಈ ಬಾರಿ ಇಮಾಮಾ ಕೊಂಚ ಧೈರ್ಯ ವಹಿಸಿ ಹೇಳಿದಳು.

"ಹಂಗಿದ್ರೆ ಮತ್ಯಾರು ನಿನ್ತಲೇಲಿ ಇಂಥ ಕೆಟ್ಟ ಮಾತನ್ನು ತುಂಬಿಸ್ತಿದ್ದಾರೆ?" ಅವರು ಗಂಟಲು ಬಿರಿಯುವಂತೆ ಗದರಿದರು.

"ನಾ... ನಾನು... ಸ್ವತಃ..." ಇಮಾಮಾ ಹೇಳಲು ಪ್ರಯತ್ನಿಸಿ ಸೋತಳು.

"ನಿನ್ನ ಯೋಗ್ಯತೆಯೇನು? ನಿನ್ನ ಪ್ರಾಯವೇನು? ವಿಶ್ವಾಸವನ್ನು ಪರೀಕ್ಷಿಸಲು ಹೊರಟಿದ್ದಾಳೆ ಇವ್ಳು! ನಮ್ಮ ಪ್ರವಾದಿಯ ಪ್ರವಾದಿತ್ವವನ್ನೇ ಪ್ರಶ್ನಿಸ್ತಿದೀಯಲ್ಲ! ಎಷ್ಟು ಪೊಗರು ನಿನ್ಗೆ?" ಹಾಶಿಮ್ ಮುಬೀನ್‌ರ ಧ್ವನಿಯು ಇನ್ನಷ್ಟು ಏರಿತು. "ಜೀವನವಿಡೀ ಧರ್ಮ ಪ್ರಚಾರದಲ್ಲಿ ತೊಡಗಿಸಿ ಕೊಂಡಿರೋ ಈ ನಿನ್ನ ಅಪ್ಪನ ಮುಖನಾದ್ರೂ ನೋಡು. ನಾನೇನು ಮೂರ್ಖನಾ ಅಲ್ಲಾ ನನ್ಗಿಂತ ಹೆಚ್ಚು ಬುದ್ಧಿ ನಿನ್ಗೆ ಬಂತಾ? ನೀನು ಹುಟ್ಟಿ ನಾಲ್ಕು ದಿನ ಆಗ್ಲಿಲ್ಲ, ನಮ್ಮ ಪ್ರವಾದಿಯ ಪ್ರವಾದಿತ್ವವನ್ನೇ ಪ್ರಶ್ನಿಸಲು ಹೊರಟಿದ್ದೀಯಲ್ಲ..." ಎನ್ನುತ್ತಾ ಹಾಶಿಮ್ ಮುಬೀನ್ ಎದ್ದು ನಿಂತರು,

"ಈ ಪ್ರವಾದಿಯ ಕಾರಣದಿಂದ್ಲೇ ನೀನು ಚಿನ್ನದ ಚಮಚ ಬಾಯಲ್ಲಿಟ್ಟು ಹುಟ್ಟಿರೋದು. ಅವರ ಪ್ರವಾದಿತ್ವವನ್ನೇ ನೀನು ಪ್ರಶ್ನಿಸ್ತೀಯಲ್ಲ! ಅವರಿಲ್ದೇ ಹೋಗ್ತಿದ್ರೆ, ನಮ್ಮ ಇಡೀ ಕುಟುಂಬವೇ ಬೀದಿಗೆ ಬರ್ತಿತ್ತು. ಆದ್ರೆ ನೀನು ನಾಚಿಕೆ ಮಾನ ಮರ್ಯಾದೆ ಬಿಟ್ಟು ಉಂಡ ಮನೆಗೇ ದ್ರೋಹ ಬಗೀತಿದೀಯಲ್ಲ!"

ಹಾಶಿಮ್ ಮುಬೀನ್‌ರ ಧ್ವನಿಯು ತಾರಕಕ್ಕೇರುತ್ತಿತ್ತು. ಇಮಾಮಾ ಕಣ್ಣೀರ ಕೋಡಿಯಾದಳು.

"ಇನ್ನು ಸಾಕು ನಿನ್ನ ಓದು ಬರೆಹ. ಮನೆಯಲ್ಲೇ ಇದ್ದು ಬಿಡು. ನಿನ್ನ ಈ ವಿದ್ಯಾಭ್ಯಾಸವೇ ನಿನ್ನನ್ನು ದಾರಿಗೆಡಿಸ್ತಿದೆ..."

ಅವರ ಮುಂದಿನ ವಾಕ್ಯವಂತೂ ಇಮಾಮಳನ್ನು ಸಂಪೂರ್ಣ ಉಡುಗಿಸಿ ಬಿಟ್ಟಿತು. ಅಪ್ಪ ತನ್ನ ವಿದ್ಯಾಭ್ಯಾಸವನ್ನೇ ಮೊಟಕುಗೊಳಿಸುವರೆಂದು ಅವಳು ಕನಸು ಮನಸಿನಲ್ಲೂ ಎಣಿಸಿರಲಿಲ್ಲ.

"ಪಪ್ಪಾ... I am sorry..." ಅವರ ಈ ಒಂದು ವಾಕ್ಯವೇ ಅವಳನ್ನು ಮಂಡಿಯೂರುವಂತೆ ಮಾಡಿತ್ತು.

"ನನ್ಗೆ ನಿನ್ನ ಯಾವುದೇ excuseನ ಅಗತ್ಯವಿಲ್ಲ. ಮನೇಲೇ ಇರು. ಕೇಳಿಸ್ಕೊಂಡಿಯಲ್ಲ..."

"ಪಪ್ಪಾ... ನಾ... ನಾನು ಹಂಗೇನೂ ಅಂದಿಲ್ಲ. ವಸೀಮ್... ನಿಮ್ಮೊಡನೆ ಏನು ಹೇಳಿದನೋ ಗೊತ್ತಿಲ್ಲ..." ಅವಳ ಕಣ್ಣುಗಳಿಂದ ಧಾರಾಕಾರವಾಗಿ ಕಂಬನಿ ಹರಿಯುತ್ತಿತ್ತು. "ಆದ್ರೂ ನಾನು ಇನ್ನು ಮುಂದೆ ಹಿಂಗೇನೂ ಮಾಡಲ್ಲ ಅಂತ ಪ್ರಾಮಿಸ್ ಮಾಡ್ತೀನಿ. ಇಂಥದ್ದೇನೂ ಓದಲ್ಲ... ಪ್ಲೀಸ್ ಪಪ್ಪಾ..." ಆಕೆ ಗೋಗರೆಯತೊಡಗಿದಳು.

ಈ ಕ್ಷಮಾಯಾಚನೆಯು ಅಲ್ಲಿಗೇ ಕೊನೆಗೊಂಡಿರಲಿಲ್ಲ. ಮುಂದಿನ ಹಲವು ದಿನಗಳ ವರೆಗೆ ಅವಳು ಹಾಶಿಮ್‌ರೊಡನೆ ಕ್ಷಮೆ ಕೇಳುತ್ತಲೇ ಇದ್ದಳು. ಬಳಿಕ ಸುಮಾರು ಒಂದು ವಾರ ಕಳೆದ ಮೇಲೆ ಅವರು ಕೊಂಚ ಮೆತ್ತಗಾದರು. ಅವಳಿಗೆ ಕಾಲೇಜಿಗೆ ಹೋಗಲು ಅನುಮತಿ ನೀಡಿದರು. ಆದರೆ ಆ ಒಂದು ವಾರದಲ್ಲಿ ಇಮಾಮಾ ತನ್ನ ಮನೆಯಲ್ಲಿ ಸಂಪೂರ್ಣವಾಗಿ ಮೂದಲಿಕೆಗೆ ಒಳಗಾಗಿದ್ದಳು. ಹಾಶಿಮ್ ಮುಬೀನ್‌ರವರು ಮಗಳಿಗೆ ಉಗ್ರವಾಗಿ ಎಚ್ಚರಿಸುತ್ತಾ ಕಾಲೇಜಿಗೆ ಹೋಗಲು ಅನುಮತಿ ನೀಡಿದ್ದರು. ಆದರೆ ಆ ಒಂದು ವಾರದ ಅವಧಿಯಲ್ಲಿ ತನ್ನ ಮನೆಯವರ ವರ್ತನೆಯು ಇಮಾಮಳಲ್ಲಿ ತನ್ನ ಧರ್ಮದ ಮೇಲೆ ದ್ವೇಷವನ್ನಷ್ಟೇ ಹೆಚ್ಚಿಸಿಬಿಟ್ಟಿತ್ತು. ಆಕೆ ಆ ತಫ್ಸೀರ್‌ಗಳ ಅಧ್ಯಯನವನ್ನು ನಿಲ್ಲಿಸಲಿಲ್ಲ. ವ್ಯತ್ಯಾಸವಿಷ್ಟೇ... ಮೊದಲು ಅವುಗಳನ್ನು ಮನೆಗೆ ತರುತ್ತಿದ್ದಳು, ಈಗ ಕಾಲೇಜಿನ ಲೈಬ್ರೇರಿಯಲ್ಲಿಯೇ ಓದತೊಡಗಿದಳು.

ಪಿಯುಸಿಯಲ್ಲಿ ರ್‍ಯಾಂಕ್ ಪಡೆದ ಬಳಿಕ ಇಮಾಮಾ ಮೆಡಿಕಲ್ ಕಾಲೇಜಿನಲ್ಲಿ ದಾಖಲಾತಿ ಪಡೆದು ಕೊಂಡಳು. ಜುವೈರಿಯಳಿಗೂ ಅದೇ ಮೆಡಿಕಲ್ ಕಾಲೇಜಿನಲ್ಲಿ ದಾಖಲಾತಿ ದೊರೆತಿತ್ತು. ಅವರ ಸಖ್ಯವೀಗ ಇನ್ನಷ್ಟು ಬಲ ಪಡೆದುಕೊಂಡಿತ್ತು. ಅದಕ್ಕೆ ಮೂಲ ಕಾರಣ ಇಮಾಮಳಲ್ಲಿ ಆಗಿರುವ ಬದಲಾವಣೆಯಾಗಿತ್ತು.

■

ಈಗಲೂ ಸಮಯ ಮೀರಿಲ್ಲ

ಥ್ಯಾಲೆಂಡ್‌ನ 91ರ ಹರೆಯದ ಕಿಂಲಾನ್ ಜಿನಾಕುಲ್ ಎಂಬ ಅಜ್ಜಿ ತನ್ನನ್ನು ಭೇಟಿಯಾಗುವವರೊಡನೆ 'ಇನ್ನೂ ಸಮಯ ಮೀರಿಲ್ಲ' ಎಂದು ಹೇಳುತ್ತಿದ್ದಾರೆ. 91ರ ಹರೆಯದಲ್ಲಿ ವಿಶ್ವವಿದ್ಯಾನಿಲಯದಿಂದ ಆಕೆ ಬಿರುದನ್ನು ಪಡೆದಿದ್ದಾರೆ. ಆ ಅಜ್ಜಿಯ ಛಲ ಎಲ್ಲರಿಗೂ ಮಾದರಿಯಾಗಿದೆ.

ಮೊಮ್ಮಕ್ಕಳೊಂದಿಗೆ ಕಥೆ ಹೇಳುತ್ತಾ ಮನೆಯಲ್ಲಿರಬೇಕಾಗಿದ್ದ ಪ್ರಾಯದಲ್ಲಿ ತಾನು ಡಿಗ್ರಿ ಪಡೆದಾಗ ಮಕ್ಕಳೂ ಸೇರಿದಂತೆ ಎಲ್ಲರಿಗೂ ಆಶ್ಚರ್ಯವೆಂದು ಕಿಂಲೋನ್ ಹೇಳುತ್ತಾರೆ. ಶಾಲಾ ಜೀವನದಲ್ಲಿ ತುಂಬಾ ಜಾಣೆಯಾಗಿದ್ದರು. ಪ್ರಾಥಮಿಕ ಶಿಕ್ಷಣ ಮುಗಿಸಿದ ಬಳಿಕ ಉನ್ನತ ವಿದ್ಯಾಭ್ಯಾಸಕ್ಕೆ ಹೋಗುವ ಸೌಕರ್ಯ ಅಂದಿರಲಿಲ್ಲ. ನಂತರ ಬ್ಯಾಂಕಾಕ್‌ಗೆ ವಲಸೆ ಹೋದ ಬಳಿಕ ಕಲಿಕೆಯು ಅರ್ಧದಲ್ಲೇ ಉಳಿಯಿತು. ನಂತರ ಮದುವೆಯಾಗಿ ಮಕ್ಕಳಾದ ಬಳಿಕ ಅವರ ಶಿಕ್ಷಣದ ಕಡೆಗೆ ಗಮನಹರಿಸಿದರು. ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿ ಐದು ಮಕ್ಕಳು ಮಾಸ್ಟರ್ಸ್ ಡಿಗ್ರಿ ಹಾಗೂ ಓರ್ವರು ಪಿಹೆಚ್‌ಡಿ ಪಡೆದಾಗ ಸಂತೋಷ ಪಟ್ಟ ಆ ಅಮ್ಮ ತಾನು ಡಿಗ್ರಿ ಪಡೆಯಬೇಕೆಂಬ ಕನಸಿನಿಂದ ಹೊರಬರಲಿಲ್ಲ.

ಹೀಗೆ 72ನೇ ವಯಸ್ಸಿನಲ್ಲಿ ಪುನಃ ಶಿಕ್ಷಣಕ್ಕಾಗಿ ಪಠ್ಯ ಪುಸ್ತಕವನ್ನು ತೆರೆದರು. ಆದರೆ ಓರ್ವ ಮಗಳ ಮರಣದಿಂದ ಕಲಿಯುವ ಆಸೆಯನ್ನು ಕೈ ಬಿಟ್ಟರು. ನಂತರ 85ನೇ ವಯಸ್ಸಿನಲ್ಲಿ ಪುನಃ ವಿಶ್ವವಿದ್ಯಾನಿಲಯಕ್ಕೆ ಸೇರಿದರು. ಹ್ಯೂಮನ್ ಇಕೋನಮಿ ಎಂಬ ವಿಷಯದಲ್ಲಿ ಹಲವು ವರ್ಷಗಳ ಕಠಿಣ ಪ್ರಯತ್ನದಿಂದ ಅಜ್ಜಿಯು ಬಿರುದು ಗಳಿಸುವಾಗ 91 ವರ್ಷವೇ ಕಳೆದಿತ್ತು.

ಬಿರುದು ಗಳಿಸಿದ ಬಳಿಕ ಇನ್ನು ಮುಂದಿನ ನಿಮ್ಮ ಯೋಜನೆಯೇನೆಂದು ಕೇಳಿದಾಗ, 'ನನಗೆ ಈ ವಯಸ್ಸಿನಲ್ಲಿ ಯಾರೂ ಉದ್ಯೋಗ ನೀಡಲಾರರು' ಎಂದು ನಗುತ್ತಾರೆ. ಮುದ್ದು ಮೊಮ್ಮಕ್ಕಳೊಂದಿಗೆ, ಮರಿ ಮಕ್ಕಳೊಂದಿಗೆ ಹಾಯಾಗಿ ಬದುಕುವುದೇ ನನ್ನ ಆಸೆ ಎನ್ನುತ್ತಾರೆ ಮುತ್ತಜ್ಜಿ. ■

ಆಶ್ಚರ್ಯ ಹುಟ್ಟಿಸುವ ಚಿತ್ರಗಳು

ಬೆಳಗಾಗುತ್ತಲೇ ಆಗ್ನಸ್ ಎಂಬ 90ರ ಹರೆಯದ ಅಜ್ಜಿ ಮನೆಯಿಂದ ಹೊರಡುತ್ತಿದ್ದರು. ಅಷ್ಟು ಪ್ರಾಯವಾದರೂ ಕೆಳಗೆ ನೋಡುತ್ತಾ ಬಹಳ ಜಾಗರೂಕತೆಯಿಂದೇನೂ ಅವರು ನಡೆಯುತ್ತಿರಲಿಲ್ಲ. ಎತ್ತರದ ಕಟ್ಟಡಗಳು, ಚರ್ಚ್‌ಗಳು, ದೊಡ್ಡ ಮನೆಗಳೆಡೆಗೇ ಅವರ ನೋಟವಿತ್ತು. ಎಲ್ಲಾದರೂ ಸುಂದರವಾದ ಗೋಡೆ ಕಂಡರೆ ಅಲ್ಲಿಗೆ ಅವರ ನಡಿಗೆ ಕೊನೆಗೊಳ್ಳುತ್ತಿತ್ತು. ನಂತರ ತನ್ನಲ್ಲಿರುವ ಉದ್ದವಾದ ಬ್ರಶ್ ಮತ್ತು ಪೈಂಟ್‌ನಿಂದ ಸುಂದರವಾದ ಚಿತ್ರಗಳನ್ನು ಬಿಡಿಸುವುದು ಈಕೆಯ ಹವ್ಯಾಸ. ಜೆಕ್ ಗಣರಾಜ್ಯದ ಲೌಕ ಎಂಬ ಗ್ರಾಮದಲ್ಲಿ ಇದೀಗ ಈ ಅಜ್ಜಿ ಮತ್ತು ಆಕೆ ಬಿಡಿಸಿದ ಗೋಡೆಯ ಚಿತ್ರಗಳು ಚರ್ಚಾ ವಿಷಯವಾಗಿದೆ. ಗ್ರಾಮದ ಚರ್ಚ್, ಆಸ್ಪತ್ರೆ, ಶಾಲೆ, ಆಫೀಸ್‌ಗಳು, ಮನೆಗಳ ಗೋಡೆಗಳೆಲ್ಲ 90ರ ಹರೆಯದ ಕಲಾ ಕೌಶಲ್ಯದಿಂದ ಮೂಡಿಬಂದ ಹೂಗಳು, ಬಣ್ಣದ ಚಿಟ್ಟೆಗಳು, ವೈವಿಧ್ಯಮಯ ಎಲೆಗಳಿಂದ ಎಲ್ಲರ ಕಣ್ಮನ ಸೆಳೆಯುತ್ತಿದೆ.

ಮೊದಲು ಕೃಷಿ ಕೆಲಸಗಳಲ್ಲಿ ಬಿಝಿಯಾಗಿದ್ದ ಆಗ್ನೆಸ್. ಆ ಕೆಲಸ ನಿಲ್ಲಿಸಿದ ಬಳಿಕ ಮನೆಯಲ್ಲಿ ಉಳಿದಾಗ ಹೊಳೆದ ಒಂದು ವಿನೋದವಾಗಿತ್ತು. ಜೆಕ್ ಗಣರಾಜ್ಯದ ಪರಂಪರಾಗತ ಚಿತ್ರಕಲಾ ಶೈಲಿಯಾದ ಮೊರಾವಿಯನ್ ಶೈಲಿಯಲ್ಲೇ ಚಿತ್ರ ರಚಿಸುತ್ತಿದ್ದಾರೆ. ಮೊದಲು ಚಿತ್ರ ಬಿಡಿಸಲು ಕ್ಯಾನ್‌ವಾಸನ್ನು ಹುಡುಕಿ ನಡೆಯಬೇಕಾಗಿದ್ದರೆ ಈಗ ಜನರು ಚಿತ್ರಕ್ಕಾಗಿ ಇವರನ್ನೇ ಹುಡುಕುತ್ತಾ ಬರುತ್ತಿದ್ದಾರೆಂದು ಅಜ್ಜಿಯು ನಗುತ್ತಾ ಹೇಳುತ್ತಾರೆ. ಪ್ರಾಯವನ್ನು ಚಿತ್ರ ರಚನೆಯಿಂದ ಸೋಲಿಸಿದ ಅಜ್ಜಿಯೊಡನೆ ನಿಮಗೆ ವಿಶ್ರಾಂತಿ ಬೇಡವೇ? ಎಂದು ಕೇಳಿದರೆ ಮನೆಯಲ್ಲಿ ಸುಮ್ಮನೆ ಕುಳಿತರೆ ಚಿತ್ರ ಬಿಡಿಸುವಾಗ ಉಂಟಾಗುವ ಸಂತೋಷ, ಸಂತೃಪ್ತಿ ಲಭಿಸಲು ಸಾಧ್ಯವೇ? ಅನ್ನುತ್ತಾರೆ. ■

ಪತಿಯ ವಂಚನೆ ಜೀವನವನ್ನೇ ಧ್ವಂಸ ಮಾಡಿತು

ಮೂವತ್ತೆರಡರ ಹರೆಯದ ನಾನು ಪ್ರೇಮವಿವಾಹಿತೆ. ನಮ್ಮ ಮದುವೆಯಾಗಿ ಎಂಟು ವರ್ಷಗಳಾದವು. ನಮಗಿಬ್ಬರು ಮಕ್ಕಳಿದ್ದಾರೆ. ಕಳೆದ ಮೂರು ವರ್ಷಗಳಿಂದ ಅವರಿಗೆ ಮಹಿಳೆಯೋರ್ವರ ಜೊತೆ ಸಂಬಂಧವಿದೆ. ಅನೇಕ ಬಾರಿ ಅವರು ತಪ್ಪನ್ನು ಪುನರಾವರ್ತಿಸುತ್ತಿದ್ದಾರೆ. ಅವರು ನನ್ನನ್ನು ವಂಚಿಸುತ್ತಿದ್ದಾರೆ. ತನ್ನ ತಪ್ಪನ್ನು ಅವರು ಒಪ್ಪುತ್ತಿದ್ದಾರೆ. ಇದರಿಂದ ನಾನು ಕೆಲ ಕಾಲ ಚಿಂತಾಕ್ರಾಂತಳಾಗಿ ಕಳೆದೆ. ನನ್ನ ಕೋಪ, ಯಾತನೆ ನನ್ನಿಂದ ನಿಯಂತ್ರಿಸಲಾಗುತ್ತಿಲ್ಲ. ಇನ್ನೆಂದೂ ಹೀಗೆ ಮಾಡಲಾರೆ, ದಾಂಪತ್ಯ ಸಮಸ್ಯೆ ನನ್ನನ್ನು ಹೀಗೆ ಮಾಡಲು ಪ್ರೇರೇಪಿಸಿದೆ ಎಂದವರು ಹೇಳುತ್ತ ದ್ದಾರೆ. ನಾನು ಅವರನ್ನು ಕ್ಷಮಿಸಿದರೂ ನನ್ನ ಮನದ ಸಂಕಟವಿನ್ನೂ ತಣಿದಿಲ್ಲ. ಇನ್ನು ನಮ್ಮ ದಾಂಪತ್ಯ ಸಂಬಂಧದಲ್ಲಿ ಸಮಸ್ಯೆಯುಂಟಾದರೆ ಅವರು ಮತ್ತೆ ಪರಸ್ತ್ರೀ ಸಂಗದಲ್ಲಿ ಏರ್ಪಡುವರೋ ಎಂಬ ಆತಂಕ ನನ್ನನ್ನು ಕಾಡುತ್ತಿದೆ. ಅವರಲ್ಲೀಗ ನನಗೆ ಗೌರವ ಭಾವನೆ ಇಲ್ಲ. ಇದಕ್ಕೆ ಪರಿಹಾರವಾಗಿ ಉಪದೇಶಿಸುವಿರಾ?

■ ಹನ್ನಾ ಎಮ್. ■

ಉತ್ತರ: ಪ್ರಿಯ ಸಹೋದರಿ, ಜೀವನದಲ್ಲಿ ಇತರೆಲ್ಲಕ್ಕಿಂತ ಮಿಗಿಲಾಗಿ ಪ್ರೀತಿಸುವ, ಗೌರವಿಸುವವರಿಂದ ವಂಚಿಸಲ್ಪಡುವಾಗ ಮಾನಸಿಕ ಯಾತನೆಯುಂಟಾಗುವುದು ಸಹಜ. ಒಂದಕ್ಕಿಂತ ಹೆಚ್ಚು ಬಾರಿ ಅನ್ಯ ಸ್ತ್ರೀಯೊಂದಿಗೆ ಸಂಬಂಧ ಬೆಳೆಸಿದ ನಿಮ್ಮ ಪತಿಯಲ್ಲಿ ನಿಮಗೆ ಅವಿಶ್ವಾಸ ಭಾವನೆಯುಂಟಾಗುವುದು ಕೂಡಾ ಸಹಜ. ಆದರೂ ಎಷ್ಟೇ ಸಂಕಷ್ಟ ಮಾನಸಿಕ ಯಾತನೆಯುಂಟಾದರೂ ವೈವಾಹಿಕ ಸಂಬಂಧವನ್ನು ಎಂದಿನಂತೆ ಮುಂದುವರಿಯಲು ನೀವು ಶ್ರಮಿಸಬೇಕು. ಆದರೆ ಅದು ಅಷ್ಟು ಸುಲಭವಲ್ಲವೆಂಬುದು ಒಪ್ಪುವಂತಹದ್ದೇ. ಬಿರುಕು ಬಿಟ್ಟ ನಿಮ್ಮ ವಿಶ್ವಾಸವನ್ನು ನೀವು ಸರಿಪಡಿಸಬೇಕು. ವೈವಾಹಿಕ ಜೀವನವನ್ನು ಅಂತ್ಯಗೊಳಿಸುವ ಅಂತಿಮ ನಿರ್ಧಾರ ಕೈಗೊಳ್ಳುವ ಮೊದಲು ಇದಕ್ಕಾಗಿ ಪ್ರಯತ್ನಿಸಬೇಕು. ಇನ್ನು ವೈವಾಹಿಕ ಜೀವನವು ಮುಂದುವರಿಸಲು ಸಾಧ್ಯವೇ ಇಲ್ಲವೆಂದು ನಿಮಗೆ ತೋಚಿದರೆ ನೀವು ಅಂತಿಮವಾಗಿ ವಿವಾಹ ವಿಚ್ಛೇದನ ಪಡೆಯಬಹುದು. ಆಗ ನಿಮ್ಮ ಭಾವೀ ಜೀವನದ ಕುರಿತು ದುಃಖಿಸಬೇಕಾಗಿಲ್ಲ.

ಈ ಸಂದರ್ಭದಲ್ಲಿ ಪತಿಯನ್ನು ಜೊತೆಯಲ್ಲಿ ಕರೆದುಕೊಂಡು ಓರ್ವ ಮಾನಸಿಕ ತಜ್ಞರನ್ನು ಸಂಪರ್ಕಿಸಬೇಕು. ಈರ್ವರ ವಿಚಾರಗಳನ್ನು ಕೇಳಿ ಅವರು ಉಪದೇಶಿಸಬಹುದು. ನಿಮ್ಮ ಮೊಹಲ್ಲಾದ ಇಮಾಮರು ಅಥವಾ ವಿವಾಹಕ್ಕೆ ಸಂಬಂಧಿಸಿದ ಕೌನ್ಸಿಲಿಂಗ್ ಮಾಡುವವರನ್ನು ಭೇಟಿಯಾಗುವುದು ಉತ್ತಮ. ಅವರು ಇಸ್ಲಾಮೀ ರೀತಿಯಲ್ಲಿ ಪರಿಹಾರ ಕಲ್ಪಿಸಬಹುದು.

ಈ ಸಂದರ್ಭದಲ್ಲಿ ನಿಮ್ಮ ದಾಂಪತ್ಯ ಜೀವನದ ಮನೋಹರವಾದ ಕ್ಷಣಗಳನ್ನು ಸ್ಮರಿಸಿ ನೀವು ಮತ್ತೆ ಸ್ನೇಹ ಪ್ರೀತಿ ಅನುರಾಗ ಪುಟಿದೇಳುವಂತೆ ಪ್ರಯತ್ನಿಸಬೇಕು. ನೀವಿಬ್ಬರೂ ಜೊತೆಯಾಗಿ ಕುಳಿತು ಮಾತನಾಡಬೇಕು. ನಿಮ್ಮ ಪತಿಯ ಮನಸ್ಸನ್ನು ತೆರೆಯಲು ನೀವು ಶ್ರಮಿಸಬೇಕು.

ತನ್ನ ಕೃತ್ಯದ ಬಗ್ಗೆ ಖೇದ ಬರದೆ ಇರಲು ಹಲವು ಕಾರಣಗಳಿರಬಹುದು. ಇದು ನಿಮ್ಮನ್ನು ಕಳವಳಕ್ಕೊಳಪಡಿಸಿದೆ ಎಂದು ಅವರಿಗೆ ಅನಿಸಿರಲಿಕ್ಕಿಲ್ಲ ಅಥವಾ ತನ್ನ ಸ್ವಾಭಿಮಾನವು ನಿಮ್ಮ ಮುಂದೆ ಖೇದ ವ್ಯಕ್ತಪಡಿಸಲು ಅಡ್ಡಿಯಾಗಿರಬಹುದು. ಆದರೆ ನೀವು ಪರಸ್ಪರ ಮಾತುಕತೆ ನಡೆಸದೆ ಇದ್ದರೆ ನಿಮ್ಮ ಮನಸ್ಸಿನಲ್ಲಿ ಇದ್ದದ್ದು ಅವರಿಗೆ ತಿಳಿಯಲು ಖಂಡಿತ ಸಾಧ್ಯವೇ ಇಲ್ಲ.

ಆದರೆ ಅವರೊಂದಿಗೆ ಸಂಬಂಧ ಕಡಿಯಲು ಬಯಸಿದ್ದರೆ ಇಂತಹ ಶ್ರಮಗಳು ವ್ಯರ್ಥವೆಂದು ನಿಮಗನಿಸಬಹುದು. ಆದರೆ ವಿವಾಹ ವಿಚ್ಛೇದನ ಮಾಡು

ವುದಕ್ಕಿಂತ ಮೊದಲು ಅದನ್ನು ತಪ್ಪಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಬೇಕೆಂದು ನಾನು ಉಪದೇಶಿಸುತ್ತೇನೆ.

ನಮಗೆ ತಿಳಿದಂತೆ ವಿವಾಹಕ್ಕೆ ಇಸ್ಲಾಮಿನಲ್ಲಿ ಭಾರೀ ಮಹತ್ವವಿದೆ. ಅದಕ್ಕಾಗಿ ತನಗೆ ಸಾಧ್ಯವಾದಷ್ಟು ಗರಿಷ್ಠ ಪ್ರಮಾಣದಲ್ಲಿ ವಿವಾಹ ವಿಚ್ಛೇದನದಿಂದ ತಡೆಯಲು ಶ್ರಮಿಸಬೇಕು ಎಂಬುದು ಮಹತ್ವದ ವಿಚಾರ. ವೈವಾಹಿಕ ಜೀವನದಲ್ಲುಂಟಾಗುವ ಒತ್ತಡಗಳಿಂದ ಮೇಲೆ ಬರಲು ದಂಪತಿಗಳಿಗೆ ಸಾಧ್ಯವಿದೆಯಾದರೂ ಹೆಚ್ಚಿನವರು ವಿಫಲರಾಗುತ್ತಾರೆ. ಆದರೆ ನಿಮಗದು ಸಾಧ್ಯವಿಲ್ಲವೆಂದಾದರೆ ನೀವು ಬೇಸರಿಸಬೇಕಾಗಿಲ್ಲ. ನೀವು ಯಾವ ಪಾಪವನ್ನೂ ಮಾಡಿಲ್ಲ. ಸಮಸ್ಯೆಯ ಪರಿಹಾರಕ್ಕಾಗಿ ನೀವು ಹೆಚ್ಚು ಪ್ರಯತ್ನಿಸುತ್ತಿದ್ದೀರಿ.

ನಿಮ್ಮ ಎಲ್ಲಾ ಪ್ರಯತ್ನ ವಿಫಲವಾದರೆ ಮತ್ತೆ ವಿವಾಹ ವಿಚ್ಛೇದನ ಪಡೆಯಬಹುದು. ವಿವಾಹ ವಿಚ್ಛೇದನ ಪಡೆಯುವುದಕ್ಕಿಂತ ಮೊದಲು ನೀವು ನಿಮ್ಮ ಕುಟುಂಬದವರ, ಆತ್ಮೀಯರ, ಬೆಂಬಲವನ್ನು ಖಾತ್ರಿ ಪಡಿಸಿಕೊಳ್ಳಬೇಕು. ಅಸಂತೋಷದಿಂದ ಕೂಡಿದ ನಿಮ್ಮ ದಾಂಪತ್ಯ ಜೀವನದಿಂದ ನಿಮ್ಮ ವಿವಾಹ ವಿಚ್ಛೇದನವು ನಿಮ್ಮನ್ನು ಕಾಪಾಡುತ್ತದೆಯಾದರೂ ಅದು ಅಷ್ಟು ಸುಲಭವಲ್ಲ. ಮಾನಸಿಕವಾಗಿಯೂ, ದೈಹಿಕವಾಗಿಯೂ ಅದು ನಿಮ್ಮನ್ನು ಕುಸಿಯುವಂತೆ ಮಾಡುತ್ತದೆ ಎಂಬುದು ನಿಶ್ಚಿತ. ಈ ಸಂದರ್ಭದಲ್ಲಿ ಕುಟುಂಬದ, ಸಂಬಂಧಿಕರ ಮತ್ತು ಆಪ್ತರಿಂದ ಸಿಗುವ ನೆರವು ನಿಮಗೆ ಸಮಾಧಾನ ನೆಮ್ಮದಿ ನೀಡಬಹುದು.

ವಿವಾಹ ವಿಚ್ಛೇದನದ ಬಳಿಕದ ಜೀವನ ತುಂಬಾ ತ್ರಾಸದಾಯಕವಾಗಿರುವುದು. ಅದರಿಂದ ಮೇಲೆ ಬರಲು ಸ್ವಲ್ಪ ಸಮಯ ತಗಲುವುದು. ಆಗ ನಿಮ್ಮ ಮಕ್ಕಳಿಗೆ ನಿಮ್ಮ ಆಪ್ತರ, ಸಂಬಂಧಿಕರ ನೆರವು ಅಗತ್ಯ. ಈ ಸಂದರ್ಭದಲ್ಲಿ ಅಲ್ಲಾಹನೊಂದಿಗೆ ಹೆಚ್ಚು ಹತ್ತಿರವಾಗಲು ಶ್ರಮಿಸಬೇಕು. ಹೆಚ್ಚು ಇಸ್ತಿಖಾರ ನಮಾಝ್ ಮಾಡುತ್ತಿರಬೇಕು. ಅದು ನಿಮ್ಮನ್ನು ಉತ್ತಮ ನಿರ್ಧಾರ ತಳೆಯಲು ಪ್ರೇರಕವಾಗುತ್ತದೆ.

ಈ ಬಹಳ ಸಂದಿಗ್ಧವಾದ ಪರಿಸ್ಥಿತಿಯಲ್ಲಿ ನಿಮಗೂ ನಿಮ್ಮ ಮಕ್ಕಳಿಗೂ ಅಲ್ಲಾಹನು ದಾರಿಯನ್ನು ಸುಗಮಗೊಳಿಸಲಿ. ಒಂದು ಉತ್ತಮ ನಿರ್ಧಾರ ತಾಳಲು ಅದರ ಪ್ರತ್ಯಾಘಾತಗಳನ್ನು ಸಹಿಸಿ ಮುಂದೆ ಸಾಗಲು ಅಲ್ಲಾಹನು ನಿಮಗೆ ಅನುಗ್ರಹಿಸಲಿ. ■

FURQAN ACADEMY AND CHARITABLE TRUST'S
فرقان اُردو نرسری و پرائمری اسکول
FURQAN URDU PRIMARY SCHOOL
NURSERY TO 6TH STANDARD
VALUE BASED ALONG WITH RELIGIOUS EDUCATION
Opp. KEB Office, Bhandiwad Base, Hubli - 580 020

ಡಾ| ಪಿ.ವಿ. ಎಲಿಜಾ

ಮಕ್ಕಳನ್ನು ಕಾಪಾಡಿ

ಸಣ್ಣ ಪ್ರಾಯದ ಮಕ್ಕಳೂ ಅಪರಾಧಿಗಳಾಗುತ್ತಿದ್ದಾರೆ. ಸಣ್ಣ ಮಕ್ಕಳೂ ಪೀಡಿಸಲ್ಪಡುತ್ತಿದ್ದಾರೆ. ಇನ್ನು ಬುದ್ಧಿ ಬೆಳೆದಿಲ್ಲದ ಮಕ್ಕಳು ಅಪರಾಧ ಜಗತ್ತಿಗೆ ಕಾಲಿರಿಸುವಾಗ, ಇಷ್ಟು ಸಣ್ಣ ಪ್ರಾಯದಲ್ಲಿ ಕಳ್ಳನೋ ಅಥವಾ ಕಳ್ಳಿಯೋ ಎಂದು ನಾವು ಅಚ್ಚರಿಪಡುವಾಗ, ಅವನ ಹೆತ್ತವರು ಅವರಿಗಿಂತಲೂ ದೊಡ್ಡ ಅಪರಾಧಿಗಳಾಗಿದ್ದಾರೆಂದು ಮಾನಸಿಕ ತಜ್ಞರು ಒಳಗೊಳಗೇ ನಗುತ್ತಿದ್ದಾರೆ. ಅವರನ್ನು ಸರಿದಾರಿಗೆ ತರಬೇಕಾದವರು ಯಾರು?

ನಾಲ್ಕು ದಶಕಗಳ ಹಿಂದೆ ವಿಶ್ವಸಂಸ್ಥೆಯು ಅಂಗೀಕರಿಸಿದ ಮಕ್ಕಳ ಹಕ್ಕುಗಳನ್ನು ಘೋಷಿಸಿದಾಗ ಸಮೂಹದೊಂದಿಗೆ ಅದು ಹೀಗೆ ವಿನಂತಿಸಿತ್ತು. "ಅತ್ಯಂತ ಉತ್ತಮವಾದವುಗಳನ್ನು ಮಕ್ಕಳಿಗೆ ತಲುಪಿಸುವ ಹೊಣೆಗಾರಿಕೆ ನಮಗಿದೆ. ಅದರಲ್ಲಿ ಪರಸ್ಪರ ವಿಶ್ವಾಸ ಹಾಗೂ ಆಹ್ಲಾದಕರವಾದ ವಾತಾವರಣ ಮುಖ್ಯವಾದುದು. ಸಹಿಷ್ಣುತೆ, ಶಾಂತಿ, ಸಮಾಧಾನ, ಸ್ವಾತಂತ್ರ್ಯ ಪ್ರಜ್ಞೆ ಬೆಳೆಸುವ ವಾತಾವರಣ ಸೃಷ್ಟಿಸಿಕೊಡಬೇಕು. ಅದಕ್ಕಾಗಿ ಹೆತ್ತವರು ಮಾತ್ರವಲ್ಲ, ಸಮಾಜವೂ, ಪ್ರಾದೇಶಿಕ–ದೇಶೀಯ ಸರಕಾರಗಳೂ, ಸ್ವಯಂ ಸೇವಾ ಸಂಸ್ಥೆಗಳೂ ಸಹಕರಿಸಬೇಕು. ಪುಟ್ಟ ಅಪರಾಧಿಗಳು ಹೆಚ್ಚುತ್ತಿರುವ ಈ ಸಂದರ್ಭದಲ್ಲಿ ಪ್ರತಿಯೋರ್ವ ಪೌರನೂ ಸ್ವಯಂ ಪ್ರಶ್ನಿಸಿಕೊಳ್ಳಬೇಕಾಗಿದೆ. ನಾನು ನನ್ನ ಕರ್ತವ್ಯವನ್ನು ನೆರವೇರಿಸುತ್ತಿದ್ದೇನೆಯೇ?

1924ರಲ್ಲಿ ಲೀಗ್ ಆಫ್ ನೇಶನ್ಸ್ ಅಂಗೀಕರಿಸಿದ ಮಕ್ಕಳ ಹಕ್ಕುಗಳಲ್ಲಿ ಸಮಾಜದ ಹೊಣೆಗಾರಿಕೆಯಿಂದ 5 ಕಾರ್ಯಗಳನ್ನು ಸೂಚಿಸಿತು.

1. ಮಕ್ಕಳ ಮಾನಸಿಕ ಹಾಗೂ ಶಾರೀರಿಕ ಬೆಳವಣಿಗೆಗೆ ಸೂಕ್ತ ವಾತಾವರಣ ನಿರ್ಮಿಸುವುದು.
2. ಸ್ವಂತ ಸಾಮರ್ಥ್ಯವನ್ನು ಇತರರಿಗಾಗಿ ಉಪಯೋಗಿಸಲು ಮತ್ತು ಯಾವುದೇ ಪರಿಸ್ಥಿತಿಯಲ್ಲೂ ಸ್ಥಿರಚಿತ್ತತೆ ಪಾಲಿಸುವ ತರಬೇತಿ.
3. ಅನಾಥರಿಗೆ ಅಭಯ, ರೋಗಿಗಳಿಗೆ ಚಿಕಿತ್ಸೆ, ಹಸಿದವರಿಗೆ ಆಹಾರ.
4. ಮೋಸ, ವಂಚನೆಯ ಜಾಲಗಳಿಂದ ಸಂರಕ್ಷಣೆ.
5. ತುರ್ತು ಚಿಕಿತ್ಸೆಯ ಸಂದರ್ಭದಲ್ಲಿ ಮಕ್ಕಳಿಗೆ ವಿಶೇಷ ಆದ್ಯತೆ.

1993ರ ವಿಯೆನ್ನಾದ ಘೋಷಣೆಯ ಬಳಿಕ ಯು.ಎನ್.ಎ. ಅಂತಾರಾಷ್ಟ್ರೀಯವಾಗಿ ಇದೇ ಆಹ್ವಾನ ನೀಡಿತು. ತುರ್ತು ಸಂದರ್ಭಗಳಲ್ಲಿ ಮಕ್ಕಳಿಗೆ ಪುನರ್ವಸತಿ ನೀಡುವುದು. ಮಕ್ಕಳ ಅಪಹರಣ, ಬಾಲ ವೇಶ್ಯಾವೃತ್ತಿ, ಅಶ್ಲೀಲ ಬಾಲ ಸಾಹಿತ್ಯ, ಹೆಣ್ಣು ಶಿಶುಹತ್ಯೆ ಮೊದಲಾದವುಗಳನ್ನು ತಡೆಯಬೇಕೆಂಬುದು ಉದ್ದೇಶವಾಗಿತ್ತು. ಇವೆಲ್ಲವುಗಳನ್ನೂ ವಿಶ್ವರಾಷ್ಟ್ರಗಳು ಅಂಗೀಕರಿಸಿದರೂ, ಮಕ್ಕಳಂತೆ ಹಕ್ಕುಗಳು ನಿಷೇಧಿಸಲ್ಪಡುತ್ತಿರುವ ಒಂದು ವರ್ಗವೂ ಬೇರೆಯಿಲ್ಲ. ಕೇವಲ ಭಾರತದಲ್ಲಿ ಮಾತ್ರ 80 ದಶಲಕ್ಷ ಮಕ್ಕಳು ಪೋಷಕಾಹಾರ ಕೊರತೆ ಅನುಭವಿಸುತ್ತಿದ್ದಾರೆ. ಕಾರ್ಮಿಕರಾಗಿ ಕೆಲಸ ಮಾಡುತ್ತಿರುವ 80 ದಶಲಕ್ಷ ಮಕ್ಕಳು ನಮ್ಮಲ್ಲಿದ್ದಾರೆ. ಅದರಲ್ಲಿ 70 ಶೇಕಡಾ 10 ವಯಸ್ಸಿಗಿಂತ ಕೆಳಗಿನವರು. ಬೀದಿಗಳಲ್ಲಿ ಅಲೆಯುತ್ತಿರುವ ಮಕ್ಕಳ ಸಂಖ್ಯೆ 10 ಲಕ್ಷ. ವಿವಿಧ ಸಂಘ ಸಂಸ್ಥೆ

ಗಳ ಸಂರಕ್ಷಣೆಯಲ್ಲಿ ಸುಮಾರು 3 ಲಕ್ಷ ಮಕ್ಕಳಿದ್ದಾರೆ. ಉಗ್ರಗಾಮಿಗಳ ಹಿಡಿತದಲ್ಲಿರುವ ಮಕ್ಕಳ ಸಂಖ್ಯೆ ಸ್ಪಷ್ಟವಿಲ್ಲ.

ಬಾಲ್ಯ ವಿವಾಹಕ್ಕೆ ನಿಷೇಧ ಇರುವ ರಾಷ್ಟ್ರದಲ್ಲಿ 14ನೇ ವರ್ಷದಲ್ಲಿ ಪತ್ನಿ, 15ನೇ ವಯಸ್ಸಿನಲ್ಲಿ ತಾಯಿಯಾಗುವ ಹೆಣ್ಣು ಮಕ್ಕಳು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ.

ಮಕ್ಕಳ ಉದ್ಯೋಗ ಕಾನೂನುಗಳ ಸ್ಥಿತಿಯೂ ಅಷ್ಟೇ. 14 ವಯಸ್ಸಿನ ಕೆಳಗಿನ ಮಕ್ಕಳಿಂದ ಅಪಾಯಕಾರಿ ಕೆಲಸ ಮಾಡಿಸಬಾರದೆಂದೂ, ಯೋಗ್ಯತಾ ಸರ್ಟಿಫಿಕೇಟ್ ಪಡೆದವರಿಂದಲೂ 4 ಗಂಟೆಗಿಂತ ಹೆಚ್ಚು ರಾತ್ರಿಯಲ್ಲಿ ಕೆಲಸ ಮಾಡಿಸಬಾರದೆಂದೂ, ಕಾನೂನಿರುವ ದೇಶದಲ್ಲಿ ದೇಶದ ಉತ್ಪಾದನಾ ರಂಗದಲ್ಲಿ ಅರ್ಧಕ್ಕಿಂತಲೂ ಹೆಚ್ಚು ಮಕ್ಕಳು ಕೆಲಸ ಮಾಡುತ್ತಿದ್ದಾರೆಂಬ ಬೆಚ್ಚಿ ಬೀಳಿಸುವ ಸತ್ಯವು ಹೊರಬರುತ್ತಿದೆ. ಪ್ರತಿಭಟನೆ ನಡೆಸಲು ಸಾಧ್ಯವಾಗದೆ ಕಠಿಣ ದುಡಿಮೆಯಲ್ಲೇ ಬಾಲ್ಯ ಕಳೆದುಹೋಗುತ್ತಿದೆ.

ಲೈಂಗಿಕ ಕಿರುಕುಳ ಹಾಗೂ ಬಾಲ್ಯ ವೇಶ್ಯಾವೃತಿಯು ಮಕ್ಕಳ ಹಕ್ಕುಗಳ ಮೇಲಿನ ಅತ್ಯಂತ ದೊಡ್ಡ ಅಕ್ರಮವೆಂದು ತಿಳಿಯಲಾಗಿದೆ. ನಮ್ಮ ದೇಶದಲ್ಲಿ 10 ಮಕ್ಕಳಲ್ಲಿ ಒಬ್ಬರಂತೆ ಲೈಂಗಿಕ ಶೋಷಣೆಗೆ ವಿಧೇಯರಾಗುತ್ತಿದ್ದಾರೆ. ಲೈಂಗಿಕ ಉದ್ಯೋಗವೆಂಬ ಕೂಪದಲ್ಲಿರುವ ಮಕ್ಕಳ ಸಂಖ್ಯೆ ಸುಮಾರು 10 ಲಕ್ಷ. ಅವರಿಂದ ಬರುತ್ತಿರುವ ಆದಾಯ 1500 ಕೋಟಿ. ಮಹಿಳಾ ದೌರ್ಜನ್ಯಕ್ಕೆ ಅವಲಂಬಿಸುವ ರೀತಿಯಲ್ಲೇ ಮಕ್ಕಳ ಮೇಲಿನ ದೌರ್ಜನ್ಯದ ವಿಚಾರಣೆಯೂ ನಡೆಯುತ್ತದೆ. ಲೈಂಗಿಕ ದೌರ್ಜನ್ಯದ ವಿವರಣೆ ಹಾಗೂ ಮೆಡಿಕಲ್ ಪರೀಕ್ಷೆಯೂ ಅದೇ ರೀತಿ. ಸ್ವಂತ ಹೆತ್ತವರನ್ನು ಕೂಡಾ ವಿಚಾರಣಾ ಸಮಯದಲ್ಲಿ ಜೊತೆಗಿರಲು ಕಾನೂನು ಅನುಮತಿಸುವುದಿಲ್ಲ.

ಭಿಕ್ಷಾಟನಾ ವೃತ್ತಿಗೆ ದೂಡಲ್ಪಟ್ಟ ಹಾಗೂ ಮಾದಕ ದ್ರವ್ಯಗಳ ಮಾಫಿಯಾಗಳಲ್ಲಿ ಸಿಕ್ಕಿ ಬಿದ್ದಿರುವ ಇನ್ನೊಂದು ದೊಡ್ಡ ವಿಭಾಗವೂ ಇವರಲ್ಲಿದೆ. ಮಕ್ಕಳ ಹಕ್ಕುಗಳ ಬಗ್ಗೆ ಹೇಳುವಾಗಲೂ, ಅದರ ಕುರಿತು ತೀರ್ಮಾನಕೈಗೊಳ್ಳಬೇಕಾದವರು ಹಿರಿಯರೇ ಎಂಬುದು ಮಕ್ಕಳನ್ನು ಕಷ್ಟಕ್ಕೀಡು ಮಾಡುತ್ತದೆ. ಮಕ್ಕಳು ಖಾಸಗಿ ಸೊತ್ತೆಂಬ ಹೆತ್ತವರ ನಂಬಿಕೆಯೂ ಮಕ್ಕಳ ಮೇಲೆ ದುಷ್ಪರಿಣಾಮ ಬೀರುತ್ತಿದೆ.

ಮಕ್ಕಳು ಸಾರ್ವಜನಿಕ ಸಂಪತ್ತು ಎಂಬ ಭಾವನೆ ಸಮಾಜದಲ್ಲಿ ವ್ಯಾಪಕವಾಗಿ, ಅವರ ರಕ್ಷಣೆ ಹಾಗೂ ಆರೋಗ್ಯಪೂರ್ಣ ಬೆಳವಣಿಗೆಯು ನಮ್ಮೆಲ್ಲರ ಹೊಣೆಯೆಂದು ಅರಿವು ಮೂಡಿ ಬಂದರೆ ಮಾತ್ರ ಮಕ್ಕಳ ಹಕ್ಕುಗಳನ್ನು ರಕ್ಷಿಸಲು ಸಾಧ್ಯ. ಮಕ್ಕಳ ಉತ್ತಮ ಗುಣಗಳನ್ನು ಪ್ರೋತ್ಸಾಹಿಸಿ, ಅವರ ತಪ್ಪು ಗಳಿಗೆ ಸಣ್ಣ ಶಿಕ್ಷೆ ನೀಡುವ ಹೊಣೆಯಿರುವ ಸಮಾಜವು ಓರ್ವ ಶಿಕ್ಷಕನ ಪಾತ್ರವನ್ನು ವಹಿಸಬೇಕೆಂಬ ಮನಃಶಾಸ್ತ್ರಜ್ಞರ ಮಾತು ಖಂಡಿತ ನಿಜವೆಂಬುದರಲ್ಲಿ ಸಂದೇಹವಿಲ್ಲ. ■

ಸಂದೇಶವಾಹಕರೇ, ಒಳಿತು ಮತ್ತು ಕೆಡುಕು ಸರಿಸಮಾನವಲ್ಲ. ನೀವು ಕೆಡುಕನ್ನು ಅತ್ಯುತ್ತಮ ಒಳಿತಿನ ಮೂಲಕ ದೂರೀಕರಿಸಿರಿ. ನಿಮ್ಮೊಂದಿಗೆ ಹಗೆತನ ಕಟ್ಟಿಕೊಂಡವನು ನಿಮ್ಮ ಆಪ್ತ ಮಿತ್ರನಾಗಿ ಬಿಡುವುದನ್ನು ನೀವು ಕಾಣುವಿರಿ. ಈ ಗುಣವಿಶೇಷವು ಸಹನಶೀಲರಿಗಲ್ಲದೆ ಇನ್ನಾರಿಗೂ ಲಭ್ಯವಾಗುವುದಿಲ್ಲ. ಈ ಸ್ಥಾನವು ಮಹಾ ಅದೃಷ್ಟಶಾಲಿಗಳ ಹೊರತು ಮತ್ತಾರಿಗೂ ಪ್ರಾಪ್ತವಾಗುವುದಿಲ್ಲ.

(ಪವಿತ್ರ ಕುರ್‌ಆನ್: 41: 34–35)

With Best Compliments from:

Abdul Khader Belagali

ENGINEER & CIVIL CONTRACTOR

Corporation Bldg, Lamington Road, Hubli. Mob: +91 98450 78872

ವಿವಾಹ ಮತ್ತು ಶರಿಯಾ ಭಾಗ–07

– ಎಸ್ಸೆಮ್ಕೆ

ವಿವಾಹ ವಿಚ್ಛೇದಿತಳ ಹಕ್ಕುಗಳು

ವಿವಾಹ ವಿಚ್ಛೇದನದ ಮಾತು ಹೇಳಿದ ಕೂಡಲೇ ಪತಿ ಪತ್ನಿಯರು ಸಂಪೂರ್ಣ ಅನ್ಯರಾಗಿ ಬಿಡುವರೆಂಬ ತಪ್ಪು ತಿಳುವಳಿಕೆ ಇಂದು ಸಮಾಜದಲ್ಲಿ ವ್ಯಾಪಕವಾಗಿದೆ. ಆದರೆ ಈ ಹಿಂದೆ ವಿವರಿಸಿರುವಂತೆ ಇದ್ದತ್ ಕಾಲದಲ್ಲಿ ಸ್ತ್ರೀಯು ಪತಿಗೃಹದಲ್ಲಿಯೇ ವಾಸವಾಗಿರಬೇಕು. ಆ ಅವಧಿಯಲ್ಲಿ ಆಕೆಯ ಎಲ್ಲ ಖರ್ಚು ವೆಚ್ಚಗಳನ್ನು ಪುರುಷನೇ ವಹಿಸಬೇಕು. ಆಕೆಗೆ ಯೋಗ್ಯವಾದ ಆಹಾರ, ಬಟ್ಟೆ ಬರೆ ಹಾಗೂ ಇತರ ಸೌಲಭ್ಯಗಳನ್ನು ಒದಗಿಸುವುದು ಪುರುಷನ ಕರ್ತವ್ಯವಾಗಿರುವುದು. ಅಲ್ಲಾಹನು ಹೇಳುತ್ತಾನೆ:

"ನೀವು ವಾಸವಾಗಿರುವಲ್ಲಿಯೇ ಅವರನ್ನೂ (ತಲಾಕ್ ಕೊಟ್ಟ ಸ್ತ್ರೀಯರನ್ನು) ವಾಸಗೊಳಿಸಿರಿ. ಅವರಿಗೆ ಕಷ್ಟ ಕೊಡಲಿಕ್ಕಾಗಿ ಪೀಡಿಸಬೇಡಿರಿ. ಅವರು ಗರ್ಭಿಣಿಯರಾಗಿದ್ದರೆ ಹೆರಿಗೆ ತನಕ ಖರ್ಚಿಗೆ ನೀಡಿರಿ. ಆ ಬಳಿಕ ನಿಮಗಾಗಿ (ಮಗುವಿಗೆ) ಅವರು ಹಾಲುಣ್ಣಿಸಿದರೆ ಅವರಿಗೆ ಅದರ ಪ್ರತಿಫಲವನ್ನು ಕೊಡಿರಿ. ಉತ್ತಮ ರೀತಿಯಲ್ಲಿ ಪರಸ್ಪರ ಸಮಾಲೋಚನೆ ನಡೆಸಿರಿ. ನಿಮಗೆ ಸಮಾಧಾನವಿಲ್ಲದಿದ್ದರೆ ಆತನಿಗಾಗಿ ಬೇರೊಬ್ಬ ಸ್ತ್ರೀಯು ಮೊಲೆ ಹಾಲುಣಿಸಲಿ. (ಅತ್ತಲಾಕ್: 6)

ಮರಳಿ ಸ್ವೀಕರಿಸುವ ಒಪ್ಪಿಗೆಯಿರುವ ಇದ್ದತ್‌ನ ಕಾಲದಲ್ಲಿ ಪತಿ ಮರಣ ಹೊಂದಿದರೆ ಪತ್ನಿಗೂ, ಪತ್ನಿ ಮರಣ ಹೊಂದಿದರೆ ಪತಿಗೂ ವಾರೀಸು ಹಕ್ಕು ದೊರೆಯುವುದು. (ತಬ್ರಿ: 2:265)

ಆದರೆ ಮೂರು ತಲಾಕ್ ಹೇಳಲ್ಪಟ್ಟ ಸ್ತ್ರೀಯು ಗರ್ಭಿಣಿಯಲ್ಲದಿದ್ದರೆ ಆಹಾರ, ಬಟ್ಟೆಬರೆ ಮತ್ತು ವಸತಿ ಸೌಲಭ್ಯ ನೀಡಬೇಕಾಗಿಲ್ಲವೆಂದು ಇಮಾಮ್ ಅಹ್ಮದ್ ಬಿನ್ ಹಂಬಲ್‌ರಂತಹ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಗರ್ಭಿಣಿಯರಿಗೆ ಖರ್ಚು ವೆಚ್ಚ ನೀಡುವ ಬಗ್ಗೆ ಭಿನ್ನಾಭಿಪ್ರಾಯ ವಿಲ್ಲ. ಏಕೆಂದರೆ ಕುರ್‌ಆನ್ ಹೇಳುತ್ತದೆ:

"ಅವರು ಗರ್ಭಿಣಿಯರಾಗಿದ್ದರೆ ಅವರಿಗೆ ಖರ್ಚಿಗೆ ಕೊಡಿರಿ." (ಅತ್ತಲಾಕ್: 6)

ವಿವಾಹದ ವೇಳೆ ನೀಡುವ ಮೆಹರ್ (ವಿವಾಹ ಧನ) ಪತ್ನಿಯ ಹಕ್ಕು. ಅದು ಹೆಚ್ಚಿದ್ದರೂ ಕಡಿಮೆಯಿದ್ದರೂ ಮರಳಿ ಪಡೆಯಬಾರದು.

"ನೀವು ಓರ್ವ ಪತ್ನಿಯನ್ನು ತೊರೆದು ಬೇರೊಬ್ಬಳನ್ನು ಸ್ವೀಕರಿಸ ಬಯಸಿದರೆ, ಅವರಿಗೆ ನೀವು ಸಂಪತ್ತಿನ ದೊಡ್ಡ ಭಂಡಾರವನ್ನೇ ನೀಡಿದ್ದರೂ ಅದರಿಂದ ಏನನ್ನೂ ಮರಳಿ ಪಡೆಯಬಾರದು. ಸುಳ್ಳಾರೋಪ ಹೊರಿಸಿ ನೀವು ಅದನ್ನು ಮರಳಿ ಪಡೆಯುತ್ತೀರಾ? ಅದು ಸ್ಪಷ್ಟ ಪಾಪವಾಗಿದೆ." (ಅನ್ನಿಸಾ: 20)

ಆದರೆ ಪತ್ನಿಯನ್ನು ಸ್ಪರ್ಶಿಸುವುದಕ್ಕಿಂತ ಮುಂಚೆ ವಿವಾಹ ವಿಚ್ಛೇದನವಾದರೆ ಅರ್ಧಾಂಶವನ್ನು ಬಿಟ್ಟುಕೊಟ್ಟರೆ ಸಾಕು. ಉಳಿದರ್ಧವನ್ನು ಮರಳಿ ಪಡೆಯುವುದರಲ್ಲಿ ದೋಷವಿಲ್ಲ. ಆದರೆ ಔದಾರ್ಯ ತೋರಿಸುವುದೇ ಉತ್ತಮ.

"ಅವರಿಗೆ ವಿವಾಹ ಧನ ನಿರ್ಣಯಿಸಿದ ಬಳಿಕ ನೀವು ಅವರನ್ನು ಸ್ಪರ್ಶಿಸುವುದಕ್ಕಿಂತ ಮುಂಚೆ ವಿವಾಹ ವಿಚ್ಛೇದನ ನಡೆಸಿದರೆ ನೀವು ನಿರ್ಣಯಿಸಿದ್ದರ ಅರ್ಧಾಂಶವನ್ನು ನೀಡಬೇಕು, ಸ್ತ್ರೀ ಅಥವಾ ಪುರುಷ ಔದಾರ್ಯ ತೋರಿಸ ದಿದ್ದರೆ! ಪುರುಷರು ಔದಾರ್ಯ ತೋರುವುದೇ ದೇವಭಕ್ತಿಗೆ ತಕ್ಕುದಾಗಿದೆ. ನಿಮ್ಮ ಮಧ್ಯೆಯಿರುವ ಔದಾರ್ಯವನ್ನು ಮರೆಯಬೇಡಿರಿ. ನೀವು ಮಾಡುತ್ತಿರುವುದನ್ನೆಲ್ಲ ಅಲ್ಲಾಹನು ಕಾಣುತ್ತಾನೆ."

(ಅಲ್‌ಬಕರಃ: 237)

ಒಂದು ವೇಳೆ ವಿವಾಹ ಧನವನ್ನು

ಮುಂಚಿತವಾಗಿ ನಿರ್ಣಯಿಸಿರದಿದ್ದರೆ ಪುರುಷನು ಅದನ್ನು ಕೊಡಲು ಬಾಧ್ಯಸ್ಥನಲ್ಲ. ಹಾಗಿದ್ದರೂ ಔದಾರ್ಯದಿಂದ ಏನಾದರೂ ಕೊಡುವುದೇ ಸಭ್ಯತೆಯಾಗಿದೆ.

"ಸ್ತ್ರೀಯರನ್ನು ಸಂಪರ್ಕಿಸುವುದಕ್ಕಿಂತ ಅಥವಾ ವಿವಾಹಧನ ನಿರ್ಣಯಿಸುವುದಕ್ಕಿಂತ ಮುಂಚಿತವಾಗಿ ನೀವು ವಿವಾಹ ವಿಚ್ಛೇದನ ನೀಡಿದರೆ ನಿಮಗೆ ಮೆಹರ್‌ನ ಹೊಣೆಗಾರಿಕೆ ಇಲ್ಲ. ಆದರೆ ಅವರ ಅನುಭೋಗಕ್ಕಾಗಿ ನೀವು ಏನಾದರೂ ನೀಡಬೇಕು. ಶ್ರೀಮಂತನು ತನ್ನ ಸಾಮರ್ಥ್ಯದಂತೆ, ಬಡವನು ತನ್ನ ಸ್ಥಿತಿಗೆ ತಕ್ಕಂತೆ. ಅದು ಸಜ್ಜನರ ಕರ್ತವ್ಯವಾಗಿದೆ." (ಅಲ್ ಬಕರಃ: 236)

ಇಂತಹ ಪ್ರಸಂಗಗಳಲ್ಲಿ ಸ್ತ್ರೀಯರು ಇದ್ದತ್ ಆಚರಿಸಬೇಕಾಗಿಲ್ಲ.

"ಸತ್ಯವಿಶ್ವಾಸಿಗಳೇ! ವಿಶ್ವಾಸಿನಿಯರನ್ನು ನೀವು ವಿವಾಹವಾಗಿ ಅವರನ್ನು ಸ್ಪರ್ಶಿಸುವುದಕ್ಕಿಂತ ಮುಂಚಿತವಾಗಿ ತಲಾಕ್ ನೀಡಿದರೆ ನಿಮಗಾಗಿ ಅವರು ಇದ್ದತ್ ಆಚರಿಸಬೇಕಾಗಿಲ್ಲ. ಆದ್ದರಿಂದ ಅವರಿಗೆ ಏನಾದರೂ ಜೀವನಾಂಶ ನೀಡಿ ಗೌರವಾರ್ಹ ರೀತಿಯಲ್ಲಿ ಅವರ ಸಂಬಂಧವನ್ನು ಬೇರ್ಪಡಿಸಬೇಕು."

(ಪವಿತ್ರ ಕುರ್‌ಆನ್)

ವಿಧವೆಯರು ಇದ್ದತ್‌ನ ಕಾಲದಲ್ಲಿ ಶೃಂಗಾರ ವಸ್ತುಗಳನ್ನು ಅಥವಾ ಆಕರ್ಷಕ ಉಡುಪುಗಳನ್ನು ಧರಿಸಬಾರದು. ಸುಗಂಧ ದ್ರವ್ಯಗಳನ್ನೂ ಸೌಂದರ್ಯ ವರ್ಧಕ ಪ್ರಸಾಧನಗಳನ್ನೂ ಬಳಸಬಾರದು. ಅದರೊಂದಿಗೆ ಶುಚಿತ್ವವನ್ನು ಪಾಲಿಸಬೇಕು. ಅಂದರೆ ಅಸಹ್ಯ ರೀತಿಯಲ್ಲಿರಬಾರದು. ಆದರೆ ಪತಿಗೃಹದಲ್ಲಿ ವಾಸವಾಗಿರುವ ವಿವಾಹ ವಿಚ್ಛೇದಿತಳಿಗೆ ಈ ನಿಯಮ ಅನ್ವಯವಾಗುವುದಿಲ್ಲವೆಂದು ಇಮಾಮ್ ಅಬೂ ಹನೀಫ(ರ) ಅಭಿಪ್ರಾಯಪಟ್ಟಿದ್ದು ಅವರು ಸಿಂಗರಿಸಿ ಕೊಳ್ಳಬಹುದೆಂದು ಹೇಳಿದ್ದಾರೆ.

ಪೀಡನೆ:

ಅನ್ಯರೊಂದಿಗೆ ವಿವಾಹ ಸಂಬಂಧ ಬೆಳೆಸುವುದನ್ನು ಅಡ್ಡಿಪಡಿಸಲಿಕ್ಕಾಗಿ ಇದ್ದತ್‌ನ ಅವಧಿಗಿಂತ ಮುಂಚೆ ಸ್ತ್ರೀಯರನ್ನು ಮರಳಿ ಸ್ವೀಕರಿಸಕೂಡದು. ಪವಿತ್ರ ಕುರ್‌ಆನ್ ಇದನ್ನು ಕಟು ಶಬ್ದಗಳಿಂದ ವಿರೋಧಿಸಿದೆ.

"ನೀವು ಸ್ತ್ರೀಯರಿಗೆ ತಲಾಕ್ ನೀಡಿ ಅವರ ಇದ್ದತ್‌ನ ಕಾಲಾವಧಿ ಸಮಿಪಿಸಿದರೆ ಅವರನ್ನು ಯೋಗ್ಯ ರೀತಿಯಲ್ಲಿ ಒಟ್ಟಿಗೆ ವಾಸಗೊಳಿಸಿರಿ ಅಥವಾ ನ್ಯಾಯೋಚಿತವಾಗಿ ಬಿಡುಗಡೆ ಮಾಡಿರಿ. ಅಕ್ರಮವಾಗಿ ಪೀಡಿಸಲಿಕ್ಕಾಗಿಯೇ ಅವರನ್ನು ತಡೆದಿರಿಸಬೇಡಿರಿ. ಹಾಗೆ ಮಾಡುವವರು ಸ್ವಯಂ ಅಕ್ರಮವೆಸಗಿದಂತಾಗುವುದು. ದೇವಾಜ್ಞೆಗಳನ್ನು ನೀವು ಗೇಲಿ ಮಾಡಬೇಡಿರಿ." (ಅಲ್ ಬಕರಃ: 231)

ಇದ್ದತ್‌ನ ಅವಧಿಯು ಮುಗಿದ ಬಳಿಕ ಪತಿ ಅಥವಾ ಇತರರಿಗೆ ಆಕೆಯ ಮರು ವಿವಾಹವನ್ನು ತಡೆ ಯುವ ಅಧಿಕಾರವಿಲ್ಲ. ಕಾನೂನು ಮತ್ತು ಶಿಷ್ಟಾಚಾರದಂತೆ ಆಕೆಯೂ ವಧು ಅನ್ವೇಷಕನೂ ಪರಸ್ಪರ ಮೆಚ್ಚಿದ್ದರೆ ಅವರ ಬಯಕೆಗೆ ಯಾರೂ ಅಡ್ಡಿ ಬರಬಾರದು.

ಅಜ್ಞಾನ ಕಾಲದ ಅರಬರಲ್ಲಿ ವಿವಾಹ ವಿಚ್ಛೇದಿತ ಪುರುಷನು ವಿಚ್ಛೇದಿತ ಪತ್ನಿಯನ್ನು ತನ್ನ ಹತೋಟಿ ಯಲ್ಲಿರಿಸಿ, ಆಕೆ ಮರು ವಿವಾಹ ವಾಗದಂತೆ ತಡೆಯಲಿಕ್ಕಾಗಿ ಆಕೆಯನ್ನೂ ಆಕೆಯ ಕುಟುಂಬದವರನ್ನೂ ಬೆದರಿಸು ತ್ತಿದ್ದರು. ಈ ಕ್ರಮವನ್ನು ಇಸ್ಲಾಮ್ ಕಟುವಾಗಿ ನಿಷೇಧಿಸಿತು.

ತಲಾಕ್ ಹೇಳಿದಾತನು ವಿವಾಹ ವಿಚ್ಛೇದಿತಳನ್ನು ಮರು ವಿವಾಹವಾಗ ಬಯಸಿ, ಅವರೀರ್ವರೂ ಅದಕ್ಕೆ ಒಪ್ಪಿ ತಮ್ಮ ವೈಮನಸ್ಸನ್ನು ತೊರೆದರೆ, ಆಕೆಯ ಹತ್ತಿರದ ಸಂಬಂಧಿಕರು ಅಥವಾ ಪಾಲಕರು ಅದಕ್ಕೆ ಆತಂಕ ಒಡ್ಡಬಾರದು. ಹಟ ಅಥವಾ ಒಣಜಂಭದಿಂದ ಹಾಗೆ ಅಡ್ಡಿಪಡಿಸುವುದು ಮಹಾ ಪಾಪವಾಗಿದೆ.

ಮಅಕಿಲ್ ಬಿನ್ ಯಸಾರ್ ಹೇಳುತ್ತಾರೆ: ನನಗೆ ಓರ್ವ ಸಹೋದರಿ ಇದ್ದಳು. ಭ್ರಾತೃಜನು ಆಕೆಯ ವಿವಾಹ ಪ್ರಸ್ತಾಪ ಮಾಡಿದನು. ನಾನು ಆಕೆಯನ್ನು ಆತನಿಗೆ ವಿವಾಹ ಮಾಡಿಸಿಕೊಟ್ಟೆ. ಸ್ವಲ್ಪ ಕಾಲದ ದಾಂಪತ್ಯ ಜೀವನದ ಬಳಿಕ ಅವನು ಆಕೆಗೆ ತಲಾಕ್ ಕೊಟ್ಟನು. ಇದ್ದತ್‌ನ ಅವಧಿ ಸಮಿಪಿಸಿದಾಗ ಆಕೆಯನ್ನು ಮರಳಿ ಸ್ವೀಕರಿಸಲೂ ಇಲ್ಲ. ಹೀಗೆ ಇದ್ದತ್ ಕಾಲ ಮುಗಿದ ಬಳಿಕ ಅವರೀರ್ವರಿಗೂ ಪುನಃ ಪ್ರೇಮಾನುರಾಗವುಂಟಾಯಿತು. ಆದ್ದರಿಂದ ಇತರ ವಿವಾಹ ಅನ್ವೇಷಕರ ಜತೆ ಅವರೂ ಬಂದರು. ನಾನು ಕೇಳಿದೆ: "ಹೇ ತಿಳಿಗೇಡಿ! ನಿನ್ನನ್ನು ನಂಬಿ ನಾನು ನಿನಗೆ ನನ್ನ ಸಹೋದರಿಯನ್ನು ವಿವಾಹ ಮಾಡಿಸಿಕೊಟ್ಟೆ. ಹಾಗಿದ್ದರೂ ನೀನು ಸಂಬಂಧವನ್ನು ವಿಚ್ಛೇದಿಸಿದೆ. ಈಗ ಪುನಃ ವಿವಾಹ ಪ್ರಸ್ತಾಪಕ್ಕೆ ಬಂದಿ ದ್ದೀಯಾ? ದೇವನಾಣೆ! ಆಕೆ ಇನ್ನು ನಿನ್ನ ಬಳಿಗೆ ಮರಳಲಾರಳು." ಆ ಬಳಿಕ ಈ ಸಮಸ್ಯೆಗೆ ಸಂಬಂದಿಸಿದ ಕುರ್‌ಆನ್ ವಾಕ್ಯ ಅವತೀರ್ಣಗೊಂಡಿತು. ಆ ಪ್ರಕಾರ ಈ ಹಿಂದೆ ನಾನು ಪ್ರತಿಜ್ಞೆ ಮಾಡಿದ್ದಕ್ಕಾಗಿ ಪ್ರಾಯಶ್ಚಿತ್ತ ನೀಡಿ, ಭ್ರಾತೃಜನನ್ನು ಕರೆಸಿ ಆತನಿಗೆ ಸಹೋದರಿಯನ್ನು ವಿವಾಹ ಮಾಡಿಕೊಟ್ಟೆ.

(ಬುಖಾರಿ, ತಿರ್ಮಿದಿ, ನಸಾಈ)

ಪ್ರಸ್ತುತ ಕುರ್‌ಆನ್ ಹೀಗೆ ಹೇಳಿದೆ: "ನೀವು ಸ್ತ್ರೀಯರಿಗೆ ವಿವಾಹ ವಿಚ್ಛೇದನ ನೀಡಿ ಅವರ ಇದ್ದತ್‌ನ ಕಾಲಾವಧಿ ಮುಗಿದ ಬಳಿಕ ಅವರು ಪರಸ್ಪರ ತೃಪ್ತಿಯಿಂದ ತಾವಿಚ್ಛಿಸುವ ಪತಿಯರನ್ನು ವಿವಾಹವಾಗುವುದಕ್ಕೆ ನೀವು ಅಡ್ಡಿ ನಿಲ್ಲಬೇಡಿರಿ. ಇದು ನಿಮ್ಮಲ್ಲಿನ, ಅಲ್ಲಾಹನಲ್ಲಿಯೂ ಅಂತಿಮ ದಿನದಲ್ಲಿಯೂ ವಿಶ್ವಾಸವಿರಿಸುವವರಿಗೆ ನೀಡಲಾಗಿರುವ ಉಪದೇಶ. ಇದುವೇ ನಿಮಗೆ ಅತಿ ಉಪಯುಕ್ತ ಮತ್ತು ಪಾವನವಾದ ಮಾರ್ಗ. ಅಲ್ಲಾಹನು ತಿಳಿಯುತ್ತಾನೆ. ನೀವು ತಿಳಿಯುವುದಿಲ್ಲ."

(ಅಲ್‌ಬಕರಃ: 232)

ವಸ್ತುಶಃ ಮರುವಿವಾಹಕ್ಕೆ ಇತರೆಲ್ಲರಿಗಿಂತ ಪ್ರಥಮ ಪತಿಯೇ ಅರ್ಹನು.

"ಅವರನ್ನು ಮರಳಿ ಸ್ವೀಕರಿಸಲು ಪತಿಯಂದಿರೇ ಹೆಚ್ಚು ಯೋಗ್ಯರು. ಅವರು ಸಂಬಂಧ ಸುಧಾರಿಸಬಯಸುವು ದಿದ್ದರೆ.!" (ಅಲ್‌ಬಕರಃ: 228) ■



ಇದು ಎಂತಾ ಲೋಕವಯ್ಯ

ವಿಯೋಗ

ಕಾದಂಬರಿ

ಭಾಗ – 1

ಸರಸ ಬಿ. ಕೃಷ್ಣ ಕಮ್ಮರಡಿ

"ಸರಸ ಬಿ. ಕೃಷ್ಣ ಕಮ್ಮರಡಿ ಅವರ ಕಿರುಕಾದಂಬರಿ! ಈ ಸಂಚಿಕೆಯೊಂದಿಗೆ ಆರಂಭಿಸುತ್ತಿದ್ದೇವೆ.

–ಸಂಪಾದಕಿ"

ಅವರನ್ನು ಹೊತ್ತು ತಂದ ಆ ಬಿಳಿ ಮಾರುತಿ ಓಮ್ನಿ ವ್ಯಾನು... ದೊಡ್ಡಾಸ್ಪತ್ರೆಯ ಆವರಣವನ್ನು ಪ್ರವೇಶಿ ಸಿತು. ಎಲ್ಲಿ ನೋಡಿದರೂ ಜನಜಂಗುಳಿ... ಸಾಲಾಗಿ ನಿಲ್ಲಿಸಲ್ಪಟ್ಟ ದ್ವಿಚಕ್ರ ವಾಹನಗಳು... ಕಾರು, ಜೀಪು, ವ್ಯಾನು ಗಳು... 'ಟುಂಯೋ ಟುಂಯೋ' ಅಂತ ಕರ್ಕಶ ದನಿಯಲ್ಲಿ ಅರಚುತ್ತಾ ಒಂದೆಡೆ ರೋಗಿಗಳನ್ನು ಇಳಿಸಿ ಮತ್ತೊಂದೆಡೆ ರೋಗಿಗಳನ್ನೋ ಪರಲೋಕಕ್ಕೆ ಸಂದು ಹೋದವರ ಶವವನ್ನೋ ಸಾಗಿಸುವ ಆಸ್ಪತ್ರೆಯ ತುರ್ತು ವಾಹನಗಳು...!

ವ್ಯಾನಿನವರ ಬಾಡಿಗೆ ಸಂದಾಯ ಮಾಡಿ ಮೈಯ ಲ್ಲೊಂದಿಷ್ಟೂ ತ್ರಾಣವಿರದ ಏಳುವಾಗಲೇ ಮೈ ತೂರಾಡುವ ತಂದೆಯನ್ನು ನಿಧಾನವಾಗಿ ಕೆಳಗಿಳಿಸಿ ಕೈ ಹಿಡಿದು ಮೆಲ್ಲ ಮೆಲ್ಲನೆ ಆಸ್ಪತ್ರೆಯೊಳಗೆ ಕರೆ ತಂದವರು ಮಕ್ಕಳಾದ

ದಾಮೋದರ ಮತ್ತು ಜಗದೀಶ... ಎರಡು ಭಾರವಿರೋ ತುಂಬಿರುವ ಚೀಲಗಳನ್ನು ಹಿಡಿದುಕೊಂಡು ಅವರನ್ನು ಹಿಂಬಾಲಿಸಿ ಹೆಜ್ಜೆ ಹಾಕಿದವರು ತಾಯಿ ಸುಗುಣಮ್ಮ...

ಅಬ್ಬಬ್ಬಾ ದೇವರೇ... ಇದ್ಯಾವ ಸ್ಥಳವಪ್ಪಾ... ಇಲ್ಯಾಕೆ ಮಕ್ಕಳು ನಮ್ಮನ್ನು ಕರೆದುಕೊಂಡು ಬಂದರೋ... ವ್ಯಾಕುಲ ಮನ ದೊಂದಿಗೆ ಕಣ್ಣು ಕಣ್ಣು ಬಿಟ್ಟರು ಸುಗುಣಮ್ಮ... ಹಳ್ಳಿಯಲ್ಲೇ ಹುಟ್ಟಿ ಹಳ್ಳಿಯಲ್ಲೇ ಬೆಳೆದು ಹಳ್ಳಿ ವಾತಾ ವರಣದಲ್ಲೇ ಬದುಕಿ ಬಾಳುತ್ತಿರುವ ಅವರಿಗೆ ನಗರದ ಪರಿಸರ ಅಷ್ಟಾಗಿ ಪರಿಚಯವಿಲ್ಲ... ಕತ್ತಲೆಯ ಕೂಪ ದೊಳಗೆ ತಣ್ಣಗೆ ಯಾರ ಸಂಪರ್ಕವೂ ಇಲ್ಲದಿದ್ದವರನ್ನು ಇದ್ದಕ್ಕಿದ್ದ ಹಾಗೆ ಬೆಳಕಿನ ಪ್ರಖ ರತೆಯತ್ತ ದೂಡಿದಂತಾಗಿತ್ತು ಅವರ ಪರಿಸ್ಥಿತಿ...! ನಿಲ್ಲುವುದಕ್ಕೂ ಬಲ ವಿರದ ಅಪ್ಪ ಪುಟ್ಟಯ್ಯನವರನ್ನು ಹ್ಯಾಗೋ ಜಾಗ ಹುಡುಕಿ ಒಂದೆಡೆ ಮಕ್ಕಳು ಕೂರಿಸಿದರು. ಅಲ್ಲಲ್ಲಿ ಸಾಕಷ್ಟು ಬೆಂಚು, ಕುರ್ಚಿಗಳಿದ್ದರೂ ಎಲ್ಲಿ ನೋಡಿದರೂ ಆಸನ ಖಾಲಿ ಇಲ್ಲ...!

"ಇದೆಲ್ಲಿ...!? ಇಲ್ಯಾಕೆ ಬಂದಿದ್ದು ಮಗಾ...?" ಪಕ್ಕದಲ್ಲಿ ನಿಂತಿದ್ದ ಮಗ ದಾಮೋದರನಲ್ಲಿ ಸಣ್ಣ ದನಿಯಲ್ಲಿ ಕೇಳಿದರು ಸುಗುಣಮ್ಮ.

"ಮತ್ತಿನ್ನಾಕೆ... ಅಪ್ಪನಿಗೆ ಮದ್ದು ಮಾಡಿಸ್ಲಿಕ್ಕೆ...! ಊರಲ್ಲಿ ಡಾಕ್ಟ್ರ ಹೇಳಿದ್ದಾರಲ್ವಾ... ಅಪ್ಪನ ಸೀಕು ಗುಣ ಆಗ್ಬೇಕಾದ್ರೆ ದೊಡ್ಡಾಸ್ಪತ್ರೆಗೇ ಕರ್‍ಕೊಂಡು ಹೋಗ್ಬೇಕೂಂತ... ಅದಕ್ಕೇ ನಾವು ಇಲ್ಲಿಗೆ ಬಂದಿದ್ದು...! ಈ ಸುತ್ತಮುತ್ತಲಿನ ಎಲ್ಲಾ ಊರಿ ನವರೂ ತಮ್ಮೂರಿನಲ್ಲಿ ಯಾವುದೇ ಸಂಕಟ ಕಡಿಮೆ ಆಗದಿದ್ರೆ ಇಲ್ಲಿಗೇ ರೋಗಿಗಳನ್ನು ಕರ್‍ಕೊಂಡು ಬರೋದು...!" ಮಗ ದಾಮೋದರ ತಣ್ಣಗೆ ನುಡಿದ.

ಇನ್ನೊಬ್ಬ ಮಗ ಜಗದೀಶ ಇನ್ನೆಲ್ಲಿಗೆ ಹೋದನೋ... ಆಚೀಚೆ ಕಳವಳದಿಂದ ಕಣ್ಣೋಡಿಸುತ್ತಿದ್ದ ತಾಯಿಯ ಭಾವನೆ ದಾಮೋದರ ನಿಗೆ ಅರ್ಥವಾಗಿರಬೇಕು...

"ಇಲ್ಲಿ ದೊಡ್ಡ ಡಾಕ್ಟ್ರು ಸಿಗೋದು ಅಷ್ಟು ಸುಲಭವಲ್ಲ ಅಬ್ಬೇ... ನಮ್ಮ ಹಾಗಿದ್ದವರು ಎಷ್ಟೆಷ್ಟೋ ಜನ ಇಲ್ಲಿಗೆ ಬರ್‍ತಾರೆ... ಇಲ್ಲಿ ತುಂಬಾ ಹೊತ್ತು ಕಾಯುತ್ತಾ ಕೂರ್‍ಬೇಕು... ಡಾಕ್ಟ್ರಿಲ್ಲಾದ್ರೂ ಬೇಗ ಸಿಕ್ಕಿದರೆ ನಮ್ಮ ಪುಣ್ಯ...! ಏನ್ಮಾಡೋದು ಹೇಳು... ನಮಗೆ ಅಪ್ಪ ಹುಷಾರಾಗಿ ಮೊದಲಿನ ಹಾಗೆ ಆಗೋದು ಮುಖ್ಯ ಅಲ್ವಾ... ಇಲ್ಲಿ ಹೊತ್ತು-ಗೊತ್ತು ದುಡ್ಡು ಖರ್ಚು, ಕಷ್ಟ-ನಷ್ಟ ಲೆಕ್ಕ ಹಾಕೋಕಾಗಲ್ಲ...!

"........"

"ಏನೋ... ಮಕ್ಕಳಾಗಿದ್ದು ಕೊಂಡು ನಮ್ಮ ಕರ್ತವ್ಯ-ಪ್ರಾಮಾ ಣಿಕ ಪ್ರಯತ್ನ ಮಾಡೋದಬ್ಬೇ... ನಾಳೆ ದಿವಸ ಯಾರ್‍ಯಾರೋ ಊರ ಜನ, ನೆಂಟರಿಷ್ಟರು, ಬಂಧು-ಬಳಗದವರು ಪಾಪ... ಪುಟ್ಟಯ್ಯ ನವರಿಗೆ ಇಷ್ಟು ಸೌಖ್ಯ ಇಲ್ಲದಿದ್ದರೂ ಈ ನಮೂನೆ ಕಂಗಾಲಾದರೂ ಮಕ್ಕಳು ಯಾರೂ ಸರಿಯಾಗಿ ನೋಡಿಕೊಳ್ಳಿಲ್ಲ... ಆರೈಕೆ ಮಾಡ್ಲಿಲ್ಲಾಂತ ಕೊಂಕು ಮಾತಾಡ ಬಾರದಲ್ಲಾ... ಇನ್ನು ದೈವೇಚ್ಛೆ ಹ್ಯಾಗಿದೆಯೋ... ಯಾರಿಗೆ ಗೊತ್ತು...!?" ಮಗ ಮಹಾ ವೇದಾಂತಿಯಂತೆ

ನಿಷ್ಪ್ರಯೋಜನ

ಗತ್ತು ಗುತ್ತು
ಸೊತ್ತು
ಇವೆಲ್ಲಾ ಕ್ಷಣಿಕ ಹೊತ್ತು...
ನಿಷ್ಪ್ರಯೋಜನ
ನಾಲ್ವರು ನಮ್ಮ
ಕೊಂಡು ಹೋದಾಗ
ಹೊತ್ತು...

ಜಲೀಲ್ ಮುಕ್ರಿ

ಹೇಳಿದಾಗ ತಾಯಿಯೂ ಹೌದೆಂದು ತಲೆದೂಗಿದರು.

ಜಗದೀಶ ಪೆನ್ನು-ಕಾಗದ ಹಿಡಿದು ಅತ್ತಿಂದಿತ್ತ ಗಡಿಬಿಡಿಯಲ್ಲಿ ಓಡಾಡುತ್ತಿದ್ದ.

"ಅಬ್ಬೇ... ಅಬ್ಬೇ... ಬಾ... ಬಾ ಬೇಗ... ಇಲ್ಲಿ ಜಾಗ ಇದೆ...!" ಅಪ್ಪನನ್ನು ಕೂರಿಸಿಕೊಂಡಲ್ಲಿ ಖಾಲಿ ಆಸನ ದೊರೆತಾಗ ಅದರ ಮೇಲೆ ತನ್ನ ಕೈ ಚೀಲವನ್ನಿಟ್ಟು ಮಗ ದೊಡ್ಡ ದನಿಯಲ್ಲಿ ಕರೆದಾಗ "ಅಬ್ಬಾ... ಬದುಕಿದೆ. ನಿಂತು ನಿಂತೂ ಕಾಲು ಬಿದ್ದು ಹೋಗುವ ಹಾಗಾಗಿತ್ತು...! ಅಂತ ಮನದಲ್ಲಿ ಎಣಿಸಿಕೊಂಡ ಸುಗುಣಮ್ಮ ಬೇಗನೇ ಹೋಗಿ ತಾವು ಹಿಡಿದುಕೊಂಡ ಚೀಲಗಳೊಂದಿಗೆ ಪತಿ ಪುಟ್ಟಯ್ಯ ನವರ ಸಮೀಪದಲ್ಲಿ ಆಸೀನರಾದರು.

ಅಯ್ಯೋ... ಇಲ್ಲಿ ಕಾಣುವ ದೃಶ್ಯಗಳು... ಅದೆಷ್ಟು ಭೀಕರ-ಭಯಾನಕ...! ಕೈ ಕಾಲು ಮುರಿ ದವರು, ಒಂದಲ್ಲಾ ಒಂದು ಬೇನೆ ಯಲ್ಲಿ ನರಳುವವರು, ದೇಹದ ಬೇರೆ ಬೇರೆ ಭಾಗಕ್ಕೆ ಬ್ಯಾಂಡೇಜೋ ಬೆಲ್ಟೋ ಬಿಗಿದುಕೊಂಡವರು. ಕೆಲ ವರು ಸ್ಟ್ರೆಚರ್ ಅನ್ನೋ ತಳ್ಳು ಮಂಚದ ಮೇಲೆ ಮಲಗಿಕೊಂಡೇ ಬಂದರು. ಇನ್ನು ಕೆಲವರು 'ಕಿರ್‍ರೋ' ಅಂತ ಸದ್ದು ಮಾಡುವ ಗಾಲಿ ಕುರ್ಚಿಗಳಲ್ಲಿ ಆಗಮಿಸಿದರು. ಕಷ್ಟ ಪಟ್ಟು ದೇಹವನ್ನೆಳೆದುಕೊಂಡು ಜೊತೆಗಿದ್ದವರ ಸಹಾಯದಿಂದ ನಡೆದುಕೊಂಡೇ ಬಂದವರಿದ್ದರು. ನೋವು-ವೇದನೆಗಳ ಹಲವು ಬಗೆಯ ದರ್ಶನ... ರಕ್ತ ಸಿಕ್ತವಾದ ಮೈಯ ಜೋರಾಗಿ ಕೈಕಾಲು ಬಡಿದುಕೊಂಡು ಅಳುತ್ತಾ ಬೊಬ್ಬಿಡುತ್ತಿದ್ದ ಸ್ತ್ರೀಯೊಬ್ಬ ಳನ್ನು ಅವಸರದಿಂದಲೇ ನಾಲ್ಕು ಜನ ಹೊತ್ತುಕೊಂಡೇ ಬಂದರು. ಅವಳ ನೆತ್ತರಿಳಿಯುವ ಮೈ ನೋಡಿಯೇ ಸುಗುಣಮ್ಮನವರಿಗೆ ತಲೆ ತಿರುಗು ವಂತಾಯ್ತು... ಹೆದರಿಕೆಯಿಂದಲೋ ಬೇಸರದಿಂದಲೋ ಸೆರಗಿನಿಂದ ಮುಖ

ಮುಚ್ಚಿಕೊಂಡರು...!

"ಅಣ್ಣಾ... ನಾವೀಗ ಕೆ- 3ಕ್ಕೆ ಹೋಗಬೇಕಂತೆ...! ಅಪ್ಪನನ್ನು ನೋಡ ಬೇಕಾಗಿರೋ ಡಾ। ಶೆಟ್ಟಿಯವರು ಸಿಗೋದು ಅಲ್ಲಿಯಂತೆ...!" ಜಗದೀಶ ಬಂದು ಎಲ್ಲರನ್ನೂ ಎಬ್ಬಿಸಿ ಕರೆದು ಕೊಂಡು ಹೊರಟ... ಒಂದಷ್ಟು ದೂರ ಕಾಲು ನಡಿಗೆ ಆಮೇಲೆ 'ಲಿಫ್ಟ್' ಅನ್ನೋ ಮಹಡಿಗಳ ಮೇಲೇರ ಲಿಕ್ಕಿರುವ ತೊಟ್ಟಿಲು... ಎಲ್ಲರನ್ನೂ ಹೊತ್ತು ತಂದು ಕೆ- 3 ವಿಭಾಗದಲ್ಲಿ ತಂದು ಬಿಟ್ಟಿತು. ಇಲ್ಲೂ ಅಷ್ಟೆ... ಸಾಲಾಗಿ ಹಾಕಲ್ಪಟ್ಟ ಕುರ್ಚಿಗಳು... ವೈದ್ಯರ ಭೇಟಿಗಾಗಿ ಬಂದು ಕಾದು ಕುಳಿತ ಹಲವಾರು ರೋಗಿಗಳು-ಪರಿವಾರದ ಸದಸ್ಯರು... ಇನ್ನು ಇಲ್ಲಿ ಎಷ್ಟು ಹೊತ್ತು ಇರಬೇಕೋ... ಮಕ್ಕಳು ಮಾತಾಡುತ್ತಿದ್ದ ರೀತಿ ಅದರೊಳಗೆ ಕೇಳಿ ಬರುವ ವಾಕ್ಯಗಳು ಏನೆಂಬುದೇ ಸುಗುಣಮ್ಮನಿಗೆ ಅರ್ಥವಾಗಲಿಲ್ಲ...!

"ಫೈಲ್ ಮೂವ್ ಆಗೋದಕ್ಕೇ ಇನ್ನೂ ಬಹಳ ಹೊತ್ತು ಬೇಕು...! ನಾನಲ್ಲಿ ಒಳಗೆ ಹೋಗಿ ಕೇಳಿ ಬಂದೆ... ಇಲ್ಲಿ ಸುಮ್ಮನೇ ಕೂತು ಕಾಲ ಕಳೆಯಬೇಕಷ್ಟೇ...!" ಅಣ್ಣ-ತಮ್ಮ ಮಾತಾಡಿಕೊಂಡರು. "ಅಪ್ಪಾ... ನಿಮಗೆ ಕುಡಿಯುವುದಕ್ಕೇನಾದರೂ ಬೇಕಿತ್ತಾ...? ಹಸಿವೆ ಆಗ್ತಿದಿಯಾ...?" ಮಕ್ಕಳಿಬ್ಬರೂ ವಿಚಾರಿಸಿಕೊಂಡರೂ ಗಂಟಲು ಊದಿಕೊಂಡು ಉಗುಳು ನುಂಗುವುದಕ್ಕೇ ಆಗದೇ ಇರೋ ತಂದೆ ಪುಟ್ಟಯ್ಯ ಇನ್ನೇನಂದಾರು...? 'ಬೇಡ'ವೆಂದೇ ತಲೆ ಅಲ್ಲಾಡಿಸಿದರು.

"ಬೆಳಿಗ್ಗೆ ಕಾಫಿ ಜೊತೆಗೆ ತಿಂದ 'ಕೊಟ್ಟಿಗೆ' ಎಲ್ಲೋ ಹೊಟ್ಟೆಯೊಳಗೆ ಭಸ್ಮವಾಗಿ ಹೋಗಿದೆ... ಹಸಿವೆ ಆಗ್ತಿದೆ..! ಬಾ ಅಣ್ಣಾ... ಇಲ್ಲಿ ಕ್ಯಾಂಟೀನ್ ಎಲ್ಲುಂಟೋ... ಗೊತ್ತಿಲ್ಲ.. ಒಮ್ಮೆ ಹೋಗಿ ಬರುವಾ... ಬಾ...!" ಅಣ್ಣ ದಾಮೋದರ ತಮ್ಮನೊಂದಿಗೆ ಹೊರಟ.

ನೆನಪಾಗಲಿಲ್ಲವೋ... ಗಡಿಬಿಡಿ ಯಾಯ್ತೋ... ತಾಯಿಗೇನಾದರೂ ಬೇಕಿತ್ತಾ... ಬಚ್ಚಲು ಮನೆಗಾದ್ರೂ ಹೋಗ್ಬೇಕಿತ್ತೇನೋ... ಅಂತ ಕೇಳುವ ಸೌಜನ್ಯ ಮಕ್ಕಳು ತೋರಿಸಲಿಲ್ಲ... ಸುಗುಣಮ್ಮ ಹೇಳಲೂ ಇಲ್ಲ... ಚೀಲದೊಳಗಿಂದ ನೀರಿನ ಕುಪ್ಪಿ (ಬಾಟಲಿ) ತೆಗೆದು ಮುಚ್ಚಳ ತೆಗೆದು ಸ್ವಲ್ಪ ನೀರು ಕುಡಿದು ಗಂಟಲು ಒದ್ದೆ ಮಾಡಿಕೊಂಡರು. ಕೂತು ಕೂತು ಸಾಕಾಗಿ ತನ್ನ ಭುಜದ ಮೇಲೆ ತಲೆಯೊರಗಿಸಿದ ಗಂಡನ ವದನವನ್ನೇ ನೋಡಿದರು. ಪಾಪ... ಹಸಿವಾಗ್ತಿದೆಯೋ ಏನೋ... ಚೀಲದೊಳಗಿದ್ದ ಹಣ್ಣುಗಳು ನೆನಪಿಗೆ ಬಂದವು.

"ಚಿತ್ರುಪುಳಿ(ಕಿತ್ತಲೆ ಹಣ್ಣು) ಇದೆ... ತೊಳೆ ಬಿಡಿಸಿ ಕೊಡಲೇ... ತಿನ್ತೀರಾ...!? ನಯವಾಗಿ ಪತಿ ಯನ್ನು ಕೇಳಿದರೂ 'ಉಹೂಂ' ಅನ್ನೋ ಉತ್ತರವಷ್ಟೇ ಸಿಕ್ಕಿತು.

ಮನೆಯಿಂದ ಹೊರಟಿದ್ದು ಬೆಳಗಿನ ಜಾವ... ಸೊಸೆ ಪದ್ಮಾವತಿ ಕೊಟ್ಟ ಎರಡು 'ಕೊಟ್ಟಿಗೆ'ಯ ತುಂಡು ತಿಂದು ಕಾಫಿ ಕುಡಿದಿ ದ್ದೆಷ್ಟೋ... ಅಷ್ಟೇ...! ಆಗ ಮನ ದೊಳಗೆ ದುಗುಡವಿದ್ದುದರಿಂದ ಏನೂ ಬೇಡವೆನಿಸಿದರೂ ಈಗ ಹೊಟ್ಟೆ ಚುರುಗುಟ್ಟುತ್ತಿರುವಾಗ ಏನು ಮಾಡೋದು... ಉದರ ದೈವ ಕ್ಕಿಂತ ಮಿಗಿಲಾದ ದೇವರುಂಟೇ...? ಕೊನೇ ಪಕ್ಷ ಹಣ್ಣಾದರೆ ಹಣ್ಣು... ಚೀಲ ದಿಂದ ತೆಗೆದ ಹಣ್ಣಿನ ಸಿಪ್ಪೆ ಬಿಡಿಸಿ ಒಂದೊಂದೇ ಸೊಳೆ ಬಾಯಿಗಿಟ್ಟರು... ಹಣ್ಣು ಒಳಗೆ ಹೋಗುತ್ತಿದ್ದಂತೆಯೇ ಬಳಲಿದ ದೇಹದಲ್ಲೊಂದಿಷ್ಟು ಶಕ್ತಿ ಸಂಚಾರವಾಗಿ 'ಉಸ್ಸಪ್ಪಾ..' ಅಂತ ಉಸಿರು ಬಿಡುವಂತಾಯ್ತು!

ಪಾಪ... ಸುಗುಣಮ್ಮ ಹೊರ ಜಗತ್ತಿನ ವ್ಯವಹಾರ ಜ್ಞಾನವಿಲ್ಲದ ಅಮಾಯಕ ಗೃಹಿಣಿ... ಮನೆ ವಾರ್ತೆ ಸರಿದೂಗಿಸಿಕೊಂಡು ಹೋಗುವುದಷ್ಟೇ ಅವರಿಗೆ ತಿಳಿದಿರುವುದು... ಹೆಚ್ಚಿನ ವಿಚಾರ ಗಳತ್ತ ತಲೆ ಹಾಕಬೇಕಾದ ಅಗತ್ಯವೂ ಅವರಿಗಿರಲಿಲ್ಲ. ಪ್ರತಿ ಯೊಂದು ವಹಿವಾಟಲ್ಲೂ 'ಹುಲಿ' ಯಂತೆ ದರ್ಪ, ಪ್ರತಿಷ್ಠೆಯಿಂದ ಕಾರ್ಯ ನಿರ್ವಹಿಸುತ್ತಿದ್ದ ಗಂಡ ಪುಟ್ಟಯ್ಯನವರು... ಎಲ್ಲದಕ್ಕೂ ಅವರ ಸಹವರ್ತಿಯಾಗಿ ಜೊತೆಗೇ ಇದ್ದು ಸಹಕರಿಸುತ್ತಿದ್ದ ಮಗ ದಾಮೋದರ... ಏನು ಹೇಳುವು ದಿದ್ದರೂ ಮಾಡುವುದಿದ್ದರೂ ಅವರೊಂದು ಮೂಕ ಪಶುವಿನ ಸಮಾನ. 'ಅವಳಿಗೇನು ಗೊತ್ತಾಗು ತ್ತದೆ...!?" ಅನ್ನೋ ಅಸಡ್ಡೆಯೋ ಅನಾದರವನ್ನೋ ವ್ಯಕ್ತಪಡಿಸುವ ತಂದೆ-ಮಕ್ಕಳು...! ಬಾಯಿಬಾರದ ಜಾನುವಾರುಗಳು ಇನ್ನೇನು ಮಾಡಿ ಯಾವು... ಕುತ್ತಿಗೆಗೆ ಹಗ್ಗ ಬಿಗಿದು ಎಳೆದುಕೊಂಡು ಹೋಗುವವರು ಎಲ್ಲಿಗೆ ಕರೆದೊಯ್ಯುತ್ತಾರೋ ಅಲ್ಲಿಗೇ ಹೋಗಬೇಕಾಗಿದ್ದದ್ದು ತಾನೇ? ಅವುಗಳಿಗೆ ಮಾತಾಡಲು ಬಾಯಿ ಬರೋದಿಲ್ಲ... ಆದರೂ ಒಮ್ಮೊಮ್ಮೆ ನೋವಾದಾಗಲಾದರೂ ವಿರೋಧ ಪ್ರತಿಭಟನೆ ವ್ಯಕ್ತಪಡಿಸಿ ದಾವೋ ಏನೋ... ಆದರೆ ಸುಗುಣಮ್ಮನಂತವರಿಗೆ ಬಾಯಿ ಬಂದರೂ ತೆರೆದು ಮಾತಾಡು ವುದಕ್ಕೇ 'ಹಾಗಲ್ಲ ಹೀಗೆ' ಅನ್ನುವು ದಕ್ಕೆ ಎಲ್ಲಿದೆ ಸಂದರ್ಭ-ಅವಕಾಶ... ಏನು ಹೇಳಿದರೂ ನಿನಗೇನು ಗೊತ್ತು... ಸುಮ್ಮನೇ ಬಾಯಿ ಮುಚ್ಕೊಂಡು ಇರು..! ಅನ್ನೋ ಕುಹಕ-ಅಣಕ ಗಂಡು ಮಕ್ಕಳಿಂದ ಸಿಗುವುದಂತೂ ಇದ್ದಿದ್ದೇ... ಆದುದರಿಂದ ಹೇಳಿದ ಕೆಲಸ-ಹಾಕಿದ ಊಟ ಅನ್ನೋ ಧೋರಣೆಗೆ ಒಗ್ಗಿಕೊಂಡೇ ಇಲ್ಲಿಯ ತನಕ ನಿರ್ಲಿಪ್ತವಾಗಿ ಬಾಳ ಪಯಣದ ಸುದೀರ್ಘ ಹಾದಿಯನ್ನು ಸವೆಯಿಸಿದ ಬಾಳ ಸಂಜೆಯನ್ನು ಅನುಭವಿಸು ತ್ತಿರುವ ಸರ್ವ ಸಾಮಾನ್ಯ ಮಹಿಳೆ... ಪುರುಷ ಪ್ರಧಾನ ಸಮಾಜದಲ್ಲಿ ಇನ್ನೇನು ನಿರೀಕ್ಷೆ ಇಟ್ಟುಕೊಳ್ಳಲು ಸಾಧ್ಯ...!?

[ಮುಂದಿನ ಸಂಚಿಕೆಗೆ...]



ಅತಿ ಯಾಕೆ? ಮಿತಿ ಇರಲಿ!

ಸಮೀನ ಅಫ್ಶಾನ್
ಮಂಗಳೂರು

ಒಮ್ಮೆ ಪ್ರವಾದಿಯವರ(ಸ) ಮನೆಗೆ ಮೂವರು ಭೇಟಿ ಕೊಟ್ಟರು. ಪ್ರವಾದಿಯವರು ಮನೆಯಲ್ಲಿರಲ್ಲ. ಅವರ ಪತ್ನಿಯೊಡನೆ ಪ್ರವಾದಿಯವರ ಆರಾಧನೆಗಳ ಕುರಿತು ವಿಚಾರಿಸಿದರು. ಅದನ್ನು ಅರಿತಾಗ ಅವರಿಗೆ ತಾವು ಇನ್ನೂ ಹೆಚ್ಚು ಸತ್ಕರ್ಮಗಳನ್ನು ಮಾಡಬೇಕಾಗಿದೆ ಎಂದು ತೋರಿ, ಬಹಳ ಕಠಿಣವಾದ ತೀರ್ಮಾನಗಳನ್ನು ಮಾಡಿಬಿಟ್ಟರು. ಅವರಲ್ಲಿ ಒಬ್ಬರು ಸಂಪೂರ್ಣ ರಾತ್ರಿಯನ್ನು ದೇವಾರಾಧನೆಯಲ್ಲಿ ಕಳೆಯಲು ನಿರ್ಧರಿಸಿದರೆ ಇನ್ನೊಬ್ಬರು ಪ್ರತಿದಿನ ಉಪವಾಸ ಆಚರಿಸುವೆನೆಂದು ತೀರ್ಮಾನಿಸಿದರು. ಮೂರನೆಯವರು ತಾನು ವಿವಾಹವಾಗುವುದೇ ಇಲ್ಲ ಎಂಬ ಪಣ ತೊಟ್ಟರು. ಪ್ರವಾದಿ(ಸ)ಯವರಿಗೆ ಈ ವಿಷಯ ತಿಳಿದಾಗ ಆ ಮೂವರನ್ನು ಕರೆಸಿ ಅವರ ತೀರ್ಮಾನಗಳ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ ಹೀಗೆಂದರು, "ಖಂಡಿತವಾಗಿಯೂ ನಿಮಗಿಂತ ಹೆಚ್ಚು ಅಲ್ಲಾಹನನ್ನು ಭಯಪಡುವವನು ನಾನಾಗಿದ್ದೇನೆ. ನಾನು ರಾತ್ರಿಯ ಕೆಲವು ಭಾಗ ಆರಾಧನೆಯಲ್ಲಿ ಕಳೆದರೆ ಇನ್ನು ಕೆಲವು ಭಾಗ ಸುಖ ನಿದ್ರೆಯಲ್ಲಿ ಕಳೆಯುತ್ತೇನೆ. ಕೆಲವೊಮ್ಮೆ ಉಪವಾಸ ಆಚರಿಸಿದರೆ ಕೆಲವೊಮ್ಮೆ ತೊರೆಯುತ್ತೇನೆ ಮತ್ತು ನಾನು ವಿವಾಹ ಕೂಡ ಆಗಿದ್ದೇನೆ. ಧರ್ಮದಲ್ಲಿ ನನ್ನ ಚರ್ಯೆಯನ್ನು ತೊರೆಯುವವನು ನನ್ನವನಲ್ಲ." ದೇವಾರಾಧಾನೆಯಂತಹ ಅತ್ಯುತ್ತಮ ಕರ್ಮದಲ್ಲೂ ಅತಿರೇಕ ಸಲ್ಲದು ಎಂಬ ಮಹತ್ವವಾದ ಬೋಧನೆಯನ್ನು ನೀಡಿದ ಪ್ರವಾದಿ(ಸ) ಜೀವನದ ಪ್ರತಿಯೊಂದು ಕಾರ್ಯದಲ್ಲೂ ಸಮತೋಲನವನ್ನು ಕಾಪಾಡುವ ತಾಕೀತು ಮಾಡಿದ್ದಾರೆ.

ಅತಿಯಾದರೆ ಅಮೃತವೂ ವಿಷವಂತೆ. ಇತಿ ಮಿತಿಯ ಮೇರೆಯೊಳಗಿರುವುದು ಯುಕ್ತಿವಂತರ ಲಕ್ಷಣವಂತೆ. ಬಹಳ ಸತ್ಯವಾದ ಮಾತಿದು. ಯಾವುದರಲ್ಲೇ ಆಗಲಿ ಮಿತಿಮೀರಿದರೆ ಸಮಸ್ಯೆಗಳು ಕಟ್ಟಿಟ್ಟ ಬುತ್ತಿ. ಸಮತೋಲನದ ಜೀವನದಿಂದ ಸುಖ ಶಾಂತಿ ಲಭ್ಯವಾಗುತ್ತದೆ. ಸಂತುಲಿತ ಚಿಂತನೆಯಿಂದ ಒಂದು ಸ್ವಸ್ಥ ಸಮಾಜದ ನಿರ್ಮಾಣವಾಗುತ್ತದೆ. ಭೌತಿಕ ಸಂಪತ್ತುಗಳ ಬೆಂಬತ್ತುವಲ್ಲಿ ಅತಿರೇಕ ಮಾಡುವವರು ಅಧಿಕ ಸಂಖ್ಯೆಯಲ್ಲಿ ನಮ್ಮ ಸಮಾಜದಲ್ಲಿದ್ದಾರೆ. ಹೆಚ್ಚೆಚ್ಚು ಸಂಪಾದಿಸುವ ಭರದಲ್ಲಿ ಜೀವನದ ಸಮತೋಲನವನ್ನೇ ಕಾಪಾಡಲಾಗದ ದೌರ್ಭಾಗ್ಯವಂತರು ಅವರು. ಸಂಪತ್ತು ಎಂಬುದು ಜೀವನದ ಸುಖ ಶಾಂತಿಯನ್ನು ಕಾಪಾಡುವ ಮುಖ್ಯ ಸಾಧನಗಳಲ್ಲಿ ಒಂದು ಎಂಬುದರಲ್ಲಿ ಸಂಶಯವಿಲ್ಲ. ಆದರೆ ಸಂಪತ್ತೇ ಜೀವನವೆಂಬುದು ಕೂಡ ಸತ್ಯಕ್ಕೆ ದೂರವಾದ ಮಾತು. ಕೆಲವೊಮ್ಮೆ ಹಣ ಗಳಿಸುವ ಭರದಲ್ಲಿ ಆರೋಗ್ಯವನ್ನು ನಿರ್ಲಕ್ಷಿಸಲಾಗುತ್ತದೆ. ಆರೋಗ್ಯ ಹದಗೆಟ್ಟಿದ ನಂತರ ಅದನ್ನು ಸುಧಾರಿಸುವಲ್ಲಿ ಸಂಪತ್ತೆಲ್ಲ ವ್ಯಯವಾಗುತ್ತದೆ. ಕೆಲವೊಮ್ಮೆ ಕುಟುಂಬಕ್ಕಾಗಿ ಸಂಪಾದಿಸುವ ಮತ್ತಿನಲ್ಲಿ ಕುಟುಂಬವನ್ನೇ ನಿರ್ಲಕ್ಷಿಸಲಾಗುತ್ತದೆ. ಹಣವಂತರಾದ ಮೇಲೆ ಕುಟುಂಬವೇ ಕೈಬಿಟ್ಟು ಹೋಗಿರುತ್ತದೆ.

ಹೀಗೆ ನಾವು ಜೀವನದಲ್ಲಿ ಸಂತುಲಿತತೆ ಕಳೆದುಬಿಟ್ಟಾಗಲೆಲ್ಲ ತುಂಬಲಾರದ ನಷ್ಟಗಳನ್ನು ಅನುಭವಿಸಬೇಕಾದೀತು. ಸೇವಿಸುವ ಆಹಾರದ ಪ್ರಮಾಣ ಮಿತಿಯೊಳಗಿದ್ದರೆ ಆಯುರಾರೋಗ್ಯವು ವೃದ್ಧಿಸುತ್ತದೆ. ಅದೇ ಆಹಾರ ಮಿತಿಮೀರಿದಾಗ ದೇಹಕ್ಕೆ ಹಾನಿಕಾರಕವಾಗುತ್ತದೆ. ಒಂದಿಷ್ಟು ಸಿಹಿಯು ನಮ್ಮ ಶರೀರಕ್ಕೆ ಅತ್ಯಗತ್ಯವಾದರೆ, ಸಿಹಿ ಅಧಿಕವಾದರೆ ಅನಾರೋಗ್ಯ ಪೀಡಿತರಾಗುತ್ತೇವೆ. ಒಂದಿಷ್ಟು ಉಪ್ಪಿನಂಶವು ಶರೀರಕ್ಕೆ ಅನಿವಾರ್ಯವಾದರೆ, ಅದು ಅಧಿಕವಾದಾಗ ಕ್ರಮೇಣ ಮೂಳೆಗಳು ಕೊಳೆತುಹೋಗುತ್ತವೆ. ಕೆಲಸ

ಮಾಡುವಾಗ ಒಂದಿಷ್ಟು ಒತ್ತಡವಿದ್ದರೆ ಅದು ಕೆಲಸವನ್ನು ಪೂರ್ತಿಗೊಳಿಸುವ ಪ್ರೇರಕ ಶಕ್ತಿಯಾಗುತ್ತದೆ. ಆದರೆ ಅದೇ ಒತ್ತಡ ಮಿತಿಮೀರಿದರೆ ಮೆದುಳಿನ ರಕ್ತಸ್ರಾವದಲ್ಲಿ ಅಂತ್ಯವಾದೀತು. ಮಳೆಯು ಮಿತಿಯೊಳಗೆ ವರ್ಷಿಸಿದರೆ ಪರಿಸರವು ಹರಿದ್ವರ್ಣವಾಗಿ ಕಂಗೊಳಿಸಿ, ಸುಭಿಕ್ಷೆ ಮತ್ತು ಸಮೃದ್ಧಿಯನ್ನು ಹೊತ್ತು ತರುತ್ತದೆ. ಆದರೆ ಅದೇ ಮಳೆಯ ಆರ್ಭಟವು ಮಿತಿಮೀರಿದರೆ ಸರ್ವನಾಶವಾಗಿ ಬಿಡುತ್ತದೆ.

ಹಾಗಾಗಿ ಸಂತುಲನೆ ಸರ್ವ ಕಾರ್ಯದಲ್ಲೂ ಅತ್ಯಗತ್ಯ. ಪ್ರತಿಯೊಂದು ವಿಷಯದಲ್ಲೂ ಒಂದು ಸುಮಧ್ಯ ನಿಲುವು ಇರಬೇಕು. ಪ್ರತಿಯೊಂದು ಒಳಿತಿನ ಗುಣಕ್ಕೆ ಎರಡು ಕೆಡುಕಿನ ಧ್ರುವಗಳಿರುತ್ತವೆ. ಉದಾಹರಣೆಗೆ, 'ಔದಾರ್ಯ' ಎಂಬ ಗುಣವು 'ಜಿಪುಣತೆ' ಮತ್ತು 'ದುಂದುವೆಚ್ಚ' ಎಂಬ ಎರಡು ಕೆಡುಕುಗಳ ಮಧ್ಯದಲ್ಲಿ ಇರುವಂತಹ ಒಳಿತು. 'ಧೈರ್ಯ' ಎಂಬ ಗುಣವು 'ಹೇಡಿತನ' ಮತ್ತು 'ಹುಚ್ಚು ಸಾಹಸ' ಎಂಬ ಕೆಡುಕುಗಳ ಮಧ್ಯದಲ್ಲಿ ಇರುವಂತಹ ಒಳಿತು.

ಧರ್ಮವನ್ನು ಅರಿಯುವುದರಲ್ಲಿ ಕೂಡಾ ಈ ಸಂತುಲನೆ ಅವಶ್ಯಕ. ಇಂದು ಒಂದೇ ದೇಶದ ಪ್ರಜೆಗಳು ಮತ್ತು ಒಂದೇ ಸಮುದಾಯದ ಬಾಂಧವರ ಮಧ್ಯೆ ತಪ್ಪು ತಿಳುವಳಿಕೆ, ದ್ವೇಷ, ಮತ್ಸರ ಇತ್ಯಾದಿಗಳು ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಕಂಡು ಬರುತ್ತಿದೆ ಎಂದಾದರೆ ನಮ್ಮ ಚಿಂತನೆಗಳಲ್ಲಿ ಸಂತುಲಿತತೆ ಮಾಯವಾಗಿರುವುದೇ ಅದಕ್ಕೆ ಕಾರಣ. ಧಾರ್ಮಿಕ ವಿಧಿಗಳ ಸರಿಯಾದ ತಾತ್ಪರ್ಯ ಅರಿಯುವ ಗೋಜಿಗೆ ಹೋಗದೆ ತಾವು ಮಾಡುವ ಅತಿರೇಕಗಳು ತಮ್ಮ ಧಾರ್ಮಿಕ ಕರ್ತವ್ಯವಾಗಿದೆ ಎಂಬ ಅಪಾಯಕಾರಿ ಚಿಂತನೆಗಳೇ ಮನುಷ್ಯರ ಮಧ್ಯೆ ನಂಬಿಕೆ ಇಲ್ಲದಂತೆ ಮಾಡಿದೆ.

ಇಹ ಮತ್ತು ಪರಗಳ ಗಳಿಕೆಯಲ್ಲಿ ಕೂಡಾ ಸಮತೋಲನ ಕಾಪಾಡಬೇಕೆಂದು ಬೋಧಿಸುತ್ತಾ ಪವಿತ್ರ ಕುರ್‌ಆನ್ ಹೀಗೆನ್ನುತ್ತದೆ, "ಅಲ್ಲಾಹನು ನಿನಗೆ ನೀಡಿರುವ ಸಂಪತ್ತಿನಿಂದ ನೀನು ಪರಲೋಕ ಗೃಹ ನಿರ್ಮಾಣ ಮಾಡುವ ಕುರಿತು ಚಿಂತಿಸು ಮತ್ತು ಇಹಲೋಕದಿಂದಲೂ ನಿನ್ನ ಪಾಲನ್ನು ಮರೆಯಬೇಡ." (ಕುರ್‌ಆನ್: 28–77) ■

ಧರ್ಮನಿಷ್ಠರಿಗೆ ವಾಗ್ದಾನ ಮಾಡಲಾಗಿರುವ ಆ ಸ್ವರ್ಗದ ವಿಶೇಷತೆಯೇನೆಂದರೆ ಅದರಲ್ಲಿ ತಿಳಿನೀರಿನ ಕಾಲುವೆಗಳು ಹರಿಯುತ್ತಿರುವುವು, ಸ್ವಲ್ಪವೂ ರುಚಿ ಬದಲಾಗಿರದಂತಹ ಹಾಲಿನ ಕಾಲುವೆಗಳು ಹರಿಯುತ್ತಿರುವುವು. ಕುಡಿಯುವವರಿಗೆ ಅತ್ಯಂತ ರುಚಿಕರವಾಗಿರುವ ಮದಿರೆಯ ಕಾಲುವೆಗಳು ಹರಿಯುತ್ತಿರುವುವು, ಅತ್ಯಂತ ತಿಳಿಯಾದ ಜೇನಿನ ಕಾಲುವೆಗಳು ಹರಿಯುತ್ತಿರುವುವು. ಅದರಲ್ಲಿ ಅವರಿಗಾಗಿ ಎಲ್ಲ ಬಗೆಯ ಫಲಗಳಿರುವುವು ಮತ್ತು ಅವರ ಪ್ರಭುವಿನ ಕಡೆಯಿಂದ ಕ್ಷಮೆ ಇರುವುದು. (ಇಂತಹ ಸ್ವರ್ಗ ಯಾರ ಪಾಲಿಗೆ ಬರಲಿದೆಯೋ ಅವನು) ಸದಾಕಾಲ ನರಕದಲ್ಲೇ ವಾಸಿಸಲಿರುವ ಮತ್ತು ಕರುಳುಗಳನ್ನು ಕತ್ತರಿಸಿ ಬಿಡುವಂತಹ ಕುದಿಯುವ ನೀರನ್ನು ಕುಡಿಸಲ್ಪಡಲಿರುವ ಜನರಿಗೆ ಸಮಾನನಾಗಬಲ್ಲನೇ?

(ಪವಿತ್ರ ಕುರ್‌ಆನ್ 47: 15)

Mohammed Sadik
9972524486

Tel : 0836-4251564

Baig's
BEST CHICKEN Since : 1977

We undertake free Home Delivery Service

House of Farm Fresh Broiler Chicken
Wholesale & Retail Chicken Shop

Opp. Jamiya Masjid, Near C.B.T., Azad Road, HUBLI - 580 020

ವೈದ್ಯರೊಂದಿಗೆ

ಡಾ। ಮಿನಿಲ ಚೆರಿಯನ್

ಮಹಿಳೆಯರೇ... ಬಹಳ ಬ್ಯುಸಿಯಾ... ರೋಗ ಬರಬಹುದು

ನಗರದ ಒಂದು ಪ್ರಸಿದ್ಧ ಆಸ್ಪತ್ರೆಯಲ್ಲಿ ಶೀಬ ನರ್ಸ್ ಆಗಿ ಕೆಲಸ ನಿರ್ವಹಿಸುತ್ತಿದ್ದಳು. ಎರಡು ಹೆಣ್ಣು ಮಕ್ಕಳು. ಪತಿ ವಿದೇಶದಲ್ಲಿ. ಆಸ್ಪತ್ರೆಯ ಹಿರಿಯ ನರ್ಸ್ ಈಕೆ. ಚುರುಕಾಗಿ ಓಡಾಡಿಕೊಂಡು ಎಲ್ಲ ಕೆಲಸಗಳನ್ನು ಶ್ರದ್ಧೆಯಿಂದ ಮಾಡಿ ಮುಗಿಸುವುದು ಇವಳ ಅಭ್ಯಾಸ. ಆದರೆ ಇತ್ತೀಚೆಗೆ ಕೆಲವು ಸಮಸ್ಯೆಗಳು. ನಿರಂತರ ಆಯಾಸವಾದ ಅನುಭವ. ಇದರ ಪ್ರಥಮ ಲಕ್ಷಣ, ಯಾವುದರಲ್ಲೂ ಆಸಕ್ತಿ ಇಲ್ಲದಿರುವುದು. ಎಷ್ಟು ಆಯಾಸವಾಗಿದ್ದರೂ ಮಲಗಿದರೆ ನಿದ್ದೆಯೂ ಬರುವುದಿಲ್ಲ. ಆಹಾರ ಸೇವಿಸಲೂ ಮನಸ್ಸಿಲ್ಲ. ದೇಹ ತೂಕವೂ ಆರು ಕೆ.ಜಿ. ಕಡಿಮೆಯಾಯಿತು. ಮೊದಲು ಓರ್ವ ಫಿಸಿಶಿಯನ್‌ನನ್ನು ಭೇಟಿಯಾದಳು. ವಿಟಮಿನ್ ಮಾತ್ರೆಗಳನ್ನು ನೀಡಿ ಡಾಕ್ಟರ್ ಸಮಾಧಾನ ಪಡಿಸಿದರು.

ಬಳಿಕ ಜೀರ್ಣಕ್ರಿಯೆಯಲ್ಲಿ ತೊಂದರೆ ಆರಂಭವಾಯಿತು. ಹೊಟ್ಟೆ ತೊಳಸಿದಂತಾಗುವುದು. ಹುಳಿತೇಗು, ಆಸ್ಪತ್ರೆಯ ಗ್ಯಾಸ್ಟ್ರೋ ವಿಭಾಗದಲ್ಲಿ ಚಿಕಿತ್ಸೆ ಮಾಡಿಸಿದಳು. ಮಾತ್ರೆ ತಿನ್ನುವಾಗ ಅನಾರೋಗ್ಯ ಕಡಿಮೆಯಾಯಿತು ಎಂದು ಭಾಸವಾದರೂ ಪುನಃ ಹಳೆಯ ಹಾಡು.

ಈ ಮಧ್ಯೆ ರಜೆಯಲ್ಲಿ ವಿದೇಶದಿಂದ ಪತಿಯೂ ಬಂದರು. ಹಿಂದಿನಂತೆ ಊರಿಗೆ ಬಂದು ಮಜವಾಗಿ ಕುಟುಂಬದೊಂದಿಗೆ ಕಾಲ ಕಳೆಯಬೇಕೆಂಬ ನಿರೀಕ್ಷೆಯಲ್ಲಿ ಬಂದಿದ್ದರು. ಆದರೆ ಇಲ್ಲಿ ಎಲ್ಲವೂ ಅಡಿಮೇಲಾಗಿತ್ತು. ಶೀಬಾಗೆ ಯಾವುದರಲ್ಲಿಯೂ ಆಸಕ್ತಿಯಿರಲಿಲ್ಲ. ನಿರಾಸಕ್ತಿ ಮತ್ತು ಆಯಾಸ. ಮಕ್ಕಳಿಗೆ ಪತಿಗೆ ಬಹಳ ನಿರಾಸೆಯಾಗಿತ್ತು. ಅನೇಕ ಯಾತ್ರೆಗಳನ್ನು ಮೊಟಕುಗೊಳಿಸಬೇಕಾಯಿತು. ಶೀಬಳಿಗೆ ಎಲ್ಲರೊಂದಿಗೂ ಕೋಪ ಬರುತ್ತಿತ್ತು. ಕೆಲವೊಮ್ಮೆ ಯಾಕೆ ಕೋಪಮಾಡಿಕೊಳ್ಳುತ್ತಾಳೆ ಎಂಬುದೂ ಗೊತ್ತಾಗುತ್ತಿರಲಿಲ್ಲ. ದಾಂಪತ್ಯದಲ್ಲೂ ಯಾವುದೇ ಆಸಕ್ತಿ ಇರಲಿಲ್ಲ. ಒಟ್ಟಿನಲ್ಲಿ ಪತಿಯ ಎರಡು ತಿಂಗಳ ರಜೆಯು ಜಟಾಪಟಿಯಲ್ಲೇ ಕಳೆದುಹೋಯಿತು.

ಆಗಾಗ್ಗೆ ಕೆಲಸಕ್ಕೆ ರಜೆ ಹಾಕುತ್ತಿರುವ ಶೀಬಳ ಬಗ್ಗೆ ಆಸ್ಪತ್ರೆಯಲ್ಲೂ ಚರ್ಚೆ ನಡೆಯುತ್ತಿತ್ತು. 'ಅತ್ಯುತ್ತಮ ದಾದಿ' ಎಂಬ ಪ್ರಶಸ್ತಿಯನ್ನು ಎರಡು ಬಾರಿ ಪಡೆದಿದ್ದ ಶೀಬಾಳಿಗೆ ಏನಾಯಿತು ಎಂಬುದೇ ಎಲ್ಲರ ಪ್ರಶ್ನೆ. ಆತ್ಮೀಯರಾಗಿದ್ದ ಸ್ತ್ರೀರೋಗ ತಜ್ಞರೋರ್ವರು ಶೀಬಾಳಿಗೆ ಮನೋರೋಗ ತಜ್ಞರನ್ನು ಭೇಟಿಯಾಗಲು ಸಲಹೆ ನೀಡಿದರು. ಅವರ ನಿರ್ದೇಶನದ ಮೇರೆಗೆ ನನ್ನನ್ನು ಭೇಟಿಯಾಗಲು ಬಂದಿದ್ದಳು ಶೀಬಾ.

ಈ ರೀತಿಯ ಸಮಸ್ಯೆಗಳೊಂದಿಗೆ ಇತ್ತೀಚೆಗಿನ ದಿನಗಳಲ್ಲಿ ಮೂರು ಗೃಹಿಣಿಯರು ನನ್ನನ್ನು ಭೇಟಿಯಾಗಲು ಬಂದಿದ್ದರಿಂದ ಶೀಬಾಳ ಸಮಸ್ಯೆಯೇನೆಂದು ಒಂದು ಹಂತದವರೆಗೆ ಅರ್ಥವಾಯಿತು. ಒಂದು ರೀತಿಯ ಕೆಲಸದ ಒತ್ತಡ ಉಂಟಾದಾಗ ಜೀವ ಶೈಲಿಗೆ ಸಂಬಂಧಪಟ್ಟ ಮನೋರೋಗವು ಶೀಬಾಳಿಗೆ ಉಂಟಾಗಿತ್ತು. 'ಹರೀಡ್ ವಿಮೆನ್ ಸಿಂಡ್ರೋಮ್' ಎಂದು ಈ ರೋಗವನ್ನು ಕರೆಯಲಾಗುತ್ತದೆ. ಅತಿ ಹೆಚ್ಚು ಬ್ಯುಸಿಯಾಗಿರುವ ಕಾರಣದಿಂದ ಉಂಟಾಗುವ ಮಾನಸಿಕ ರೋಗವಿದು. ಹೊರಲಾಗದ ಭಾರವನ್ನು ಹೊರಲು ಪ್ರಯತ್ನಿಸುವುದರಿಂದ ಶರೀರ ಮತ್ತು ಮನಸ್ಸು ತೋರಿಸುವ ಒಂದು ರೀತಿಯ 'ಬಹಿಷ್ಕಾರ'.

ಹರೀಡ್ ವಿಮೆನ್ ಸಿಂಡ್ರೋಮ್ ಎಂದರೇನು?

ನಾಲ್ಕು ವರ್ಷಗಳ ಹಿಂದೆ ಇಂಗ್ಲೆಂಡಿನ ಮಹಿಳಾ ಪತ್ರಿಕೆ 'ಪ್ರೈಮ್' ನಡೆಸಿದ ಸಮೀಕ್ಷೆಯ ಬಳಿಕ ಈ ರೋಗದ ಬಗ್ಗೆ ಆಧುನಿಕ ವೈದ್ಯ ಜಗತ್ತು ಹೆಚ್ಚು ಶ್ರದ್ಧೆಯಿಂದ ಅವಲೋಕನ ನಡೆಸಿತು. ಸಾವಿರಾರು ಸ್ತ್ರೀಯರನ್ನು ಈ ಬಗ್ಗೆ ಸಮೀಕ್ಷೆ ನಡೆಸಲಾಯಿತು. ಹೆಚ್ಚಾಗಿ ಉದ್ಯೋಗ

ಮಾಡುತ್ತಿರುವ ಸ್ತ್ರೀಯರನ್ನೇ ಆಯ್ದುಕೊಳ್ಳ ಲಾಯಿತು. ಇದರಲ್ಲಿ ಹೆಚ್ಚಿನವರು ನಮ್ಮ ಶೀಬ ಅನುಭವಿಸುತ್ತಿದ್ದ ಹೆಚ್ಚಿನ ಎಲ್ಲ ಸಮಸ್ಯೆ ಗಳನ್ನು ಅನುಭವಿಸುವವರೇ ಆಗಿದ್ದರು.

ಕೆಲಸದ ಸಮಯದ ನಿರಂತರ ಬದ ಲಾವಣೆ. ಆಸ್ಪತ್ರೆಯ ಕೆಲಸದ ಒತ್ತಡ. ಮನೆಯ ಕೆಲಸ, ಮಕ್ಕಳು ಬೆಳೆಯುತ್ತಿರುವು ದರಿಂದ ಅವರ ಸಮಸ್ಯೆಗಳು. ಎಲ್ಲವೂ ಒಟ್ಟು ಸೇರಿ ಶೀಬಳನ್ನು ಕಂಗಡೆಸಿಬಿಟ್ಟಿತ್ತು.

ಬೆಳಗ್ಗಿನ 8 ಗಂಟೆಯ ಶಿಫ್ಟ್‌ಗೆ ಕೆಲಸಕ್ಕೆ ಹಾಜರಾಗಬೇಕಾದರೆ ಕನಿಷ್ಠ 5 ಗಂಟೆಗೆ ಎದ್ದೇಳಬೇಕು. ಬ್ರೇಕ್ ಫಾಸ್ಟ್‌ನ ಜೊತೆ ಮಕ್ಕಳಿಗೆ ಬುತ್ತಿಕಟ್ಟಿಕೊಡಲು ಮಧ್ಯಾಹ್ನದ ಊಟವನ್ನು ಸಿದ್ಧಪಡಿಸಬೇಕು. ಇಬ್ಬರನ್ನು ನಿದ್ದೆಯಿಂದ ಎದ್ದೇಳಿಸಲು, ಹೊರಡಿಸಲು ಬಹಳಷ್ಟು ಸಮಯ ಬೇಕು. ಏಳುವರೆಗೆ ಈ ಕೆಲಸವನ್ನೆಲ್ಲ ಮುಗಿಸಿ ಕೊಂಡು ಆಸ್ಪತ್ರೆಗೆ ಓಡಬೇಕು. ಟ್ರಾಫಿಕ್ ಜಾಮ್‌ನಿಂದಾಗಿ ಬಸ್ಸು ತಡವಾಗಿ ಸಿಕ್ಕಿ ಕೆಲಸದ ಸ್ಥಳ ತಲುಪಿದಾಗ ಸದಾ ಲೇಟಾಗಿ ಬರುತ್ತೇನೆಂದು ಹೇಳಿ ಸುಪರಿಂಟೆಂಡೆಂಟ್‌ರಿಂದ ಬೈಗುಳ ಜೊತೆಗೆ ಕಪ್ಪಾಗಿಸಿದ ಮುಖದರ್ಶನ. ನಾಲ್ಕು ಗಂಟೆ ಕೆಲಸದ ಸಮಯವಾಗಿದ್ದರೂ ಬೇರೆ ಶಿಫ್ಟ್‌ನವರು ಬಂದು ಅವರಿಗೆ ಕೆಲಸವನ್ನು ಒಪ್ಪಿಸಿ ಹೊರಡುವಾಗ ನಾಲ್ಕೂವರೆ ಕಳೆದು ಬಿಡುತ್ತದೆ. ಬಸ್ಸಿನ ರಶ್ಶಿನಲ್ಲಿ ದೇಹ ತೂರಿಸಿ ಮನೆ ಬಂದು ತಲುಪುವಾಗ ಐದೂವರೆ. ಮಕ್ಕಳು ಹಸಿವಾಗುತ್ತದೆ ಎಂಬ ರಾಗ ಸದಾ ಶೀಬಾಳನ್ನು ಸ್ವಾಗತಿಸಲು ಕಾಯುತ್ತಿರುತ್ತದೆ. ಒಬ್ಬಳಿಗೆ ಬ್ರೆಡ್ ಜಾಮ್ ನಡೆಯುತ್ತದೆ ಎಂದಾದರೆ ಇನ್ನೊಬ್ಬಳಿಗೆ ಆಮ್ಲೇಟ್ ಆಗಲೇಬೇಕು.

ಮನೆಯನ್ನು ಕಸಗುಡಿಸಿ ಒರೆಸಿ ಸಿದ್ಧಗೊಳಿಸುವುದು. ಬಟ್ಟೆ ಒಗೆಯುವುದು, ಒಣಗಿದ ಬಟ್ಟೆಯನ್ನು ಮಡಚಿ ಇಟ್ಟುಕೊಳ್ಳು ವುದು. ರಾತ್ರಿ ಊಟಕ್ಕೆ ಜೊತೆಗೆ ಏನಾದರೂ ಹೊಸ ಅಡುಗೆ ಮಾಡಲು ಪ್ರಯತ್ನಿಸು ವುದು. ಮೀನು ತಂದಿದ್ದರೆ ಅದನ್ನು ಶುಚಿಗೊಳಿಸಿ ಅಡುಗೆ ಮಾಡುವುದು ಇತ್ಯಾದಿ ಇತ್ಯಾದಿ. ಸ್ನಾನ ಮಾಡಿ ಕೆಲಸ ಮುಗಿಯಿತೆಂದು ಬಂದರೆ ಎಸೈನ್ ಮೆಂಟ್, ಹೋಮ್‌ವರ್ಕ್ ಇತ್ಯಾದಿ ಗಳನ್ನು ಹಿಡಿದುಕೊಂಡು ಮಕ್ಕಳು ಪ್ರತ್ಯಕ್ಷ ರಾಗುತ್ತಾರೆ. ಇದರ ಜೊತೆ ಪತಿಯ ಕರೆ. ಅರ್ಧಗಂಟೆ ಅದಕ್ಕೆ ಬೇಕು. ರಾತ್ರಿ ಊಟ ಮುಗಿಸಿ ಪಾತ್ರೆ ತೊಳೆದು ಅಡುಗೆ ಮನೆ ಶುಚಿಗೊಳಿಸಿ ಮಲಗಲು ಬರುವಾಗ ಹನ್ನೊಂದು ಗಂಟೆ. ಮಕ್ಕಳ ಸಮವಸ್ತ್ರಕ್ಕೂ ಇಸ್ತ್ರಿ ಹಾಕಿ ಇಡಬೇಕು. ತಿಂಗಳಿಗೊಮ್ಮೆ ಒಂದು ವಾರ ರಾತ್ರಿ ಶಿಫ್ಟ್‌ನಲ್ಲೂ ಕೆಲಸ ಮಾಡಬೇಕು. ಆಗ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸುತ್ತದೆ. ರಾತ್ರಿ ಮಕ್ಕಳೊಂದಿಗೆ ಮಲಗಲು ಹತ್ತಿರದ ಮನೆಯ ಆಂಟಿಯ ಕೈಕಾಲು ಹಿಡಿಯಬೇಕು.

ಪತಿಯು ಊರಲ್ಲಿಲ್ಲದಿರುವುದರಿಂದ ಬ್ಯಾಂಕಿನ ಕೆಲಸ, ಮನೆ ಸಾಮಾನು ತರು ವುದು, ನೀರು, ವಿದ್ಯುತ್ ಬಿಲ್ಲು ಪಾವತಿ ಹೀಗೆ ಎಲ್ಲ ಕೆಲಸಗಳನ್ನು ಶೀಬ ಒಬ್ಬಂಟಿ ಯಾಗಿ ಮಾಡಬೇಕು. ಆದಿತ್ಯವಾರ ರಜಾ ಕಾಲವಾದರೂ ಆ ದಿನ ಕೆಲಸದ ಹೊರೆ ಮತ್ತಷ್ಟು ಹೆಚ್ಚು. ಹೆತ್ತವರನ್ನು ಭೇಟಿ ಯಾಗಲು ಹೋಗಬೇಕು. ಪತಿಯ ಹೆತ್ತವ ರನ್ನು ನೋಡಲು ಆಗಿಂದಾಗ್ಗೆ ಭೇಟಿ ನೀಡುತ್ತಿರಬೇಕು. ಇದರ ಜೊತೆ, ಮದುವೆ, ಔತಣ, ಮುಂಜಿ, ಮರಣ ಎಂದೆಲ್ಲ ವಿವಿಧ ಸಮಾರಂಭಗಳು. ತಪ್ಪಿಸಿಕೊಳ್ಳುವಂತಿಲ್ಲ. ಈ ರೀತಿ ಜೀವನ ಬಹಳ ನಿಬಿಡತೆಯ ಜೊತೆಗೆ ಯಾಂತ್ರಿಕವಾದಾಗ ಶೀಬಳನ್ನು ಮಾನಸಿಕ ರೋಗ ಕಾಡ ತೊಡಗಿತು.

ಒಂದು ಸಮೀಕ್ಷೆಯ ಪ್ರಕಾರ ಅಮೇ ರಿಕಾದಲ್ಲಿಂದು ಮೂರು ಕೋಟಿಗೂ ಅಧಿಕ ಮಹಿಳೆಯರು ಈ ರೋಗಕ್ಕೆ ಈಡಾಗಿದ್ದಾರೆ. ಭಾರತದಲ್ಲಿ ಈ ಕುರಿತು ಸಮೀಕ್ಷೆಗಳು ನಡೆಯದ ಕಾರಣ ಲೆಕ್ಕ ಸಿಕ್ಕಿಲ್ಲ. ಆದರೂ ನಗರ ಪ್ರದೇಶದಲ್ಲಿ ಹೊರಗೆ ಉದ್ಯೋಗಕ್ಕೆ ಹೋಗುವ ಮಹಿಳೆಯರಲ್ಲಿ ಹೆಚ್ಚಾಗಿ ಈ ಸಮಸ್ಯೆಗಳು ಕಂಡು ಬರುತ್ತಿರುವುದಾಗಿ ವೈದ್ಯರು ಅಭಿಪ್ರಾಯ ಪಡುತ್ತಾರೆ.

ಮಾತ್ರೆಯಿಂದಲೋ, ಟಾನಿಕ್ ನಿಂದಲೋ, ಯಾವುದೇ ರೀತಿ ಔಷಧ ದಿಂದಲೋ ಈ ರೋಗವನ್ನು ವಾಸಿ ಮಾಡಲು ಖಂಡಿತ ಸಾಧ್ಯವಿಲ್ಲ. ಜೀವನದ ವಿಧಾನವನ್ನು ಬದಲಿಸುವ ಮೂಲಕ, ಹೆಚ್ಚಿನ ಕೆಲಸದ ಒತ್ತಡದಿಂದ ಹೊರಬಂದು ವಿರಾಮ ವಿನೋದಗಳಲ್ಲಿ ತೊಡಗಿಕೊಳ್ಳುವ ಮೂಲಕ ಹೊರ ಸಂಚಾರ, ದೂರದ ಯಾತ್ರೆಗಳ ಮೂಲಕ ಮಾತ್ರ ಒಂದು ಹಂತದ ವರೆಗೆ ಈ ಸಮಸ್ಯೆಗಳನ್ನು ನಿಯಂತ್ರಿಸಲು ಸಾಧ್ಯ. ಮನಸ್ಸಿನ ಒತ್ತಡ, ದುಃಖ ದುಮ್ಮಾನಗಳನ್ನು ಮನಸ್ಸಿನಲ್ಲಿಟ್ಟು ಕೊರಗದೆ ಇತರರೊಂದಿಗೆ ಹಂಚಿಕೊಳ್ಳುವ ಮೂಲಕವೂ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು.

ಈ ಕೆಳಗಿನ ವಿಷಯಗಳನ್ನು ಪಾಲಿಸಿ ನೋಡಿ. ಬದಲಾವಣೆ ಸಾಧ್ಯವಾಗಬಹುದು.

* ಮನೆಯ ಎಲ್ಲ ಕೆಲಸಗಳನ್ನು ಒಬ್ಬಳೇ ಹೊರುವ ಪ್ರಯಾಸಕ್ಕೆ ಕೈ ಹಾಕದೆ ಮನೆಯ ಇತರ ಸದಸ್ಯರೊಂದಿಗೂ (ಪತಿ–ಮಕ್ಕಳು) ಕೆಲಸವನ್ನು ಹಂಚಿ ಬಿಡಿ. ಅವರ ಸಹಾಯ ಪಡೆಯಿರಿ.

* ಉದ್ಯೋಗ ಸ್ಥಳದಲ್ಲಿ ನಿಮ್ಮ ಕೆಲಸವನ್ನು ಮಾತ್ರ ಶ್ರದ್ಧೆ ಮತ್ತು ಏಕಾಗ್ರತೆಯಿಂದ ಮಾಡಿ ಮುಗಿಸಿಬಿಡಿ.

* ಮೇಲಧಿಕಾರಿಗಳಿಗೆ ವಿಷಯವನ್ನು ಮನವರಿಕೆ ಮಾಡಿಸಿ ನಿಮ್ಮ ಮೇಲೆ ಹೊರಿಸಲಾಗುವ ಹೆಚ್ಚುವರಿ ಕೆಲಸದಿಂದ ವಿನಾಯತಿ ಪಡೆದುಕೊಳ್ಳಿ.

* ಮನೆಕೆಲಸವನ್ನು ಕೂಡಾ ವರ್ಗೀ ಕರಿಸಿ ಆದ್ಯತೆಯ ಮೇರೆಗೆ ಶಿಸ್ತಿನಿಂದ ಮಾಡಿ ಮುಗಿಸಿ.

* ಟಿ.ವಿ. ನೋಡಲು, ಪುಸ್ತಕ ಓದಲು, ಇತರರೊಂದಿಗೆ ಮಾತುಕತೆಗೂ ಸಮಯ ಮಾಡಿಕೊಳ್ಳಿ.

* ಪೋಷಕಾಂಶಭರಿತ ಆಹಾರವನ್ನು ಸೇವಿಸಿ.

* ವ್ಯಾಯಾಮ ಮಾಡಿ.

* ಅಗತ್ಯವಿರುವ ವಿಶ್ರಾಂತಿ ಪಡೆದುಕೊಳ್ಳಿ.

* ಸರಿಯಾಗಿ ನಿದ್ರೆ ಮಾಡಿ.

* ಮನೆಯಲ್ಲಿ ಮತ್ತು ಕೆಲಸ ಮಾಡು ವಲ್ಲಿ ಪ್ರೀತಿಪೂರ್ವಕವಾದ ವಾತಾವರಣ ನಿರ್ಮಿಸಿಕೊಳ್ಳಿ.

ಜೀವನವನ್ನು ಈ ರೀತಿ ಕ್ರಮಬದ್ಧ ಗೊಳಿಸಿದರೆ ರೋಗವನ್ನು ಔಷಧವಿಲ್ಲದೆ ಗುಣಪಡಿಸಬಹುದು. ಕೆಲವು ಸಂದರ್ಭ ಗಳಲ್ಲಿ ತಜ್ಞರ ಮಾರ್ಗದರ್ಶನದಂತೆ ಔಷಧಿ ಸೇವಿಸಬೇಕಾಗಿ ಬರಬಹುದು. ಆಗ ಅದನ್ನು ನಿರ್ಲಕ್ಷಿಸಬಾರದು. ■

■ ಡಾ. ಡಿ.ಸಿ. ನಂಜುಂಡ, ಮೈಸೂರು ■

ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮಹಿಳೆಯರ ಭಾಗವಹಿಸುವಿಕೆ

ಗ್ರಾಮಸ್ವರಾಜ್ ಪರಿಕಲ್ಪನೆಯ ಹರಿಕಾರರಾದ ರಾಷ್ಟ್ರಪಿತ ಗಾಂಧೀಜಿಯವರು ಗ್ರಾಮಗಳ ಸ್ವಾಯತ್ತ ಆಡಳಿತವನ್ನು ಪ್ರತಿಪಾದಿಸಿದವರು. ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಅಸ್ತಿತ್ವದಿಂದ ಗ್ರಾಮದ ನೈರ್ಮಲ್ಯ, ಶುದ್ಧ ಕುಡಿಯುವ ನೀರು, ಉತ್ತಮ ಮೂಲಭೂತ ಸೌಕರ್ಯಗಳನ್ನು ಹೊಂದುವ ಮೂಲಕ ತನ್ನ ಆಡಳಿತವನ್ನು ತಾನು ಸ್ವಾತಂತ್ರ್ಯವಾಗಿ ನಡೆಸಿಕೊಂಡು ಹೋಗುವುದಕ್ಕೆ ಅನುಕೂಲವಾಗುತ್ತದೆ ಎಂದು ಗಾಂಧೀಜಿ ಬಲವಾಗಿ ನಂಬಿದ್ದರು. ಸ್ವಾತಂತ್ರ್ಯ ಪೂರ್ವದ ಬ್ರಿಟಿಷ್ ಭಾರತದಲ್ಲಿ 1882ರಲ್ಲಿ ಲಾರ್ಡ್ ರಟನ್‌ರವರು ಅಧಿಕಾರದ ವಿಕೇಂದ್ರಿಕರಣಕ್ಕೆ ಒತ್ತು ನೀಡಿದ್ದರು. ಇದರಿಂದಲೇ ಅವರನ್ನು ಭಾರತದ ಸ್ಥಳೀಯ ಸಂಸ್ಥೆಗಳ ಪಿತಾಮಹ ಎಂದು ಕರೆಯಲಾಗುತ್ತಿದೆ. ಸ್ವಾತಂತ್ರ್ಯದ ನಂತರ 1992ರಲ್ಲಿ ಸಂವಿಧಾನಕ್ಕೆ 73ನೇ ತಿದ್ದುಪಡಿ ತರುವ ಮೂಲಕ ಅಸ್ತಿತ್ವದಲ್ಲಿದ್ದ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಾಂವಿಧಾನಿಕ ಸ್ಥಾನಮಾನವನ್ನು ನೀಡಲಾಯಿತು. ಸಾಮಾಜಿಕ ಶ್ರೇಣಿ ವ್ಯವಸ್ಥೆಯಲ್ಲಿ ಸಾಮಾಜಿಕ ಮತ್ತು ಆರ್ಥಿಕವಾಗಿ ಶೋಚನೀಯ ಸ್ಥಿತಿಯಲ್ಲಿ ಬದುಕುತ್ತಿರುವ, ಶತ-ಶತಮಾನಗಳಿಂದ ಸಮಾಜದ ಮೇಲ್ಭಾಗದ ತುಳಿತಕ್ಕೆ ಒಳಗಾದ ಜನರನ್ನು ದಲಿತರು ಎಂದು ಗುರುತಿಸಿದ್ದಾರೆ. ರಾಜಕೀಯ ಒಳಗೊಳ್ಳುವಿಕೆಯ ದೃಷ್ಟಿಯಿಂದ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇ.50% ರಷ್ಟು ಪ್ರಾತಿನಿಧ್ಯತೆಯನ್ನು ಕಲ್ಪಿಸಲಾಗಿದೆ. ಇದರ ಪರಿಣಾಮಕಾರಿ ಅನುದಾನದಿಂದ ಇಂದು ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯ ಭಾಗವಹಿಸುವಿಕೆಯ ಪ್ರಮಾಣ ಹೆಚ್ಚಿಸಿದೆ. ಈ ದೃಷ್ಟಿಕೋನದಲ್ಲಿ 'ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ದಲಿತ ಮಹಿಳೆಯರ ಭಾಗವಹಿಸುವಿಕೆ ಎಂಬ ವಿಷಯವನ್ನು ಖಚಿತ ಆಧಾರಗಳ ನೆರವಿನಿಂದ ಮಂಡಿಸಲು ಉದ್ದೇಶಿಸಲಾಗಿದೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳನ್ನು ಅತ್ಯಂತ ಪ್ರಮುಖವಾದವು ಎಂದು ಪರಿಗಣಿಸಲಾಗುತ್ತಿದೆ. ಪಂಚಾಯತಿಗಳು ಸ್ಥಳೀಯ ಸಮಸ್ಯೆಗಳಿಗೆ ಮತ್ತು ಅಲ್ಲಿನ ಅವಶ್ಯಕತೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಲು ಸ್ವಾತಂತ್ರ್ಯ ಅಧಿಕಾರವನ್ನು ಹೊಂದಿದ್ದು ಇವು ಅಧಿಕಾರ ವಿಕೇಂದ್ರೀಕರಣದ ತತ್ವದ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿವೆ. ಸ್ಥಳೀಯ ಸಮಸ್ಯೆಗಳನ್ನು ಮತ್ತು ಮೂಲಭೂತ ಸೌಲಭ್ಯಗಳ ಕೊರತೆಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಕ್ಷಣ ಬಗೆಹರಿಸಲಾಗುವುದಿಲ್ಲ ಎಂಬುದನ್ನು ಮನಗಂಡಿರುವ ಆಧುನಿಕ ಸರ್ಕಾರಗಳು "ಸ್ಥಳೀಯ ಆವಶ್ಯಕತೆಗಳನ್ನು ಸ್ಥಳೀಯ ಜನತೆಯಲ್ಲಿ ಅಥವಾ ಅದರ ಪ್ರತಿನಿಧಿಗಳ ಮೂಲಕ ಪೂರೈಸಿಕೊಳ್ಳಲು ಗ್ರಾಮ ಪಂಚಾಯಿತಿಗಳಿಗೆ ನಿಮಿತ ಅಧಿಕಾರವನ್ನು ನೀಡಲಾಗಿದೆ. ಇದರ ಪ್ರತಿಫಲ

ವಾಗಿ ಮೂರು ಹಂತದ ಸ್ಥಳೀಯ ಸರ್ಕಾರಗಳು ಇಂದು ಅಸ್ತಿತ್ವದಲ್ಲಿವೆ. ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಹಾಗೂ ಜಿಲ್ಲಾ ಪಂಚಾಯಿತಿಗಳಲ್ಲಿ ಮಹಿಳೆಯರ ಸಕ್ರಿಯ ಭಾಗವಹಿಸುವಿಕೆಯನ್ನು ಉತ್ತೇಜಿಸಲು ಸಾಂವಿಧಾನಿಕವಾಗಿ ಹಲವಾರು ಅವಕಾಶಗಳನ್ನು ಕಲ್ಪಿಸಲಾಗಿದೆ. ಈ ದಿಕ್ಕಿನಲ್ಲಿ 1992ರ ಸಂವಿಧಾನದ 73ನೇ ತಿದ್ದುಪಡಿಯು ಪಂಚಾಯಿತ್ ರಾಜ್ ವ್ಯವಸ್ಥೆಯ ಇತಿಹಾಸದಲ್ಲಿ 'ಮೌನ ಕ್ರಾಂತಿ' ಎಂದು ಗುರುತಿಸಲಾಗುತ್ತಿದೆ. ಸಂವಿಧಾನದ 243ನೇ ವಿಧಿಗೆ ತಿದ್ದುಪಡಿ ತಂದು ಹೊಸದಾಗಿ 243ಎ ಯಿಂದ 243ಓ ವಿಧಿಗಳನ್ನು ಉಪವಿಧಿಗಳಾಗಿ 11ನೇ ಅನುಸೂಚಿಯಲ್ಲಿ ಸೇರ್ಪಡೆ ಮಾಡಲಾಯಿತು. ನಂತರ ಹಲವಾರು ರಾಜ್ಯಗಳು ತನ್ನ ಭೌಗೋಳಿಕ ವ್ಯವಸ್ಥೆಗೆ ತಕ್ಕಂತೆ ಕಾಯ್ದೆಗಳನ್ನು ರೂಪಿಸಿಕೊಂಡವು. ಇದರ ಪ್ರತಿಫಲವಾಗಿ ಗ್ರಾಮ ಪಂಚಾಯತ್‌ಗಳು ಅಧಿಕಾರ ವಿಕೇಂದ್ರೀಕರಣದ ಮೊದಲ ಹಂತವಾಗಿ ಹುಟ್ಟುಪಡೆದವು. ರಾಜ್ಯ ಸರ್ಕಾರಗಳು ಮಹಿಳೆಯರಿಗೆ ಸೂಕ್ತ ಪ್ರಾತಿನಿಧ್ಯವನ್ನು ಕಲ್ಪಿಸಲು, ರಾಜಕೀಯ ಸಬಲೀಕರಣದ ದೂರದೃಷ್ಟಿಯಿಂದ ಮತ್ತು ಸಮಾಜದ ಮುಖ್ಯವಾಹಿನಿಯಲ್ಲಿ ಮಹಿಳೆಯ ಭಾಗವಹಿಸುವಿಕೆಯನ್ನು ಖಚಿತಪಡಿಸಲು ಪಂಚಾಯತ್ ರಾಜ್ಯ ಕಾಯ್ದೆಯಲ್ಲಿ ಶೇ.50% ಸ್ಥಾನಗಳನ್ನು ಮೀಸಲಿರಿಸಿದವು. ಇದರ ಪರಿಣಾಮಕಾರಿ ಅನುಷ್ಠಾನದಿಂದ ಇಂದು ಭಾರತದ ಪಂಚಾಯತ್ ರಾಜ್ಯ ವ್ಯವಸ್ಥೆಯಲ್ಲಿ 'ಮಹಿಳಾ ಯುಗ' ಆರಂಭವಾಗಿದೆ ಎಂದು ಹೇಳಬಹುದು. 'ಸಂವಿಧಾನದ 73ನೆ ತಿದ್ದುಪಡಿಯಲ್ಲಿ ಪಂಚಾಯ್ತಿಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೆ ಮಹಿಳೆಯರಿಗೆ 1/3 ರಷ್ಟು ಸ್ಥಾನಗಳನ್ನು ಅವರ ಜನಸಂಖ್ಯೆಯಾಧಾರದ ಮೇಲೆ ಮೀಸಲಿಡಬೇಕೆಂದು ತಿಳಿಸುತ್ತದೆ'. ಇದರ ಅಡಿಯಲ್ಲಿ ಮಹಿಳೆಯರ ಭಾಗವಹಿಸುವಿಕೆ ಪರಿಣಾಮಕಾರಿಯಾಗಿದೆ ಎಂಬುದನ್ನು ಕೆಳಕಂಡ ಅಂಕಿ ಅಂಶಗಳೇ ಖಚಿತ ಪಡಿಸುತ್ತದೆ.

ಮಹಿಳೆ ಮತ್ತು ರಾಜಕೀಯ ಸಬಲೀಕರಣ

ಭಾರತೀಯ ಸಂಸ್ಕೃತಿಯಲ್ಲಿ ಹೆಣ್ಣು ಮಕ್ಕಳಿಗೆ ವಿಶಿಷ್ಟ ಸ್ಥಾನವಿದೆ. ಹೆಣ್ಣು ಮಗಳು ಎಲ್ಲಾ ಕ್ಷೇತ್ರಗಳಲ್ಲೂ ಸಾಧನೆಗಳನ್ನು ತೋರಿಸುತ್ತಿರುವುದೂ ಜೀವ ವಿಕಾಸದ ಅಂಗವೇ ಆಗಿದೆ. ಸಂಪ್ರದಾಯ, ಆಚಾರ–ವಿಚಾರಗಳು ಮುಂತಾದವುಗಳಲ್ಲಿ ಹೆಣ್ಣಿಗೆ ವಿಶೇಷ ಗೌರವ ನೀಡುವುದು ಭಾರತೀಯ ಸಮಾಜದ ಶತಮಾನದ ವಾಡಿಕೆ. ನಮ್ಮ ಸಂಸ್ಕೃತಿ, ಪರಂಪರೆ, ಸಂಪ್ರದಾಯ, ಆಚಾರ–ವಿಚಾರಗಳು, ನಂಬಿಕೆ ಮುಂತಾದವುಗಳು ಜಾಗತೀಕರಣದ ಹಿನ್ನಲೆಯಲ್ಲಿ ವೇಗವಾಗಿ ಬದಲಾವಣೆಗೊಳಪಡುತ್ತಿವೆ ಅಥವಾ ಸಾಂಸ್ಕೃತಿಕ ಪ್ರಸಾರದಿಂದ ನಮ್ಮ ಸಂಸ್ಕೃತಿಗೆ ವಿದೇಶದ ಗಂಧಗಾಳಿಯು ನಿಧಾನವಾಗಿ ಆವರಿಸಿಕೊಳ್ಳುತ್ತಿವೆ. ಇದರಿಂದ ಶತಮಾನಗಳಿಂದ ಗೌರವಿಸಲ್ಪಡುತ್ತಿದ್ದ ಭಾರತೀಯ ನಾರಿಯ ಸಾಮಾಜಿಕ ಸ್ಥಾನಮಾನಗಳು ಸಹ ನಿಧಾನವಾಗಿ ಪಲ್ಲಟವಾಗುತ್ತಿವೆ. ಪ್ರಸ್ತುತ ಭಾರತದಲ್ಲಿ ಆಕೆಯ ಸಾಮಾಜಿಕ ಸ್ಥಾನಮಾನಗಳೊಂದಿಗೆ ಮಹಿಳೆಯ ಆರ್ಥಿಕ ಸ್ಥಿತಿಗತಿಗಳು ಸಹ ತೀವ್ರಗತಿಯಲ್ಲಿ ಬದಲಾಗುತ್ತಿವೆ. ಇದರಿಂದ ಸ್ತ್ರೀಗೆ ಹೆಚ್ಚಿನ ಆರ್ಥಿಕ ಸ್ವಾತಂತ್ರ್ಯ ಮತ್ತು ನಿರ್ಧಾರ ಕೈಗೊಳ್ಳುವ ಸಾಮರ್ಥ್ಯ ನಮ್ಮ ಸಮಾಜದಲ್ಲಿ ಕಂಡುಬರುತ್ತಿರುವುದು ಇತ್ತೀಚಿನ ಧನಾತ್ಮಕ ಬೆಳವಣಿಗೆ. ಇಂದು ಹೆಣ್ಣು ಪ್ರತಿಯೊಂದು ಕ್ಷೇತ್ರದಲ್ಲೂ ಗಂಡಿಗೆ ಸರಿಸಮಾನಳಾಗಿ ದುಡಿಯುತ್ತಿದ್ದಾಳೆ. ಸಮಾಜದ ಸಮಗ್ರ ಬೆಳವಣಿಗೆಗೆ ಸ್ತ್ರೀಯ ಪಾತ್ರ ಪ್ರಮುಖವಾಗಿದ್ದು, ಅವಳು ಒಬ್ಬ ಶಿಕ್ಷಕಿಯಾಗಿ ಮಕ್ಕಳ ಜೀವನ ನಿರ್ಮಾಣ ಮಾಡಬಲ್ಲಳು, ಸಮಾಜ ಸೇವಕಿಯಾಗಿ ಸಮಾಜ ಸೇವೆ ಮಾಡಬಲ್ಲಳು. ಇನ್ನು ಕುಟುಂಬವನ್ನು ಆದರ್ಶ ಕುಟುಂಬವನ್ನಾಗಿ ಮಾಡಬಲ್ಲಳು. ಈಗಿನ ಕಾಲದಲ್ಲಿ ಎಲ್ಲಿ ನೋಡಿದರೂ ಪುರುಷರು ಮಾಡುವಂತಹ ಕೆಲಸಗಳನ್ನು ಸ್ತ್ರೀಯರು ಸಹ ಅಷ್ಟೇ ಪರಿಣಾಮಕಾರಿಯಾಗಿ ಮಾಡುತ್ತಿರುವುದನ್ನು ಕಾಣಬಹುದು.

ವಿಶ್ವದಲ್ಲೇ ಬಹುದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ಎನಿಸಿರುವ ಭಾರತದಲ್ಲಿ ಇಂದಿಗೂ ಅನೇಕ ಸಮಸ್ಯೆಗಳು ಜೀವಂತವಾಗಿದೆ. ಈ ನಿಟ್ಟಿನಲ್ಲಿ ಮಹಿಳೆಯರ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳು ಸುಧಾರಿಸದೆ ಇರುವುದು ದುರಂತವೇ ಸರಿ. ಭಾರತದ ಸರ್ಕಾರದ 2011ನೇ ಜನಗಣತಿಯ ಪ್ರಕಾರ ದೇಶದಲ್ಲಿ ಶೇ.46.2ರಷ್ಟು ಮಹಿಳೆಯರಿದ್ದಾರೆ. ಪಂಜಾಬ್ ರಾಜ್ಯವು ಅತೀ ಹೆಚ್ಚು (28.9) ದಲಿತ ಜನರನ್ನು ಹೊಂದಿರುವ ರಾಜ್ಯವಾಗಿದೆ. ಉನ್ನತ ಶಿಕ್ಷಣವನ್ನು ಕಲಿತ ಮತ್ತು ಕಲಿಯುತ್ತಿರುವ ಮಹಿಳೆಯರ ಪ್ರಮಾಣ ತೀರಾ ಕಡಿಮೆ ಎಂಬುದಾಗಿ ಸರ್ಕಾರಿ ದಾಖಲೆಗಳು ತಿಳಿಸುತ್ತವೆ. ಇನ್ನೂ ಒಂದು ಅಂದಾಜಿನ ಪ್ರಕಾರ ಶೇ.75% ರಷ್ಟು ಹೆಣ್ಣು ಮಕ್ಕಳು ಪ್ರಾಥಮಿಕ ಶಾಲೆಯಲ್ಲಿ ಕಲಿಯುವ ಹಂತದಲ್ಲಿ ಶಾಲೆಗಳನ್ನು ತೊರೆಯುತ್ತಿರುವುದು ಹಲವಾರು ಸಮಸ್ಯೆಗಳಿಂದ ಬಯಲಾಗಿದೆ. ಈ ನಿಟ್ಟಿನಲ್ಲಿ ಮಹಿಳೆಯರ ಸಾಕ್ಷರತೆಯ ಪ್ರಮಾಣ ಸ್ವಲ್ಪ ಮಟ್ಟಿಗೆ ಸುಧಾರಿಸಿದ್ದು ಈ ಪ್ರಮಾಣ ಶೇ. 41.1ರಷ್ಟು ಎಂಬುದು ಸಮಾಧಾನ ಸಂಗತಿಯಾಗಿದೆ. ಮಹಿಳೆಯರು ರಾಜಕೀಯ ಸಬಲೀಕರಣಕ್ಕಾಗಿ ಅನೇಕ ಸಾಂವಿಧಾನಿಕ ಅವಕಾಶಗಳನ್ನು ಕಲ್ಪಿಸಿಕೊಡಲಾಗಿದ್ದು ಈ ನಿಟ್ಟಿನಲ್ಲಿ ಸಂವಿಧಾನದ 73ನೇ ತಿದ್ದುಪಡಿಯು ಸ್ಥಳೀಯ ಸಂಸ್ಥೆಗಳಲ್ಲಿ ಶೇ.33% ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಲು ಅನುವು ಮಾಡಿಕೊಟ್ಟಿತ್ತು. ಇಂದು ಅನೇಕ ರಾಜ್ಯಗಳು ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಶೇ. 50ರಷ್ಟು ಸಂಸ್ಥೆಗಳನ್ನು ಮಹಿಳೆಯರಿಂದ ಕಾಯ್ದಿರಿಸುವುದನ್ನು ಕಾಣಬಹುದಾಗಿದೆ. ಇದರಲ್ಲಿ ಮಹಿಳೆಯರ ಪಾಲು ಸಾಕಷ್ಟು ಪ್ರಮಾಣದಲ್ಲಿ ಇರುವುದನ್ನು ಕಾಣಬಹುದಾಗಿದ್ದು ಮಹಿಳೆಯರು ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್‌ಗಳಲ್ಲಿ ಅಧಿಕಾರ ತಡೆಯಲು ಸಾಧ್ಯವಾಗಿದೆ.

ಸ್ವಾತಂತ್ರ್ಯ ಪೂರ್ವದಲ್ಲೇ ಗಾಂಧೀಜಿಯವರು, "ಸ್ವಾತಂತ್ರ್ಯವು ಹಳ್ಳಿಗಳಿಂದ ಪ್ರಾರಂಭವಾಗಬೇಕು ಮತ್ತು ಪ್ರತಿಯೊಂದು ಹಳ್ಳಿಯೂ ಜನರ ಆಳ್ವಿಕೆಗೆ ಒಳಪಟ್ಟು ಪ್ರಜಾಸತಾತ್ಮಕ ಘಟಕವಾಗಿರಬೇಕು" ಎಂದು ಹೇಳಿದ್ದರು. ಅಧಿಕಾರ ವಿಕೇಂದ್ರೀಕರಣದಲ್ಲಿ ಗ್ರಾಮಸಭೆಯ ಕಾರ್ಯ ಮಹತ್ವದ್ದಾಗಿದೆ. ಗ್ರಾಮದ ಅಭಿವೃದ್ಧಿ ಯೋಜನೆ ತಯಾರಿಸುವುದು ಹಾಗೆ ಸಮುದಾಯ ಕಲ್ಯಾಣ ಕಾರ್ಯಕ್ರಮಗಳಲ್ಲಿ

ಸ್ವಯಂ ಭಾಗವಹಿಸುವುದು. ಸರ್ಕಾರದ ವಿವಿಧ ಯೋಜನೆಗಳ ಫಲಾನುಭವಿಗಳನ್ನು ಆಯ್ಕೆ ಮಾಡುವುದು ಗ್ರಾಮಸಭೆಯ ಪ್ರಮುಖ ಕಾರ್ಯವಾಗಿರುತ್ತದೆ. ಇಂತಹ ಕಾರ್ಯಗಳನ್ನು ಬದ್ಧತೆಯಿಂದ ಹಾಗೆ ಪಾರದರ್ಶಕವಾಗಿ ಮಾಡಬೇಕಾದರೆ ಗ್ರಾಮ ಸಭೆಯಲ್ಲಿ ಪ್ರತಿಯೊಂದು ಸಮುದಾಯದ ಭಾಗವಹಿಸುವಿಕೆ ತುಂಬಾ ಮುಖ್ಯವಾಗಿರುತ್ತದೆ. ಇಂದು ಮಹಿಳೆಯರು ಗ್ರಾಮಸಭೆಗಳಲ್ಲಿ ಭಾಗವಹಿಸಿ ಅನೇಕ ವಿಷಯಗಳ ಚರ್ಚೆಗಳಲ್ಲಿ ಪಾಲ್ಗೊಂಡು ಮಾತನಾಡುತ್ತಿದ್ದಾರೆ. ಈ ಮೂಲಕ ಸರ್ಕಾರದ ಹಲವಾರು ಕಲ್ಯಾಣ ಯೋಜನೆಗಳಿಗೆ ಸೂಕ್ತ ಮತ್ತು ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಲು ನೆರವಾಗಿದ್ದಾರೆ. ಗಾಂಧೀಜಿಯವರು ಸ್ವಾತಂತ್ರ್ಯದ ಕುರಿತು ಮಾತನಾಡುವಾಗ "ಮಧ್ಯ ರಾತ್ರಿಯಲ್ಲಿಯೂ ಸಹ ಒಬ್ಬಂಟಿ ಮಹಿಳೆ ಭಯವಿಲ್ಲದೆ ಓಡಾಡುವ ಕಾಲ ಬಂದಾಗ ಮಾತ್ರ" ಸ್ವಾತಂತ್ರ್ಯಕ್ಕೆ ನಿಜವಾದ ಅರ್ಥ ಬರುತ್ತದೆ ಎಂದು ಹೇಳಿದ್ದರು. ಈ ಮಾತಿನ ಅರ್ಥ ಮಹಿಳೆಯರಿಗೆ ಎಲ್ಲಾ ರೀತಿಯ ಸ್ವಾತಂತ್ರ್ಯಗಳನ್ನು ನೀಡಬೇಕು ಮತ್ತು ಭದ್ರತೆಯನ್ನು ಖಾತರಿಪಡಿಸಬೇಕು ಎಂಬುದಾಗಿತ್ತು ಎಂದು ಊಹಿಸಬಹುದು. ಈ ದಿಕ್ಕಿನಲ್ಲಿ ಆಧುನಿಕ ಸರ್ಕಾರಗಳು ಅನೇಕ ದಿಟ್ಟ ನಿರ್ಧಾರಗಳನ್ನು ಕೈಗೊಂಡಿದ್ದರ ಫಲವಾಗಿ ಇಂದು ಮಹಿಳೆಯರು ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿಗೆ ಹೆಚ್ಚಿನ ಸಂಖ್ಯೆಯಲ್ಲಿ ಆಯ್ಕೆಯಾಗುತ್ತಿದ್ದಾರೆ. ಗ್ರಾಮಗಳಲ್ಲಿ ಹೆಚ್ಚಿನ ಮಹಿಳೆಯರು ಮತ್ತು ಚುನಾಯಿತ ಜನಪ್ರತಿನಿಧಿಗಳು ಭಾಗವಹಿಸಿ ಗ್ರಾಮದ ಸಮಗ್ರ ಅಭಿವೃದ್ಧಿಗೆ ಕೈಗೊಳ್ಳಬೇಕಾದ ಕಾರ್ಯಗಳ ಬಗ್ಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುತ್ತಿರುವುದು ಉತ್ತಮ ಆಡಳಿತದ ಅನುಷ್ಠಾನದ ಪ್ರಥಮ ಹಂತವಾಗಿ ಗೋಚರಿಸುತ್ತಿದೆ.

ಪಂಚಾಯತ್ ರಾಜ್ ಸಂಸ್ಥೆಗಳಿಗೆ ಇತ್ತೀಚೆಗೆ ಮಹಿಳೆಯರ ಆಯ್ಕೆ ಗಣನೀಯವಾಗಿ ಏರಿಕೆಯಾಗಿದೆ. ಆದರೆ ಅಧಿಕಾರ ಚಲಾಯಿಸುವ ಸಂದರ್ಭದಲ್ಲಿ ಮಹಿಳೆಯರು ಅದರ ಪುರುಷರ ಹಿಡಿತದಿಂದ ಪಾರಾಗಿದ್ದಾರೆಯೇ ಎಂಬ ಪ್ರಶ್ನೆ ಇನ್ನೂ ಜೀವಂತವಾಗಿಯೇ ಉಳಿದುಕೊಂಡಿದೆ. ರಾಜಕೀಯ ಅಧಿಕಾರದ ಅಡಿಪಾಯ ಎನಿಸಿರುವ ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಮಹಿಳೆ ಅಧಿಕಾರದ ಚುಕ್ಕಾಣಿ ಹಿಡಿದಿರುವ ಮಹಿಳೆಯರ ಹಿಂದೆ ಅದರ ಕುಟುಂಬ ವರ್ಗ ಆಡಳಿತ ನಡೆಸುತ್ತಿರುವ ದಲಿತ ಸಮುದಾಯದ ಮಹಿಳೆಯರು ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಿದಂತೆ ಅವರ ರಾಜಕೀಯ ಅಧಿಕಾರವು ಉತ್ತಮ ಕಾರ್ಯಗಳಿಗೆ ಬಳಕೆಯಾಗುವುದರಲ್ಲಿ ಸಂಶಯವಿಲ್ಲ ಹಾಗೇ ರಾಜಕೀಯ ನಿರ್ಧಾರಗಳನ್ನು ತೆಗೆದುಕೊಳ್ಳದಿರುವಿಕೆಯಲ್ಲಿ ಮತ್ತು ಅಧಿಕಾರ ಚಲಾವಣೆಯಲ್ಲಿ ಪುರುಷರ ಹಸ್ತಕ್ಷೇಪವನ್ನು ತೆಗೆದು ಹಾಕಲು ದಲಿತ ಮಹಿಳೆಯರು ಶೈಕ್ಷಣಿಕವಾಗಿ ಮೊದಲು ಸಬಲರಾಗಬೇಕಾಗಿರುವುದು ತುರ್ತಾಗಿ ಆಗಬೇಕಾಗಿದೆ. ■

Mob: 9448874282, 8050374280
Ph: 08372-220083
ಡಿಜಿಟಲ್ ವರ್ಲ್ಡ್
Digital World
FLEX AND VINYLE PRINTS
Flex, Memento, Visiting Cards
Apsara Plaza, 1st Floor, Tangakut, GADAG

Mohammed Sirajuddin
Mob: 09880150222
Mohammed Tajuddin
Mob: 09448341181
TAJ STONE INDUSTRIES
www.tajstoneindustries.com
Processing Unit for all types of Granite Slabs, Tiles & Quarry Owners.
Hanamasagar Road, ILKAL - 587125 (Dist.) BAGALKOT. Email: sirajt537@gmail.com

ದುಬ್ಯಾ: ಬೆಳೆದು ನಿಂತ ಚಮತ್ಕಾರ ಮಹಿಳಾ ಜಾಗೃತಿಗೆ ಜೈಕಾರ

(12ನೇ ಪುಟದಿಂದ)



ದೇಹದ ಮೇಲೆ ರುಂಡವೇ ಇರದು! ನಮ್ಮಂತೆ ಇಲ್ಲಿ ನ್ಯಾಯಕ್ಕೆ ವರ್ಷಗಟ್ಟಲೆ ಕಾಯುವ ಪ್ರಸಂಗವಿರಬಾರದು. ಒಂದೇ ವಾರದಲ್ಲಿ ಖೇಲ್–ಖತಂ! ಈ ಕಾರಣ ದಿಂದ ಇಲ್ಲಿಯ ರಸ್ತೆಗಳಲ್ಲಿ ಉದ್ಯೋಗ ಮುಗಿಸಿಕೊಂಡು ಬರುವ ಮಹಿಳೆಯರು ಮಧ್ಯರಾತ್ರಿಗೂ ನಿರ್ಭಯವಾಗಿ ಓಡಾಡಿ ಕೊಂಡಿರುತ್ತಾರೆ. ಧೈರ್ಯ, ಆತ್ಮ ವಿಶ್ವಾಸದಿಂದ ಸಾಗುತ್ತಾರೆ.

❖ ❖ ❖

ಮಾರುಕಟ್ಟೆ:

ದುಬ್ಯಾಗೂ ಚಿನ್ನಕ್ಕೂ ಹತ್ತಿರದ ನಂಟು. ಇಲ್ಲಿಯ ಪರಿಶುದ್ಧ ಬಂಗಾರ ಇಡೀ ವಿಶ್ವದಲ್ಲಿಯೇ ಪ್ರಸಿದ್ಧ. ಇಲ್ಲಿಯ ಗೋಲ್ಡ್ ಸೂಕಿನಲ್ಲಿ ಒಂದೇ ಕಡೆ 400ಕ್ಕೂ ಹೆಚ್ಚಿನ ಚಿನ್ನದ ಮಳಿಗೆಗಳಿವೆ. ನಾಲ್ಕು ಸುತ್ತ ಕಣ್ಣಾಡಿಸಿದರೆ ಬರೇ ಬಂಗಾರದ ಗಟ್ಟಿಗಳು, ಒಡವೆಗಳು, ಬೆಳ್ಳಿ–ಮುತ್ತು, ಹವಳ, ವಜ್ರಗಳ ದೃಶ್ಯಗಳು! ಆದರೆ ಇವೆಲ್ಲವನ್ನು ಕಾಪಾಡಲು ನಮಗೆ 5–6 ಪೊಲೀಸರು ಸಿಕ್ಕರೆ ಅದೇ ದೊಡ್ಡದು! ಇಲ್ಲಿ ದರೋಡೆ–ಕಳ್ಳತನ ಅನ್ನುವುದು ತಮಾಷೆಯ ಮಾತಲ್ಲ. ಇಲ್ಲಿಯ ಜನರಿಗೆ ಈ 'ಗೋಲ್ಡ್ ಸೂಕ್' ಅನ್ನುವುದು ನಮ್ಮೂರಿನ ಸಂತೆಯ ತರಕಾರಿ ಮಾರುಕಟ್ಟೆಯಂತೆ ಗೋಚರಿಸುತ್ತದೆ!

ಇಲ್ಲಿ ಚಿನ್ನವಾಗಲಿ, ಬಟ್ಟೆಯಾಗಲಿ, ಕಂಪ್ಯೂಟರ್ ಆಗಲಿ, ಕಾರ್ಪೆಟ್ ಆಗಲಿ ಎಲ್ಲದ್ದಕ್ಕೂ ಅವರದ್ದೇ ಮಾರುಕಟ್ಟೆ ವಲಯವಿದೆ. ಅಲ್ಲಿ ಹೊಕ್ಕರೆ ನಮಗೆ ಎಲ್ಲವೂ ಲಭ್ಯ. ಅಗ್ಗದ ವಸ್ತುಗಳು ಬೇಕು ಅನಿಸಿದರೆ ಡ್ರಾಗನ್ ಮಾರ್ಟ್‌ಗೆ ಹೋದರೆ ಸಾಕು. ನಮ್ಮ ಬಸ್ಸುಗಳಲ್ಲಿ ಮಾರುವ 'ಕಸ್ತೂರಿ' ಮಾತ್ರೆಯಿಂದ ಹಿಡಿದು ಚಂದ್ರಯಾನಕ್ಕೆ ಹೊರಡಲು ಬೇಕಾದ ವಸ್ತುಗಳೂ ಅಲ್ಲಿ ಸುಲಭವಾಗಿ ದೊರೆಯುತ್ತದೆ. ಸುಮಾರು ಒಂದು ಎಕರೆಗೂ ಹೆಚ್ಚು ಹಬ್ಬಿರುವ ಈ ಮಾರ್ಟ್‌ನಲ್ಲಿ ದಿನನಿತ್ಯದ ವಹಿವಾಟೇ ಕೋಟ್ಯಂತರ ರೂಪಾಯಿಗಳು. ಅರಬಿ–ಇಂಗ್ಲಿಷ್ ಭಾಷೆ ಬಾರದಿದ್ದರೂ ಅವರ ಈ ವ್ಯವಹಾರಕ್ಕೆ ನಾವು 'ಭೇಷ್' ಅನ್ನಲೇಬೇಕು.

ಹೋಟೇಲ್ ಉದ್ಯಮ ಅನ್ನುವುದು ಇಲ್ಲಿಯ ಲಾಭದಾಯಕ ಉದ್ಯಮ. ಪ್ರಪಂಚದ ಎಲ್ಲಾ ಮೂಲದ ಪಂಚ ತಾರ ಹೋಟೇಲ್‌ಗಳು ಇಲ್ಲಿವೆ. ಅದು ಭಾರತದ 'ಓಬೇರಾಯ್' ಆಗಿರಬಹುದು. ಫ್ರಾನ್ಸಿನ 'ದುಸೀಟ್' ಆಗಿರಬಹುದು! ಸಮುದ್ರದ ಮಧ್ಯೆ ನಿರ್ಮಿಸಿದ 'ಬುರ್ಜ್ ದುಬ್ಯಾ' ಅಂತಹ ಹೋಟೇಲಿನ ಕೊಠಡಿಗಳಿಗೆ ಇಲ್ಲಿ ಮದುವೆ ಹಾಲಿನಂತೆ ಬುಕ್ಕಿಂಗ್ ಇರುತ್ತದೆ. ಅದರಲ್ಲಿ ಉಳಿದುಕೊಳ್ಳುವುದನ್ನು ಕೆಲವರು ಪ್ರತಿಷ್ಠೆ ಅನಿಸಿಕೊಳ್ಳುತ್ತಾರೆ. ಅಂದ ಹಾಗೆ ಇದರ ಒಂದು ದಿನದ ಬಾಡಿಗೆ ಕೇವಲ ಎರಡು ಲಕ್ಷ ರೂಪಾಯಿಗಳು!

ಶಾಂತಿ ಸೌಹಾರ್ದತೆಯ ನಾಡಿನ ದುಬ್ಯಾಯಲ್ಲಿ ಭವ್ಯ ಮಸೀದಿಗಳಿವೆ. ಚರ್ಚು, ಮಂದಿರ, ಗುರುದ್ವಾರಗಳಿವೆ. ಸುಮಾರು 140 ರಾಷ್ಟ್ರಗಳ ನಾಗರಿಕರು ವಾಸಿಸುತ್ತಿರುವ ದುಬ್ಯಾಯಲ್ಲಿ ಯಾವತ್ತೂ ಧರ್ಮದ ಹೆಸರಿನಲ್ಲಿ ವಿವಾದವಾಗಲಿ ಜಗಳಗಳಾಗಲಿ ನಡೆದಿಲ್ಲ. ರಮಝಾನ್–

ಬಕ್ರಿದ್ ಹಬ್ಬದೊಂದಿಗೆ ದೀಪಾವಳಿ–ಕ್ರಿಸ್‌ಮಸ್ಸನ್ನು ಅಷ್ಟೇ ಸಂಭ್ರಮದಿಂದ ಆಚರಿಸುವ ಇಲ್ಲಿಯ ಜನರು ಶಾಂತಿ ಪ್ರಿಯರು. ಹೀಗಾಗಿ ದುಬ್ಯಾಯ ವಾಸವೆಂದರೆ ಎಲ್ಲರಿಗೂ ಅಚ್ಚು–ಮೆಚ್ಚು.

ದುಬ್ಯಾಯ ದೊರೆ ಶೇಖ್ ಮುಹಮ್ಮದ್ ಬಿನ್ ರಾಶಿದ್ ಮಖ್ತೂಮ್ ಕೇವಲ ಆಡಳಿತ ದೊರೆಯಲ್ಲ. ಆತ ಉದಾರಿ. ಸ್ವಯಂ ಕ್ರೀಡಾಪಟು. ಕವಿತೆ–ಲೇಖನಗಳನ್ನು ಬರೆಯುವ ಬರಹಗಾರ. ಕನಸು ಕಟ್ಟಿ ನನಸು ಮಾಡುವ ರಾಯಭಾರಿ. ಸಮಸ್ತ ಅರಬ್ ರಾಷ್ಟ್ರಗಳ



ನಾಯಕರಿಗೆ ಮಾದರಿ. ತನ್ನ ದೇಶದ ಸೀಮಿತ ಸಂಪನ್ಮೂಲಗಳಿಂದ ಆಗಾಧ ಬೆಳವಣಿಗೆಗೆ ಕಾರಣನಾದ ಸರದಾರ. ಇಂತಹ ದೊರೆಗೆ ನಾವು 'ಸಲಾಂ' ಹೊಡೆಯಲೇಬೇಕು.

ಸದಾ ಕಾಲಿಗೆ ಚಕ್ರಕಟ್ಟಿ ಇಡೀ ವಿಶ್ವವನ್ನೇ ಸುತ್ತುವ ಈ ದೊರೆಗೆ ಆಯಾಸವಿಲ್ಲ– ವಿಶ್ರಾಂತಿ ಇಲ್ಲ. ಬರೇ ಪ್ರಗತಿಯ ಕನಸುಗಳು. ಆಯಾಯ ರಾಷ್ಟ್ರಗಳಲ್ಲಿ ಕಂಡದ್ದನ್ನು ತನ್ನ ದೇಶದಲ್ಲಿ ರೂಪಿಸುವ ಅವಸರ. ಹೊರ ರಾಷ್ಟ್ರದ ಲಕ್ಷಾಂತರ ಮಂದಿಗೆ ಉದ್ಯೋಗ ಕೊಟ್ಟು, ಬದುಕು ರೂಪಿಸಿದ ಈ ದೊರೆಯ ಸಹಾಯ–ಸಹಕಾರ ದೊಡ್ಡದು. ದುಬ್ಯಾ ಬೆಳೆಯಲಿ. ದೊರೆಯ ಆಯಸ್ಸು ದೀರ್ಘವಾಗಲಿ. ■

ದಿಟ್ಟ ಕಾನೂನು-ಗಟ್ಟಿ ಮಹಿಳೆಯರು

ನೀವು ದುಬ್ಯಾಯಲ್ಲಿ ವಿಮಾನದಿಂದ ಇಳಿದು, 'ಇಮಿಗ್ರೇಶನ್'ಗೆ ಕಾಲಿಟ್ಟರೆ ಮೊದಲು ಸ್ವಾಗತಿಸುವುದು ಅರಬ್ ಮಹಿಳಾ ಉದ್ಯೋಗಿಗಳು. ಅಲ್ಲಿಂದ ಬೇರೆ ಕಡೆ ಹೋದರೆ 'ಪಿಂಕ್ ಟ್ಯಾಕ್ಸಿಗಳು' ಸಾಲಿರುತ್ತದೆ. ಅದರ ಡ್ರೈವರ್‌ಗಳು ಮಹಿಳೆಯರು!

ಇನ್ನು ಪೊಲೀಸ್ ಠಾಣೆ, ವಿದ್ಯುತ್ ಇಲಾಖೆ, ದೂರವಾಣಿ ಕಛೇರಿ, ಟಿವಿ, ಪತ್ರಿಕಾ ಮಾಧ್ಯಮ, ಶಾಲೆ–ಕಾಲೇಜು ಇತ್ಯಾದಿಗೆ ಸುತ್ತು ಹಾಕಿ, ಎಲ್ಲೆಡೆಯೂ ಮಹಿಳಾ ಉದ್ಯೋಗಿಗಳು ಕಾಣಸಿಗುತ್ತಾರೆ. ಆಸ್ಪತ್ರೆಗಳಲ್ಲಿ ವೈದ್ಯರ ಸಾಲಿನಲ್ಲಿ ಅರಬರ ಯುವತಿಯೇ ಮುಂದೆ!

ಅರಬ್ ಮಹಿಳೆಯರು ಹಿಂದಿನ ಹಳೇ ಕಟ್ಟುಪಾಡುಗಳನ್ನು ಸಡಿಲಿಸಿಕೊಂಡು, ಈಗ ಪ್ರಗತಿಯ ಮುನ್ನಡೆಯಲ್ಲಿದ್ದಾರೆ. ಅದಕ್ಕೆ ಸಿಕ್ಕ ಉನ್ನತ ಶಿಕ್ಷಣವನ್ನು ಅವರು ಪೂರ್ಣವಾಗಿ ಬಳಸಿಕೊಂಡಿದ್ದಾರೆ. ಆದರೆ ಅವರು ಸಾಂಪ್ರದಾಯಿಕ ಉಡುಗೆಯಾದ ಬುರ್ಖಾವಾಗಲಿ, ಹಿಜಾಬ್ ಆಗಲಿ ಧಿಕ್ಕರಿಸಿಲ್ಲ. ಅದನ್ನು ಧರಿಸಿಕೊಂಡೇ ಉದ್ಯೋಗ ವಲಯದಲ್ಲಿ ಕಾಣಿಸಿದ್ದಾರೆ. "ಉಡುಪು ಇರುವುದು ಮೈ ಮುಚ್ಚುವುದಕ್ಕೆ. ಬಿಚ್ಚಿ ಕೊಳ್ಳಲು ಅಲ್ಲ" ಅನ್ನುವ ಅವರ ವಾದವು ಪಾಶ್ಚಿಮಾತ್ಯ ಉಡುಪಿನತ್ತ ಸಾಗುತ್ತಿರುವ ಯುವತಿಯರಿಗೆ ದೊಡ್ಡ ಸಂದೇಶ.

ಇವತ್ತು ಶಾಪಿಂಗ್ ಮಾಲ್ ಆಗಲಿ ರೆಸ್ಟೋರೆಂಟ್, ಹೊಟೇಲ್‌ಗಳಲ್ಲಿಯೇ ಆಗಲಿ ಅರಬರಿಗಿಂತ ಅನಿವಾಸಿ ಹೆಣ್ಣು ಮಕ್ಕಳು ಅಧಿಕವಾಗಿ ಸಿಗುತ್ತಾರೆ. ಅವರು ಉದ್ಯೋಗ ಮಾಡುವ ಈ ಕ್ಷೇತ್ರದಲ್ಲಿ ಯಾವತ್ತೂ ಪುರುಷರಿಂದ ಕಿರುಕುಳವಾಗಲಿ, ತೊಂದರೆಯಾಗಲಿ ಕಾಣಿಸಿಕೊಂಡಿದ್ದು ತುಂಬಾ ಅಪರೂಪ. ಹೀಗೆ ಆದರೆ, ಜೈಲು ಸೇರಿದ ಆ ವ್ಯಕ್ತಿಯನ್ನು, ಯಾವ ಜೈಲಿನಲ್ಲಿ ಕೂಡಿಟ್ಟಿದ್ದಾರೆ ಅನ್ನುವುದನ್ನು ಪತ್ತೆ ಹಚ್ಚಲೇ ಕೆಲವು ತಿಂಗಳುಗಳೇ ಬೇಕು! ಇನ್ನು ಲೈಂಗಿಕವಾಗಿ ಆತ ಕಿರುಕುಳ ನೀಡಿದ್ದರೆ, ಆತ ತನ್ನ 'ಪುರುಷತ್ವ'ದ ..... ಆ ಸಾಧನವನ್ನು ಉತ್ತಮ ವೈದ್ಯನಲ್ಲಿ ಪರೀಕ್ಷೆಪಡಿಸುವುದು ಅತೀ ಉತ್ತಮ. ಕೆಲವು ಬಾರಿ ಅದು ಬಾಳಿಡೀ ಪ್ರಯೋಜನಕ್ಕೆ ಬಾರದೇ ಹೋಗಿರಬಹುದು!

ಇಂತಹ ಶಿಕ್ಷೆಯಿಂದಲೇ ಇಲ್ಲಿ 'ಏಳು ವರ್ಷದ ಬಾಲೆಯ ಮೇಲೆ ಅತ್ಯಾಚಾರ, ಎಪ್ಪತ್ತು ವಯಸ್ಸಿನ ವೃದ್ಧೆಯ ಮೇಲೆ ಬಲತ್ಕಾರ' ಅನ್ನುವ ಬ್ರೇಕಿಂಗ್ ನ್ಯೂಸ್ ಅಪರೂಪವಾಗಿರುವುದು!

ಅಶೀರುದ್ದೀನ್ ಆಲಿಯಾ
ಮಂಜನಾಡಿ

ವ್ಯಾಪಾರದ ಸರಕು

ಸಣ್ಣ ಪ್ರಮಾಣದ ಮೊತ್ತದಿಂದ ದೊಡ್ಡ ಪ್ರಮಾಣದ ಲಾಭವನ್ನು ಗಳಿಸುವ ಹೆಣ್ಣು ವ್ಯಾಪಾರ ಇಂದು ವ್ಯಾಪಕವಾಗಿ ಹಬ್ಬಿದೆ. ಬೃಹತ್ ಪಟ್ಟಣಗಳಲ್ಲಿಯೂ ಅಪಾರ್ಟ್‌ಮೆಂಟ್‌ಗಳಲ್ಲಿಯೂ, ರೆಸ್ಟೋರೆಂಟ್‌ಗಳಲ್ಲಿಯೂ ಅತ್ಯಗತ್ಯವಾದ ಬೇಡಿಕೆಯಾಗಿ ಪರಿಣಮಿಸಿದೆ. ನಿರಾಶ್ರಿತರ, ಬಡವರ, ಶೋಷಿತವರ್ಗರ, ದುರ್ಬಲರ ಹೆಣ್ಣು ಮಕ್ಕಳನ್ನು ಬಲವಂತದ ಮೇರೆಗೂ ಆಮಿಷಗಳನ್ನೊಡ್ಡಿಯೂ, ಹಣದ ಬೇಡಿಕೆಗಾಗಿಯೂ, ಮೋಸದ ಜಾಲದಲ್ಲಿ ಸಿಲುಕಿಸಿ ಅಪಹರಣ ಮಾಡಿಸಿ, ಕೆಲಸ ಕೊಡಿಸುತ್ತೇವೆಂದು ವಂಚಿಸಿ ಹೆಣ್ಣನ್ನು ಮೈಮಾರಾಟ ದಂಧೆಗೆ ಇಳಿಸಲಾಗುತ್ತದೆ. ನಮ್ಮ ಇಂದಿನ ಕಾನೂನು ವ್ಯವಸ್ಥೆಗೂ ಸರಕಾರಕ್ಕೂ ಇದರ ಬಗ್ಗೆ ಸಂಪೂರ್ಣ ವಿವರ ಇದ್ದರೂ ಅದರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದರಲ್ಲಿ ಹಿಂದೆ ಮುಂದೆ ನೋಡುವುದು ಖೇದಕರ ವಿಷಯ. ರಾಜಕೀಯ ಲಾಭಕ್ಕಾಗಿ ಇಂತಹವುಗಳನ್ನು ಮುಚ್ಚಿಡಲಾಗುತ್ತದೆ ಎನ್ನುವುದು ಬೇರೆ ವಿಚಾರ. ಮಹಿಳಾ ಸ್ವಾತಂತ್ರ್ಯದ ಬಗ್ಗೆ ಧ್ವನಿಯೆತ್ತುವವರು ಇಂತಹ ದಂಧೆಗಳ ಬಗ್ಗೆ ಅಥವಾ ಅದರ ವಿರುದ್ಧ ಧ್ವನಿಯೆತ್ತುವುದು ಬಹಳ ಕಡಿಮೆ. ಕೆಲವೊಮ್ಮೆ ಮೈಮಾರಾಟ ದಂಧೆಗೆ ಸಿಲುಕಿದ ಹೆಣ್ಣು ಮಕ್ಕಳು ತಮ್ಮ ಬಡತನ ನೀಗಿಸಲೂ ಅಥವಾ ಹೆತ್ತವರ ಮಕ್ಕಳ ಗಂಡನ ಚಿಕಿತ್ಸೆಗಾಗಿಯೂ ಆಗಿರಬಹುದು. ಸ್ವ ಇಚ್ಛೆಯ ಮೇರೆಗೆ ದಂಧೆಗೆ ಇಳಿದವರಾರೂ ಇಲ್ಲ. ಮುಂಬೈ, ಕಲ್ಕತ್ತ, ಚೆನ್ನೈ, ಬೆಂಗಳೂರಿನಂತಹ ಮೆಟ್ರೋ ಸಿಟಿಗಳಲ್ಲಿ ಬೃಹತ್ ಪ್ರಮಾಣದಲ್ಲಿ ಇಂತಹ ಕ್ರೌರ್ಯಗಳು ನಡೆಯುತ್ತಿದೆ. ಇದು ದೇಶಕ್ಕೆ ದೊಡ್ಡ ಮಾರಕ. ಇವುಗಳನ್ನು ನಿಲ್ಲಿಸಿ ಮುಗ್ಧ ಹೆಣ್ಣು ಮಕ್ಕಳಿಗೆ ಮುಕ್ತಿ ನೀಡುವುದು ಸರಕಾರದ ಕೆಲಸ. ಅನಗತ್ಯ ವಿಚಾರಗಳಿಗೆ ಬಜೆಟ್‌ನಲ್ಲಿ ಹಣ ಮೀಸಲಿಡುವುದರ ಬದಲು ಇಂತಹವರಿಗಾಗಿ ಮೀಸಲಿಟ್ಟು ಬದುಕು ರೂಪಿಸುವುದು ಸರಕಾರದ ಕೆಲಸ. ಮುಂದಕ್ಕೆ ಇಂತಹ ದಂಧೆಗೆ ನೂಕುವವರಿಗೆ ಕಠಿಣ ಶಿಕ್ಷೆ ಜಾರಿಗೊಳಿಸಿದರೆ ಒಂದು ಸಣ್ಣ ಬದಲಾವಣೆಯನ್ನು ಕಾಣಲು ಸಾಧ್ಯ.

ಹಣ, ಅಧಿಕಾರ ಮತ್ತು ರಾಜಕೀಯ ಸ್ವಾಧೀನ ಸ್ತ್ರೀಯ ನೋವಿಗೆ ನ್ಯಾಯ ನೀಡುವುದರಲ್ಲಿ ವಿಫಲವಾಗಿದೆ. ಪ್ರತಿಯೊಂದು ರಂಗದಲ್ಲೂ ಮಹಿಳೆ ಶೋಷಿತಳಾಗಿ ಬದುಕುತ್ತಿದ್ದಾಳೆ. ಸ್ತ್ರೀಯು ಒಂದು ಶರೀರ. ಅದು ಸಂತೆಯಲ್ಲಿ ಮಾರುವ ಸರಕೆಂದು ನಿರಂತರ ಬೋಧಿಸುವತ್ತ ಇಂದಿನ ಮಾಧ್ಯಮಗಳು ಬೆಳೆದು ಬಿಟ್ಟಿದೆ. ಉಪಭೋಗ ಸಂಸ್ಕಾರದ ಪಾಶ್ಚಾತ್ಯೀಕರಣದ ಬೆನ್ನೆಲುಬಾಗಿ ಸೀರಿಯಲ್, ಸಿನಿಮಾ, ಜಾಹೀರಾತು, ಮೋಡಲಿಂಗ್ ಫ್ಯಾಶನ್, ಶಾಪಿಂಗ್ ಮಾಲ್‌ಗಳು, ಹೆಣ್ಣನ್ನು ಹೆಚ್ಚು ಬಳಕೆ ಮಾಡಿ ಆಕರ್ಷಿತ ವಸ್ತುವನ್ನಾಗಿಸಿ ವ್ಯಾಪಾರ ನಡೆಸುತ್ತಿದೆ. ಅದರ ಹಿಂದೆ ಅತ್ಯಾಚಾರಗಳು, ವ್ಯಭಿಚಾರಗಳು ಮೈಮಾರಾಟ ವೃತ್ತಿಗಳು ವ್ಯಾಪಕವಾಗಿ ನಡೆಯುತ್ತಿದೆ. ಜಗತ್ತು ಅರಿಯದಂತೆ ಹಲವು ಸತ್ಯ ಘಟನೆಗಳು ಮುಚ್ಚಿ ಮರೆಯಾಗುತ್ತಿದೆ. ಕೆಲವೊಂದು ಘಟನೆಗಳು ಹೆಣ್ಣು ಮಕ್ಕಳ ಸಾವಿನ ನಂತರ ಜಗತ್ ಜಾಹೀರಾಗುತ್ತದೆ. ಅವು ರಾಜಕೀಯ ಪ್ರಭಾವದಿಂದ ಮುಚ್ಚಿಹೋಗುತ್ತದೆ. ಹಾಸ್ಪಿಟಲ್‌ಗಳು, ಬೃಹತ್ ಶಿಕ್ಷಣ ಸಂಸ್ಥೆಗಳು, ಸಿನಿಮಾಗಳು, ಟಿ.ವಿ. ಚಾನೆಲ್‌ಗಳು ಮರೆಯಲ್ಲಿ ನಡೆಯುವ ಮೈಮಾಟದ ಕೇಂದ್ರವಾಗಿ ಪರಿಣಮಿಸಿದೆ.

ಒಂದು ಕಡೆ ಯಾತನೆಯಿಂದ ದಂಧೆಗೆ ಇಳಿದ ಮುಗ್ಧ ಹೆಣ್ಣು ಮಕ್ಕಳಾದರೆ, ಹಣದ ಗಳಿಕೆಗಾಗಿ ಪ್ರಶಸ್ತಿಗಾಗಿ ಮೈಯನ್ನು ಮಾರುವ ಹೆಣ್ಣು ಮಕ್ಕಳನ್ನು ಕಾಣಲು ಸಾಧ್ಯ. ಇಂದಿನ ಹೆಚ್ಚಿನ ಜಾಹಿರಾತುಗಳಲ್ಲಿ 90%ದಷ್ಟು ಪ್ರದರ್ಶಿಸಲಾಗುತ್ತದೆ. ಐಟಂ ಸಾಂಗ್‌ಗಳಿಲ್ಲದೆ ಸಿನಿಮಾಗಳು ಸಹ ಹೊರಹೊಮ್ಮುವುದಿಲ್ಲ. ಅಡ್ಮಿನಿಸ್ಟ್ರೇಟಿವ್‌ಗಳಲ್ಲಿ ರಿಸೆಪ್ಶನ್‌ಗಳಲ್ಲಿ ಮಹಿಳೆಯ ಆಕರ್ಷಣೀಯ, ಶಾಪಿಂಗ್ ಮಾಲ್‌ಗಳಲ್ಲಿ ಮಹಿಳೆಯರು ಪ್ರಧಾನವಾಗಿ ಬಿಟ್ಟಿದ್ದಾರೆ. ಇದೆಲ್ಲವೂ ಒಂದು ರೀತಿಯ ದಂಧೆಯಾಗಿದೆ ಎಂದು ಜಗತ್ತಿಗೆ ಅರಿಯದಾಗಿದೆ. ಪಾಶ್ಚಾತ್ಯ ಸಂಸ್ಕೃತಿಯ ಅತಿಯಾದ ಬಳಕೆಯು ಹೆಣ್ಣಿನ ಬದುಕಿಗೆ ಬೆಲೆಯಿಲ್ಲದಂತಾಗಿಸಿದ್ದು. ಧರ್ಮಗಳಾವುದು ಆ ರೀತಿಯ ಸಂಸ್ಕಾರವನ್ನು ಕಲಿಸುವುದಿಲ್ಲ. ಪ್ರೇರೇಪಿಸುವುದಿಲ್ಲ. ಹೆಣ್ಣು ಸಂಸ್ಕಾರ ವತಿಯಳಾಗಿ ಬದುಕಬೇಕು ಸಂಸ್ಕಾರವತಿಯಾದವಳಿಗೆ ಮಾತ್ರ ಸುಶೀಲೆಯಾಗಿ ಬದುಕಲು ಸಾಧ್ಯ. ■

ಹೋಂ ರೂಲ್

ಕ್ಲಿಕ್...
ಕ್ಲಿಕ್...
ಕ್ಲಿಕ್...
ಕ್ಲಿಕ್...
ಕ್ಲಿಕ್...
ಕ್ಲಿಕ್...
ಕ್ಲಿಕ್...
ಕ್ಲಿಕ್...
ಕ್ಲಿಕ್...
ಕ್ಲಿಕ್...
hi.. how r u?
ಕ್ಲಿಕ್...
ಕ್ಲಿಕ್...
ಕ್ಲಿಕ್...
ಕ್ಲಿಕ್...
ಕ್ಲಿಕ್...
ಕ್ಲಿಕ್...
ಕ್ಲಿಕ್...
ಕ್ಲಿಕ್...
ಕ್ಲಿಕ್...
ಕ್ಲಿಕ್...
ಕ್ಲಿಕ್...
ಕ್ಲಿಕ್...
ಕ್ಲಿಕ್...
ಕ್ಲಿಕ್...
ಕ್ಲಿಕ್...
ಕ್ಲಿಕ್...
ಕ್ಲಿಕ್...
ಕ್ಲಿಕ್...
ಇವರಿಗೆ ಒಂದು ಜೀವನವೇ ಇರುವುದಲ್ಲವೇ? ಇವರಿಗೆ ಪರಸ್ಪರ ಮಾತನಾಡಬಹುದಲ್ಲಾ?
ಹೇ, ಪೆದ್ದ, ಅವರು ಮಾತನಾಡುತ್ತಿದ್ದಾರೆ..., ಕಾರಣವೇನೆಂದರೆ ಅವರಲ್ಲಿ ತುಂಬಾ ಜಿ.ಬಿ. (GB) ಬಾಕಿ ಉಳಿದಿದೆ...!

ಮಕ್ಕಳರಂಗ

ಮರವೂ, ಮಕ್ಕಳೂ

ಹಾದಿಯಾ ತಮನ್ನ

ಅದೊಂದು ಸರಕಾರಿ ಶಾಲೆಯಾಗಿತ್ತು. ಶಾಲೆಯ ಮುಂದಿನ ರಸ್ತೆಯಲ್ಲಿ ಒಂದು ದೊಡ್ಡ ಮರವಿತ್ತು. ಬಹಳ ವರ್ಷವಾಗಿರಬಹುದಾದ ಅಜ್ಜಿಮರ. ಹಲವಾರು ರೀತಿಯ ಆಟಗಳನ್ನು ಆಡಲು ಆ ಮರದ ನೆರಳು ಬಹಳ ಉಪಕಾರವಾಗುತ್ತಿತ್ತು.

ದಾರಿಹೋಕರಿಗೂ ಬಹಳ ಪ್ರಯೋಜನಕಾರಿಯಾಗಿತ್ತು. ಮರದಲ್ಲಿ ಸಣ್ಣ ಹಾಗೂ ದೊಡ್ಡ ಗೂಡುಗಳನ್ನು ಕಟ್ಟಿ ಹಲವಾರು ಹಕ್ಕಿಗಳು ಸಂಸಾರ ನಡೆಸುತ್ತಿದ್ದವು. ಪ್ರಾಯ ಹೆಚ್ಚಾದ್ದರಿಂದ ಅದರ ಗೆಲ್ಲುಗಳಲ್ಲಿ ಹಲವು ಒಣಗಲಾರಂಭಿಸಿತು. ಮಳೆಗಾಲದಲ್ಲಿ ಅದರ ಬುಡದ ಮಣ್ಣು ಕೊಚ್ಚಿ ಹೋಗಿ ಬೇರುಗಳು ಹೊರಕಾಣುತ್ತಿತ್ತು. ಇನ್ನು ತಾನು ಹೆಚ್ಚು ಕಾಲ ಬದುಕಲಾರನೆಂದು ಮರಕ್ಕೆ ಅನಿಸಿತು. ಆದರೂ ಯಾರೂ ತನ್ನನ್ನು ಗಮನಿಸುವುದಿಲ್ಲವೆಂದು ಮರಕ್ಕೆ ದುಃಖವಿತ್ತು.

ಇಲ್ಲದಿದ್ದರೂ ಆ ಮನುಷ್ಯರನ್ನು ಏಕೆ ದೂರಬೇಕು? ಅವರಿಗೆ ಅವರ ವಿಷಯ ನೋಡಿಕೊಳ್ಳಲು ಸಮಯವಿಲ್ಲ. ಹೀಗಿರುವಾಗ ಒಂದು ಮರದ ವಿಷಯದಲ್ಲಿ ಚಿಂತಿಸಲು ಅವರಿಗೆ ಸಾಧ್ಯವಿದೆಯೇ?

"ಈ ಮರದ ಬೇರು ಹೀಗೆ ಮೇಲೆ ಬಂದರೆ ಮರ ಕುಸಿದು ಬೀಳಲಾರದೇ? ಅದರ ಬುಡದಲ್ಲಿ ಕುಳಿತು ಮದರಂಗಿಯ ಚಂದವನ್ನು ನೋಡುತ್ತಿದ್ದ ಎಂಟನೇ ತರಗತಿಯ ನಿಯಾಫ ಗೆಳತಿಯೊಡನೆ ಕೇಳಿದಳು. "ಬೇರು ಮೇಲೆ ಬಂದರೆ ಮರ ಕುಸಿದು ಬೀಳುತ್ತದೆಂದು ನಿನಗೆ ಹೇಳಿದವರಾರು? ಗೆಳತಿಯನ್ನು ಮೀರಾ ತಮಾಷೆ ಮಾಡಿದಳು."

"ಬೇರುಗಳೇ ಮರ, ಗಿಡಗಳನ್ನು ಮಣ್ಣಿನೊಡನೆ ಬಂಧಿಸುತ್ತದೆಂದು ಟೀಚರ್ ಹೇಳಿದ್ದು ಮರೆತು ಹೋಗಿದೆಯಾ? ಎಂದು ಆಕೆ ಕೇಳಿದಾಗ ಎಲ್ಲರಿಗೂ ನೆನಪಾಯಿತು. ಅವರಿಗೆ ಅದು ಒಂದೆಡೆಗೆ ಸ್ವಲ್ಪ ಬಾಗಿದಂತೆ ಕಂಡುಬಂತು. ನಾವು ಈ ವಿಷಯವನ್ನು ಮುಖ್ಯೋಪಾಧ್ಯಾಯರಲ್ಲಿ ಹೇಳೋಣ. ಇಲ್ಲದಿದ್ದರೆ ಇದು ವಾಹನಗಳ ಮೇಲೂ, ದಾರಿಹೋಕರ ಮೇಲೂ ಬೀಳಬಹುದು, ಹಕ್ಕಿ ಗೂಡುಗಳು ಅಪ್ಪಚ್ಚಿಯಾದೀತು, ವಿದ್ಯುತ್ ತಂತಿಯ ಮೇಲೂ ಬಿದ್ದು ಅಪಾಯ ಸಂಭವಿಸಬಹುದು.

ಹೀಗೆ ಅವರೆಲ್ಲರೂ ಹೆಡ್‌ಮಾಸ್ಟರ್‌ರ ಕೋಣೆಗೆ ತೆರಳಿದರು. ಏನೋ ಫೈಲ್ ನೋಡುವುದರಲ್ಲಿ ಬಿಝಿಯಾಗಿದ್ದ ಅವರು ಮಕ್ಕಳನ್ನು ಕಂಡು ತಲೆಯೆತ್ತಿ ಏನೆಂಬಂತೆ ನೋಡಿದರು. ಮಕ್ಕಳು ಮರದ ಅಪಾಯದ ಕುರಿತು ಹೇಳಿದಾಗ ಮುಖ್ಯೋಪಾಧ್ಯಾಯರು ಆಶ್ಚರ್ಯದಿಂದ ಅವರನ್ನೇ ದಿಟ್ಟಿಸಿದರು. ಇಷ್ಟೆಲ್ಲಾ ಮಕ್ಕಳು, ಟೀಚರುಗಳು, ದಾರಿಹೋಕರು ಇರುವಾಗ ಇದರ ಕುರಿತು ಯಾರಿಗೂ ಹೀಗೆ ಅನಿಸಲಿಲ್ಲವಲ್ಲಾ ಎಂದುಕೊಂಡರು. ವಿದ್ಯಾರ್ಥಿನಿಯರಿಗೆ ತರಗತಿಗೆ ಮರಳುವಂತೆ ಸೂಚಿಸಿದರು.

ಅಂದು ಸಂಜೆ ಶಾಲೆ ಬಿಟ್ಟ ಬಳಿಕ ಹೊರಗಿಳಿದ ಹೆಡ್‌ಮಾಸ್ಟರ್‌ರು ಸೀದಾ ಮರದ ಬಳಿಗೆ ಹೋದರು. ಅದನ್ನು ಕಂಡು ಸಮೀಪದ ಅಂಗಡಿಯಲ್ಲಿದ್ದ ಊರಿನ ನಾಲ್ಕೈದು ಮಂದಿ ಅಲ್ಲಿಗೆ ಬಂದರು.

ಅವರೊಡನೆ ಶಿಕ್ಷಕರು ಮರದ ಕುರಿತು ಮಾತನಾಡಿದರು.

ಆಗ ಅವರಲ್ಲೊಬ್ಬ "ಹೌದು ಸರ್, ಒಂದೆಡೆ ಸ್ವಲ್ಪ ವಾಲಿದಂತೆ ಕಾಣುತ್ತಿದೆ. ನಿಮ್ಮ ಅರಿವಿಗೆ ಬಂದದ್ದು ಒಳ್ಳೆಯದಾಯ್ತು. ಇಲ್ಲದಿದ್ದರೆ ಅನಾಹುತ ಆದ ಬಳಿಕವೇ ನಾವು ಸಾಮಾನ್ಯವಾಗಿ ಎಚ್ಚರಗೊಳ್ಳುವುದು."

"ಸತ್ಯಸಂಗತಿ ಏನೆಂದರೆ ಶಾಲೆಯ

ವಿದ್ಯಾರ್ಥಿನಿಯರೇ ಇದನ್ನು ಗಮನಕ್ಕೆ ತಂದದ್ದು. ಹಿರಿಯರು ಕಾಣದ ಹಲವಾರು ವಿಷಯ ಮಕ್ಕಳಿಗೆ ಗೋಚರಿಸುತ್ತದೆ" ಎಂದಾಗ ಎಲ್ಲರೂ ನಕ್ಕರು.

ಮರಕ್ಕೆ ಸಮಾಧಾನವಾಯಿತು. ನನ್ನ ದಯನೀಯ ಸ್ಥಿತಿ ಇವರಿಗೆ ತಿಳಿಯಿತಲ್ಲಾ? ಏನಾದರೂ ಪರಿಹಾರ ಇವರು ಕಂಡುಕೊಳ್ಳಬಹುದು. ಇವರೆಲ್ಲರಿಗೂ ನನ್ನಿಂದ ಉಪಕಾರವಿದೆಯಲ್ಲಾ...?

ಹೆಡ್‌ಮಾಸ್ಟರ್ ಶಿಕ್ಷಕರ ತುರ್ತು ಸಭೆ ಕರೆದು ವಿಷಯದ ಗಂಭೀರತೆಯನ್ನು ವಿವರಿಸಿದರು. ಮರವನ್ನು ಉಳಿಸುವ ಅಗತ್ಯದ ಕುರಿತು ಹೇಳಿದರು, ನಂತರ ನಡೆದ ಚರ್ಚೆಯಲ್ಲಿ "ನಮ್ಮ ಮಕ್ಕಳು ಅಲ್ಲಿ ಆಡುತ್ತಿದ್ದರು. ನೆರಳು ಪಡೆಯುತ್ತಿದ್ದರು ಎಂಬುದು ನಿಜ. ಅದೇ ಕಾರಣಕ್ಕೆ ಆ ಮರವನ್ನು ಸಂರಕ್ಷಿಸುವುದು ನಮ್ಮ ಕೆಲಸವೇ? ಊರಿನವರೋ ಪಂಚಾಯತೋ ಈ ಕೆಲಸ ವಹಿಸಲಿ" ಎಂಬ ಸಲಹೆಗಳು ಬಂತು.

ವಿಮರ್ಶೆಗಳು ಹೆಚ್ಚಾದಾಗ ಸಹನೆ ಕಳಕೊಂಡ ಹೆಡ್‌ಮಾಸ್ಟರ್ ಹೇಳಿದರು, "ನಮ್ಮ ಮಕ್ಕಳಿಗೂ, ದಾರಿಹೋಕರಿಗೂ ಉಪಕಾರವುಳ್ಳ ಮರವನ್ನು ಹಾಗೇ ಉಳಿಸಲು ನಿಮ್ಮಿಂದ ಹಣ ಸಂಗ್ರಹಿಸುತ್ತಾರೆಂಬ ಹೆದರಿಕೆ ಬೇಡ."

ಅಧ್ಯಾಪಕರಲ್ಲಿ ವಿಭಿನ್ನ ಅಭಿಪ್ರಾಯಗಳು ಮೂಡಿ ಬಂತು. ಆದರೆ ಹೆಡ್‌ಮಾಸ್ಟರ್ ಆ ಮರವನ್ನು ಉಳಿಸಲೇಬೇಕೆಂಬ ದೃಢ ನಿರ್ಧಾರದಲ್ಲಿದ್ದರು.

ಮರುದಿನ ಎಂದಿನಂತೆ ಅಸೆಂಬ್ಲಿ ನಡೆಯಿತು. ಹೆಡ್‌ಮಾಸ್ಟರ್ ಶಾಲಾ ಅಧ್ಯಯನದ ಕುರಿತು ಮಾತನಾಡಿದ ಬಳಿಕ ಮರದ ಕುರಿತು ಹೇಳಿದರು.

ನಮ್ಮದು ಒಂದರಿಂದ 8ನೇ ತರಗತಿ ವರೆಗಿನ ಶಾಲೆ. 8ನೇ ತರಗತಿಯ ಮಕ್ಕಳು ಈ ಬಾರಿ ಶಾಲೆ ಬಿಡುತ್ತಾರೆ. ಆದ್ದರಿಂದ ಅವರ ನೆನಪಿಗಾಗಿ ವಾಲಿರುವ ಆ ಮರವನ್ನು ಉಳಿಸಬೇಕು. ಅದರ ಸುತ್ತಲೂ ಕಲ್ಲುಕಟ್ಟಿ ಸಂರಕ್ಷಿಸಿದರೆ ತುಂಬಾ ಕಾಲ ಬಾಳಬಹುದು. ನಿಮ್ಮ ನಂತರದ ವಿದ್ಯಾರ್ಥಿಗಳಿಗೆ, ದಾರಿಹೋಕರಿಗೆ ಅದರಲ್ಲಿ ಬದುಕುವ ಹಕ್ಕಿಗಳಿಗೆ ಬಹಳ ಉಪಕಾರವಾಗುತ್ತದೆ... ಆದರೆ.. ಗುರುಗಳು ಇಷ್ಟು ಹೇಳಿ ನಿಲ್ಲಿಸಿದರು.

"ಅದಕ್ಕೆ ಹಣ ಖರ್ಚಾಗುತ್ತದೆ. ಅದನ್ನು 8ನೇ ತರಗತಿಯ ಮಕ್ಕಳು ಕಂಡುಕೊಳ್ಳಬೇಕು."

"ನಾವು ಸಿದ್ಧರಿದ್ದೇವೆ ಸರ್, ನಾವು ತಯಾರಿದ್ದೇವೆ." ನಿಯಾಫ ಜೋರಾಗಿ ಕೂಗಿ ಹೇಳಿದಳು. ಅವಳೊಂದಿಗೆ ಎಲ್ಲರೂ ಧ್ವನಿಗೂಡಿಸಿದರು. ಮರವು ಎಲೆಗಳನ್ನು ಅಲುಗಾಡಿಸುತ್ತಾ ಸಂತೋಷವನ್ನು ಸೂಚಿಸಿತು. ■

ಮೃಗಾಲಯದ ಹಿಪ್ಪೊ

■ ಅಶದ್ ■

ಒಂದು ನಗರದಲ್ಲಿ ಮೃಗಾಲಯವೊಂದಿತ್ತು. ಆಕಾಶದಲ್ಲಿ ಹಾರುವ ಕಾಗೆಯೊಂದು ದಿನಾಲೂ ಮೃಗಾಲಯದಲ್ಲಿಳಿದು ಎಲ್ಲ ಗೂಡಿನ ಬಳಿ ಹೋಗಿ ಅವುಗಳಲ್ಲಿದ್ದ ಪ್ರಾಣಿಗಳ ಸುಖ ದುಃಖ ವಿಚಾರಿಸುತ್ತಿತ್ತು. ಎಂದಿನಂತೆ ಆ ದಿನವೂ ಕಾಗೆ ಮೃಗಾಲಯದಲ್ಲಿ ಬಂದಿಳಿಯಿತು.

ಮಧ್ಯಾಹ್ನದ ಹೊತ್ತು. ಸೂರ್ಯನು ಕೋಪಾಕುಲನಾದಂತೆ ಉರಿಯುತ್ತಿತ್ತು. ಕಾಗೆಗೆ ಬಹಳ ಆಯಾಸವೆನಿಸಿತು. ಅದು ನವಿಲುಗಳಿದ್ದ ಗೂಡಿನ ಬಳಿ ಸಾಗಿತು. ನವಿಲುಗಳೆಲ್ಲ ಅತ್ತಿಂದಿತ್ತ ಇತ್ತಿಂದತ್ತ ನಡೆದಾಡುತ್ತಿದ್ದವು. ಬಳಿಯ ಗೂಡಿನಲ್ಲಿದ್ದ ಮಂಗಗಳು ಕಪಿಚೇಷ್ಟೆ ತೋರಿಸುತ್ತಿದ್ದವು. ಸಿಂಹ ರಾಜ ಮಧ್ಯಾಹ್ನದ ನಿದ್ರೆಯಲ್ಲಿದ್ದ. ಅಲ್ಲೇ ಸ್ವಲ್ಪ ದೂರದಲ್ಲಿ ನೀರಿನ ಪಾತ್ರೆಯೊಂದಿತ್ತು. ಕಾಗೆ ಸರಳುಗಳೆಡೆಯಲ್ಲಿ ತಲೆ ತೂರಿಸಿ ನೀರು ಕುಡಿಯಲು ಪ್ರಯತ್ನಿಸಿತು. ಅಷ್ಟರ ಮಟ್ಟಿಗೆ ಅದಕ್ಕೆ ದಾಹವಾಗಿತ್ತು. ಸಿಂಹಕ್ಕೆ ಎಚ್ಚರವಾಗಬಾರದೆಂದು ಕಾಗೆ ಬಹಳ ಶ್ರಮಪಟ್ಟು ನೀರು ಕುಡಿಯಲಾರಂಭಿಸಿತು.

ಗುರ್‌ರ್... ಶಬ್ದ ಕೇಳಿ ಕಾಗೆ ಹೌಹಾರಿತು. ಕಾಗೆ ನೀರು ಕುಡಿಯುವ ಶಬ್ದಕ್ಕೆ ಸಿಂಹಕ್ಕೆ ಎಚ್ಚರವಾಗಿತ್ತು. ಅದು ಕೋಪದಿಂದ ಮತ್ತೆ ಘರ್ಜಿಸಿತು. ಇದನ್ನು ಕಾಗೆ ನೋಡಿತು.

ದೊಡ್ಡ ಜನ... ನನಗೇನೂ ನಿನ್ನ ಹೆದರಿಕೆಯಿಲ್ಲ... ಕಾಗೆ ಸ್ವಗತ ಹೇಳಿಕೊಂಡಿತು. ಸಿಂಹ ಮತ್ತೊಮ್ಮೆ ಘರ್ಜಿಸಿತು... ಕಾಗೆ ನಡುಗಲಾರಂಭಿಸಿತು. ಒಮ್ಮೆಲೇ ಆಕಾಶಕ್ಕೆ ಜಿಗಿದು ಹಾರಲಾರಂಭಿಸಿತು. ಬಳಿಕ ಇಳಿದದ್ದು ಹಿಪ್ಪೋಪೊಟಮಸ್ ಇರುವ ಜಾಗದಲ್ಲಿ. ದೊಡ್ಡ ಗೋಡೆ ಕಟ್ಟಿದ ಗೂಡಿನೊಳಗೆ ಹಿಪ್ಪೋನ ವಾಸ.

ಅಲ್ಲೇ ಮಧ್ಯದಲ್ಲಿ ನೀರಿರುವ ಕೊಳವೊಂದಿತ್ತು. ಹಿಪ್ಪೊ ಸದಾ ಅದರಲ್ಲೇ ಮುಳುಗಿರುವುದಕ್ಕೆ ಇಷ್ಟಪಡುತ್ತಿತ್ತು.

ಆದರೆ ಇಂದು ಎಲ್ಲಿ ಹುಡುಕಿದರೂ ಹಿಪ್ಪೋ ಪತ್ತೆಯಿಲ್ಲ. ಕೊಳದಲ್ಲಿಯೂ ತೊಟ್ಟು ನೀರಿರಲಿಲ್ಲ. ಒಂದು ಮರದಡಿಯಲ್ಲಿ ಹಿಪ್ಪೊ

ನಿಂತಿತ್ತು. ಜೊತೆಗೆ ಅದರ ಮರಿಯೂ ಇತ್ತು. ಕಾಗೆ ಅವುಗಳ ಬಳಿ ಹೋಯಿತು. ನೋಡಿದರೆ ಇಬ್ಬರೂ ರಕ್ತದಲ್ಲಿ ತೋಯ್ದಂತಿದ್ದಾರೆ. ಕಾಗೆ ಕಾರಣ ವಿಚಾರಿಸಿತು. ಹಿಪ್ಪೊ ಹೇಳಿತು.

"ನಮ್ಮ ಬೆವರಿನ ಬಣ್ಣವೇ ಕೆಂಪು. ನಿನಗೆ ಗೊತ್ತಿರಲಿಲ್ಲವೇ? ನಾನು ನನ್ನ ಮರಿಯೂ ಸೆಕೆಯಲ್ಲಿ ಬೆವರಿಳಿಸುತ್ತಿದ್ದೇವೆ. ಹೆಚ್ಚಿನ ಸೆಕೆ ಸಹಿಸಿಕೊಳ್ಳಲು ನಮಗೆ ಸಾಧ್ಯವಿಲ್ಲ. ಕೊಳದಲ್ಲಿ ನೀರಿಲ್ಲದಿದ್ದರೆ ನಾವು ಸತ್ತೇ ಹೋಗುವೆವು."

ಹಿಪ್ಪೋನ ಮಾತು ಕೇಳಿ ಕಾಗೆಗೆ ಬಹಳ ಬೇಸರವಾಯಿತು. ನೀವು ಬೇಸರಿಸ ಬೇಡಿ. ನಾನೀಗ ಬಂದೆ ಎಂದು ಕಾಗೆ ಹಾರಿ ಹೋಯಿತು. ಇಡೀ ಮೃಗಾಲಯ ವನ್ನು ಸುತ್ತಿ ನೋಡಿದರೂ ಎಲ್ಲಿಯೂ ತೊಟ್ಟು ನೀರಿಲ್ಲ. ಮೃಗಾಲಯದ ಕೆಲಸ ಗಾರರಿಗೆ ರಜಾ ದಿನವಾಗಿರಬಹುದು. ಯಾರೂ ಕಾಣಿಸುತ್ತಿರಲಿಲ್ಲ. ಹಿಪ್ಪೊನ ಮರಿಯ ಕೂಗು ಕೇಳಿ ಕಾಗೆಗೆ ಕಣ್ಣೀರು

ತುಂಬಿಬಂತು.

ದೂರದಲ್ಲಿ ಒಂದು ದೊಡ್ಡ ನೀರಿನ ಟ್ಯಾಂಕ್ ಕಾಣಿಸಿತು. ಕಾಗೆ ಅತ್ತ ಹಾರಿ ಒಳಗೆ ಇಣುಕಿತು. ನೋಡುವಾಗ ಟ್ಯಾಂಕಿ ತುಂಬ ನೀರಿದೆ. ಅದಕ್ಕೆ ಒಂದು ಪೈಪನ್ನು ಸಿಕ್ಕಿಸಲಾಗಿತ್ತು. ಎಷ್ಟು ಪ್ರಯತ್ನ ಪಟ್ಟರೂ ಅದನ್ನು ತಿರುಗಿಸಲು ಕಾಗೆಗೆ ಸಾಧ್ಯವಾಗಲಿಲ್ಲ.

ಸ್ವಲ್ಪ ಹೊತ್ತಾದಾಗ ಕೊಳದಲ್ಲಿ ನೀರು ತುಂಬುವ ಶಬ್ದ ಕೇಳಿಸಿತು. ನೋಡು ತ್ತಿದ್ದಂತೆ ಕೊಳ ತುಂಬಿತು. ಹಿಪ್ಪೊ ತನ್ನ ಮರಿಯೊಂದಿಗೆ ಸಂತೋಷದಿಂದ ನೀರಾಟ ಆಡ ತೊಡಗಿತು. ಕಾಗೆ ಅಲ್ಲಿ ಬಂದು ಸಂತೋಷದಿಂದ ಅವುಗಳ ಆಟವನ್ನು ನೋಡಿ ನಿಂತಿತು. ಕಾಗೆಗೆ ಧನ್ಯವಾದ ಹೇಳಿತು ಹಿಪ್ಪೋ. ಆಗ ಕಾಗೆ "ನನಗಲ್ಲ ಆ ಮಂಗನಿಗೆ ಧನ್ಯವಾದ ಹೇಳಬೇಕು" ಎಂದಿತು. ಕಾಗೆ ಪೈಪ್ ತಿರುಗಿಸಲು ಮಂಗನ ಸಹಾಯ ಪಡೆದಿತ್ತು. ಅದು ಮೃಗಾಲಯಕ್ಕೆ ಕಾಗೆಯಂತೆಯೇ ಹೊರಗಿನಿಂದ ಬಂದಿತ್ತು. ಹಿಪ್ಪೋ ಅವುಗಳನ್ನು ಪ್ರೀತಿಯಿಂದ ನೋಡಿತು. ಮಂಗ "ನಾನಿಲ್ಲಿ ನಿಂತಿದ್ದರೆ ನನ್ನನ್ನು ಈ ಮನುಷ್ಯರು ಗೂಡಿಗೆ ಸೇರಿಸಬಹುದೆಂದು ನೆಗೆದು ಮರ ಹತ್ತಿ ಮಾಯವಾಯಿತು." ಕಾಗೆಯೂ ತನ್ನ ಪಾಡಿಗೆ ಹೊರಟು ಹೋಯಿತು. ಹಿಪ್ಪೋ ಕಾಗೆ ತನಗೆ ಮಾಡಿದ ಸಹಾಯವನ್ನು ನೆನೆಯುತ್ತಾ ಅದಕ್ಕೆ ಶುಭ ಹಾರೈಸಿತು. ■

ಕರ್ನಾಟಕದಲ್ಲಿ ಮಹಿಳೆಯರಿಂದ ನಡೆಸಲ್ಪಡುವ ಏಕೈಕ ಮಾಸಿಕ

₹ 250/-

ವಾರ್ಷಿಕ ಚಂದಾ ಹಣ

ಇಂದೇ ಚಂದಾದಾರರಾಗಿರಿ...

ಚಂದಾ ಹಣ ಮುಗಿದವರು M.O. ಅಥವಾ ಬ್ಯಾಂಕ್ ಖಾತೆಗೆ
ಹಣ ಜಮಾ ಮಾಡಿ 9901318820 ಸಂಖ್ಯೆಗೆ ತಿಳಿಸಿ.

ANUPAMA MAHILA MASIKA
Syndicate Bank, Mission Street, Mangalore
A/c. No. 01043070000966, IFC Code: SYNB0000104



ಗಲ್ಫ್ ರಾಷ್ಟ್ರಕ್ಕೆ
ವರ್ಷಕ್ಕೆ
ರೂ. 1000/-

ಹಿದಾಯತ್ ಸೆಂಟರ್, ಬೀಬಿ ಅಲಾಬಿ ರಸ್ತೆ, ಮಂಗಳೂರು. Ph: 9901318820
Email: anupamamasika@gmail.com website: www.anupamamonthly.com

ಹೃದಯದ ಮಾತು

ಇಂದು ಜಗತ್ತಿನ ಅತ್ಯಂತ 'ಕ್ರೂರಿ'ಗಳು ಯಾರು? ಎಂದು ಕೇಳಿದರೆ ಜಗತ್ತು 'ಐಸಿಸ್' ಎಂಬ ಭಯೋತ್ಪಾದಕರತ್ತ ಬೆರಳು ತೋರಿಸುತ್ತದೆ. ಇಂದು ಅವರಿಗಿಂತಲೂ ಹೆಚ್ಚು 'ಕಟುಕ' ಮನಃ ಸ್ಥಿತಿಯ ಧರ್ಮದ್ವೇಷಿಗಳು ನಮ್ಮದೇ ಭಾರತದಲ್ಲಿ ಇದ್ದಾರೆ ಎನ್ನುವುದನ್ನು ರಾಜಸ್ಥಾನದ ಕೊಲೆಗಟುಕ ಶಂಭೂಲಾಲ್ ಸಾಬೀತುಪಡಿಸಿದ್ದಾನೆ. ಕೂಲಿ ಕಾರ್ಮಿಕನಾದ ಓರ್ವ ಅಲ್ಪಸಂಖ್ಯಾತ ವರ್ಗದ ಮಧ್ಯವಯಸ್ಕನನ್ನು ಮಚ್ಚಿನಿಂದ ಕೊಚ್ಚಿ ಹಾಕಿ, ತರುವಾಯ ಪೆಟ್ರೋಲ್ ಹಾಕಿ ಜೀವಂತ ಸುಡುವುದನ್ನು ತಾನೇ ವೀಡಿಯೋ ಮಾಡಿ ಜಾಲತಾಣದಲ್ಲಿ ಪ್ರಸಾರ ಮಾಡುತ್ತಾನೆ! ಮುಸ್ಲಿಮ್ ದ್ವೇಷಿಯಾದ ಈ ವ್ಯಕ್ತಿಗೆ ತಾನು ಎಸಗಿದ ಈ ಹೇಯ ಕೃತ್ಯಕ್ಕೆ ಎಳ್ಳಷ್ಟೂ ದುಃಖವಿಲ್ಲ. ಅದರ ಬಗ್ಗೆ ಹೆಮ್ಮೆ ಪಟ್ಟುಕೊಳ್ಳುವ ಇವನಿಗೆ ಈ ದೇಶದಲ್ಲಿ ತನ್ನ ಹೇಯ ಕೃತ್ಯವನ್ನು ಮೆಚ್ಚಿ ಬೆನ್ನು ತಟ್ಟಿ ರಕ್ಷಣೆ ಮಾಡುವ ವರ್ಗ ಇದೆಯೆಂದು ತಿಳಿದಿದೆ. ನೆಪ ಮಾತ್ರಕ್ಕೆ ಈ ಅಪರಾಧಕ್ಕೆ ಜೈಲು ಶಿಕ್ಷೆ ಸಿಗಬಹುದಷ್ಟೆ. ಮುಂದೆ ಇವನೂ ರಾಜಕಾರಣಿಯಾಗಿ ಜೈಕಾರ ಪಡೆಯಬಹುದು. ಭಾರತವನ್ನು ಧರ್ಮದ ಆಧಾರದಲ್ಲಿ ಒಡೆಯುವ ಕೆಲಸ ಇಂದಿನ ರಾಜಕೀಯದ ತಂತ್ರವಾಗಿದೆ. ಕೇವಲ ಅಧಿಕಾರದ ಕುರ್ಚಿಗಾಗಿ ಅದೆಷ್ಟು ಅಮಾಯಕರ ಬಲಿ ತೆಗೆದುಕೊಳ್ಳುತ್ತಿದ್ದಾರೆ ಈ ರಾಜಕಾರಣಿಗಳು. ರಾಜ್ಯದಲ್ಲಿ ಗಲಾಟೆ, ದೊಂಬಿ, ಕೊಲೆಯನ್ನು ಉಂಟು ಮಾಡಿ 'ಶಾಂತಿ'ಯನ್ನು ಹಾಳು ಮಾಡುವ ಸಲಹೆಯನ್ನು ಕೇಂದ್ರದ ಓರ್ವ ಗಣ್ಯ ರಾಜಕಾರಣಿ ನೀಡಿದ್ದಾರೆ ಎಂಬ ಸತ್ಯ ಬಹಿರಂಗವಾಗಿತ್ತು. ಅದರ ಒಂದು ಪ್ರಯೋಗ ಉತ್ತರ ಕರ್ನಾಟಕದಲ್ಲಿ ಸ್ಫೋಟಗೊಂಡಿದೆ. ದೇಶದಲ್ಲಿ ರಕ್ತ ಹರಿಸಿ, ಬೆಂಕಿ ಉರಿಸಿ, ಶಾಂತಿ ಕೆಡಿಸಿ ಇವರು 'ಅಧಿಕಾರ'ಕ್ಕೆ ಬರುತ್ತಾರೆ. ಬದುಕನ್ನು 'ಶಾಶ್ವತ' ಎಂದು ತಿಳಿದ ಮೂರ್ಖ ವರ್ಗ ಇದು. 'ಮುಸ್ಲಿಮ್'ರೇ ಇವರ ಟಾರ್ಗೆಟ್ ಆಗಿರುತ್ತಾರೆ. ಕೇವಲ ದೆಹಲಿಯ ಗದ್ದುಗೆ ಏರಲು ಇಷ್ಟೊಂದು ದ್ವೇಷ ಸಾಧನೆಯ ಕೃತ್ಯಗಳೇಕೆ? ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಫಾರೂಕ್ ಅಬ್ದುಲ್ಲಾರವರನ್ನು ದೆಹಲಿಯ ಹಿಂದಿ ಟಿ.ವಿ. ಚಾನೆಲ್‌ನ ನಿರೂಪಕ ಬಹಿರಂಗ ಚರ್ಚಾ ವೇದಿಕೆಯಲ್ಲಿ ಪ್ರಶ್ನಿಸುತ್ತಾನೆ. "ನಿಮ್ಮನ್ನು ಹಿಂದೂಸ್ತಾನಿ ಎಂದು ಪರಿಗಣಿಸುತ್ತೀರಾ?!" ಪ್ರಶ್ನೆ ಕೇಳಿ ಕೆರಳಿ ಕೋಪದಲ್ಲೇ ಅವರು ಟಿ.ವಿ.ಯವನಿಗೆ ಕೇಳುತ್ತಾರೆ, "ನಿಮಗೆ ನನ್ನ ಭಾರತೀಯತೆಯ ಬಗ್ಗೆ ಅನುಮಾನ ಇದೆಯೇ?" ಯಾಕೆ ನಿಮಗೆ ಇಂತಹ ಪ್ರಶ್ನೆ ಕೇಳಬೇಕೆನಿಸಿತು?! ಎಷ್ಟು ಧೈರ್ಯ ನಿಮಗೆ? ಭಾರತದ ಮುಸ್ಲಿಮರು ಚೀನಾ ಅಥವಾ ಪಾಕಿಸ್ತಾನದಿಂದ ಬಂದವರಲ್ಲ" ಎಂದರು. ಮುಸ್ಲಿಮರ ದೇಶಪ್ರೇಮವನ್ನು ಸಂಶಯಿಸುವಂತಹ ವಾತಾವರಣವನ್ನು ಧರ್ಮದ್ವೇಷಿಗಳು ಸೃಷ್ಟಿಸಿ ಬಿಟ್ಟಿದ್ದಾರೆ. ನೈಜ ಹಿಂದೂ ಬಾಂಧವರನ್ನು ಇವರೊಂದಿಗೆ ನಾವು ಜೋಡಿಸಲೇಬಾರದು. ಗಾಂಧೀಜಿ, ವಿವೇಕಾನಂದ, ಬಸವೇಶ್ವರ, ನಾರಾಯಣಗುರುಗಳು ಪ್ರೀತಿಸಿ, ಗೌರವಿಸಿದ ಹಿಂದೂ ಧರ್ಮವು ಪವಿತ್ರವಾದದ್ದು. ಮಾನವೀಯತೆಯನ್ನು ನೆಚ್ಚಿಕೊಂಡು ಮಾನವ ಧರ್ಮಕ್ಕೆ ಆದ್ಯತೆ ನೀಡಿದವರು ನೈಜ ಹಿಂದೂಗಳು. ಇಂದಿನ ಅಮಿತ್ ಶಾರ, ಮೋಹನ್ ಭಾಗವತ್‌ರ ಹಿಂದುತ್ವ ಈ ದೇಶಕ್ಕೆ ಅಪಾಯಕಾರಿಯಾಗಿದೆ. ಹಿಂದೂಗಳ ದೊಡ್ಡದೊಂದು ವರ್ಗ ಅನ್ಯಾಯವನ್ನು ವಿರೋಧಿಸುತ್ತದೆ. ಆದ್ದರಿಂದ ನಾವಿಂದು ಕಾಮಾಲೆ ರೋಗಿಯಂತೆ ಎಲ್ಲವನ್ನೂ ಒಂದೇ ಬಣ್ಣದಲ್ಲಿ ವೀಕ್ಷಿಸದೇ ಕೆಡುಕು ಮತ್ತು ಒಳಿತನ್ನು ಪರಿಶೀಲಿಸುವ ಬುದ್ಧಿ ಹೊಂದಬೇಕಾಗಿದೆ. ಬೆಳೆಯುವ ನಮ್ಮ ಮಕ್ಕಳ ಎದುರು ಪರಧರ್ಮವನ್ನು ದ್ವೇಷಿಸುವ ಮಾತುಗಳನ್ನು ಉದುರಿಸದೆ ಮಾನವ ಪ್ರೇಮದ, ಸೌಹಾರ್ದತೆಯ, ದೇಶಪ್ರೇಮವನ್ನು ಹೆಚ್ಚಿಸುವ ಮಾತುಗಳನ್ನೇ ಹೆತ್ತವರು ಆಡಬೇಕು. ನಮ್ಮ ಮಕ್ಕಳಲ್ಲಿ ಭವಿಷ್ಯದಲ್ಲಿ ಕ್ರಿಮಿನಲ್ ಮನಃಸ್ಥಿತಿ ಹುಟ್ಟದಂತೆ ನಾವು ಎಚ್ಚರಿಸಬೇಕಾಗಿದೆ. ಮಕ್ಕಳ ಬದುಕು ಹಸಿರು ಬಣ್ಣ, ಕೇಸರಿಯಲ್ಲಿ ಹಂಚಿ ಹೋಗದಂತೆ ಕಾಪಾಡಬೇಕಾಗಿದೆ. ಮುಖ್ಯವಾಗಿ ನಮ್ಮ ಯುವ ಜನಾಂಗಕ್ಕೆ ಪ್ರವಾದಿ ಮುಹಮ್ಮದ್(ಸ)ರ ಜೀವನದ ಮಾದರಿಯನ್ನು ಅರಿತುಕೊಳ್ಳುವ ಅಗತ್ಯ ಇದೆ. ಸಹನಾಶೀಲತೆ ಮತ್ತು ತ್ಯಾಗ, ಕರುಣೆಯನ್ನು ಅಳವಡಿಸಿಕೊಳ್ಳುವುದು ಅವಶ್ಯವಾಗಿದೆ.

ಒಳಿತು ಮತ್ತು ಕೆಡುಕುಗಳು ಸಮಾನವಲ್ಲ. ನೀವು ಕೆಡುಕನ್ನು ಒಳಿತಿನ ಮೂಲಕ ದೂರೀಕರಿಸಿರಿ. ನಿಮ್ಮೊಂದಿಗೆ 'ಹಗೆ'ತನ ಕಟ್ಟಿಕೊಂಡವನೂ ನಿಮ್ಮ ಆಪ್ತ 'ಮಿತ್ರ'ನಾಗಿ ಬಿಡುವುದನ್ನು ನೀವು ಕಾಣುವಿರಿ. ಇದು ಸಹನಾಶೀಲರ ಗುಣವಾಗಿದೆ." ಈ ಮೇಲಿನ ಕುರ್‌ಆನ್ ಸಂದೇಶವನ್ನು ಇಂದು ನಾವು ಸರಿಯಾಗಿ ಅನುಸರಿಸಿದರೆ 'ದ್ವೇಷ' ಅಳಿದು ಬಿಡುವುದು ಖಂಡಿತ. ಇಸ್ಲಾಮ್ ಕಲಿಸುವ ಇಂತಹ ಮಾನವೀಯ ಸಂಬಂಧಗಳ ಮೌಲ್ಯವನ್ನು ನಾವು ಅರಿಯಬೇಕಾದರೆ ಧರ್ಮವನ್ನು ಸರಿಯಾಗಿ ಮನನ ಮಾಡಬೇಕು. ಇಂದು ಜಾಲತಾಣಗಳಲ್ಲಿ ಪತ್ರಿಕೆ, ಟಿ.ವಿ.ಯಲ್ಲಿ ಮನಸ್ಸುಗಳನ್ನು ಒಡೆದು ಹಾಕುವ, ದ್ವೇಷ ಬಿತ್ತುವ ಸಂದೇಶಗಳು ಹರಿದಾಡುತ್ತಿದೆ. "ನೀನು ತಿನ್ನುವುದನ್ನೇ ನಿನ್ನ ನೆರೆಮನೆಯವನಿಗೂ ತಿನ್ನಿಸು, ಪರ ಧರ್ಮವನ್ನು ಟೀಕಿಸಲು (ನಿಂದಿಸಲು) ಹೋಗದಿರು. ನಿರಪರಾಧಿಯ ರಕ್ತವನ್ನು ಹರಿಸದಿರು, ಮನೆ ಬಾಗಿಲಿಗೆ ಬಂದವರನ್ನು ಬರೀ ಕೈಯಲ್ಲಿ ಕಳಿಸದಿರು, 'ಸಾಲ' ತೀರಿಸಲು ಸತಾಯಿಸದಿರು... ಮುಂತಾದ ಮಾನವೀಯತೆಯ ಸಂದೇಶವನ್ನು ಸಾರುವ ಧರ್ಮವನ್ನು 'ಕಳಂಕ'ಕ್ಕೆ ದೂಡಬೇಡಿರಿ. ಇತ್ತೀಚೆಗೆ ನಮ್ಮ ಜಿಲ್ಲೆಯ ಹಿರಿಯ ವಿದ್ವಾಂಸರಾದ ಸಯ್ಯದ್ ಯೂಸುಫ್ ಮೌಲಾನರು ಮರಣಗೊಂಡರು. ಒಬ್ಬರ ಮರಣಾನಂತರವೇ ಅವರು ಹೇಗೆ ಬದುಕಿದ್ದರೆಂದು ಜನರ ಮಾತುಗಳಲ್ಲಿ ವ್ಯಕ್ತವಾಗುವುದು. ಮೌಲಾನರು ಅವರ ಜೀವಿತ ಕಾಲದಲ್ಲಿ ಒಬ್ಬರೊಂದಿಗೂ 'ದ್ವೇಷ, ಕೋಪ, ಜಗಳ ಮಾಡಿದವರಲ್ಲ. ಅವರ ಸೌಮ್ಯ ಮತ್ತು ಸರಳ ಜೀವನ ಹಾಗೂ ಜನರನ್ನು ಪ್ರೀತಿಸಿ, ಆಪ್ತರನ್ನಾಗಿಸುವ ಅವರ ನಡವಳಿಕೆಯೇ ಒಬ್ಬ ನೈಜ ಮುಸ್ಲಿಮನ ಗುರುತಾಗಿರುತ್ತದೆ. 'ಇಸ್ಲಾಮ್'ಗೆ ಬೇಕಾಗಿರುವುದು ಇಂತಹ ಆದರ್ಶವಾದಿಗಳು. ತಲವಾರು, ಗನ್, ಗಾಂಜಾದಲ್ಲಿ ಬಿದ್ದು ತನ್ನನ್ನು 'ಮುಸ್ಲಿಮ್' ಎಂದು ಕರೆಸಿಕೊಳ್ಳುವ ವರ್ಗದಿಂದ 'ಕಳಂಕ' ಮಾತ್ರ ಲಭ್ಯವಾಗುವುದು.

ಶಹನಾಝ್ ಎಂ.
(ಪ್ರಧಾನ ಸಂಪಾದಕಿ)

ದುಷ್ಕರ್ಮಗಳೆಸಗಿದವರು, ನಾವು ಅವರನ್ನು ಸತ್ಯವಿಶ್ವಾಸವನ್ನಿರಿಸಿ
ಸತ್ಕರ್ಮವೆಸಗಿದವರಿಗೆ ಸಮಾನರಾಗಿ ಮಾಡುವೆವೆಂದೂ ಅವರಿಬ್ಬರ
ಜೀವನ ಮರಣಗಳು ಸಮಾನ ಸ್ವರೂಪದ್ದಾಗಿರುವುದೆಂದೂ
ಭಾವಿಸಿಕೊಂಡಿರುವರೇ? ಇವರು ಮಾಡುವ ತೀರ್ಮಾನ ಬಹಳ ಕೆಟ್ಟದು.
ಅಲ್ಲಾಹನು ಭೂಮಿ-ಆಕಾಶಗಳನ್ನು ಸತ್ಯಪೂರ್ಣವಾಗಿ ಸೃಷ್ಟಿಸಿರುತ್ತಾನೆ.
ಪ್ರತಿಯೊಬ್ಬ ಜೀವಿಗೆ ಅದರ ದುಡಿಮೆಯ ಪ್ರತಿಫಲ ನೀಡಲಿಕ್ಕಾಗಿ,
ಖಂಡಿತವಾಗಿಯೂ ಜನರ ಮೇಲೆ ಅಕ್ರಮವೆಸಗಲಾಗದು.
(ಪವಿತ್ರ ಕುರ್‌ಆನ್ 45: 21–22)

ಅಲ್ಲಾಹನು ನಿಮ್ಮನ್ನು ಯಾವುದಾದರೂ ಕಷ್ಟಕ್ಕೆ ಗುರಿಪಡಿಸಿದರೆ, ಸ್ವತಃ ಅವನ
ಹೊರತು ಆ ಕಷ್ಟವನ್ನು ದೂರೀಕರಿಸುವವನು ಇನ್ನಾರೂ ಇಲ್ಲ ಮತ್ತು ಅವನು
ನಿಮಗೆ ಹಿತವನ್ನು ಬಯಸಿದರೆ ಅವನ ಅನುಗ್ರಹವನ್ನು ತಡೆಯುವವನೂ
ಯಾರೂ ಇಲ್ಲ. ಅವನು ತನ್ನ ದಾಸರ ಪೈಕಿ ತನಗಿಷ್ಟ ಬಂದವರಿಗೆ ತನ್ನ ಅನುಗ್ರಹ
ಪ್ರದಾನ ಮಾಡುತ್ತಾನೆ. ಅವನು ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ.
(ಪವಿತ್ರ ಕುರ್‌ಆನ್ 10: 107)

ಶುಭ ಕೋರುವ

ಜಮಾಅತೆ ಇಸ್ಲಾಮೀ ಹಿಂದ್

ಬಾಗಲಕೋಟೆ & ನವನಗರ

- ❖ ಜಮಾಅತೆ ಇಸ್ಲಾಮೀ ಹಿಂದ್, ಮಹಿಳಾ ವಿಭಾಗ
- ❖ ಅಬುಲ್ ಕಲಾಮ್ ಆಝಾದ್ ಪ್ರಾಥಮಿಕ ಶಾಲೆ, ನವನಗರ & ಬಾಗಲಕೋಟೆ
- ❖ ಆಯಿಷಾ ಜಾಮಿಯಾತ್ ಸಾಲಿಹಾತ್ ಅರೆಬಿಕ್ ಕಾಲೇಜು, ಬಾಗಲಕೋಟೆ
- ❖ ಬೀಬಿ ಖತೀಜತುಲ್ ಖುಬ್ರ ಟೈಲರಿಂಗ್ ಇನ್ಸ್‌ಟಿಟ್ಯೂಟ್, ನವನಗರ
- ❖ ಸುಮಯ್ಯ ಟೈಲರಿಂಗ್ ಇನ್ಸ್‌ಟಿಟ್ಯೂಟ್, ಬಾಗಲಕೋಟೆ

Syed Akbar Pasha

Class 1 Contractor

Hindustan Construction Company

ENGINEERS & CONTRACTORS

OFFICE : Masjid-e-Quba Complex, Chirag Ali Colony,
MANVI - 584 123. Dist. Raichur. (Karnataka State).
Tel : 08538 - 221300. Cell : 94483 91797, 9632008757
Email : hccmanvi@gmail.com

ನಿಮ್ಮ ಬಾವಿಗಳ ನೀರು ನೆಲದೊಳಕ್ಕೆ ಇಂಗಿ ಹೋದರೆ,
ಆ ನೀರಿನ ಹರಿಯುವ ಚಿಲುಮೆಗಳನ್ನು ನಿಮಗೆ ಪುನಃ ಹೊರತಂದು
ಕೊಡುವವರು ಯಾರೆಂದು ನೀವು ಯೋಚಿಸಿದ್ದೀರಾ?
ಎಂದು ಇವರೊಡನೆ ಕೇಳಿರಿ.

ಪವಿತ್ರ ಕುರ್‌ಆನ್ 67:30

A WELL WISHER, RAICHUR

REGD. NO.KA/SK/MNG/477/2018-20
LICENCED TO POST WPP LICENCE NO. SK/WPP/MNG/97/2018-20

Abdul Jaleel M.H.
+91 9845 632 359

M. Mudassir Sheikh
+91 9620 663 580

DESIGN+

Your dream is our blue print...

Engineers | Architects | Interiors

Mangalore Gate 2nd Floor, Bendoorwell, Mangalore - 575 002
E-mail: Office@designplusmangalore.com,
Website: www.designplusmangalore.com, Ph: 0824 - 4266388